ಸ್ವ ಉದ್ಯೋಗಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳು: ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ವ್ಯಾಪ್ತಿಯಲ್ಲಿ ಒಂದು ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್
ಪದವಿಗಾಗಿ ಅರ್ಪಿಸಿದ ನಿಬಂಧ

ನೋಂದಣಿ ಸಂಖ್ಯೆ:

೧೬೧೧೧೧೦೨೦೦೫೨

ಸ್ವ ಉದ್ಯೋಗಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳು: ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ವ್ಯಾಪ್ತಿಯಲ್ಲಿ ಒಂದು ಅಧ್ಯಯನ

ಮಾತೆಂಬುದು ಜ್ಯೋತಿರ್ಲಿಂಗ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್
ಪದವಿಗಾಗಿ ಅರ್ಪಿಸಿದ ನಿಬಂಧ

ನೋಂದಣಿ ಸಂಖ್ಯೆ:

೧೬೧೧೧೧೦೩೦೦೫೩

ವಿಷಯಾನುಕ್ರಮಣಿಕೆ

ಅಧ್ಯಾಯ-೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

೧.೧ ಪೀಠಿಕೆ

ಮಾನವ ಜನಾಂಗದ ಸೃಷ್ಟಿ ಪ್ರಕ್ರಿಯೆಯ ಕೇಂದ್ರ ಮಹಿಳೆ. ಮಗುವೊಂದಕ್ಕೆ 'ಮನೆಯೇ ಮೊದಲ ಪಾಠ ಶಾಲೆ, ತಾಯಿಯೇ ಮೊದಲ ಗುರು' ಹೀಗೆ ಮಹಿಳೆಯು ಪುರುಷರಿಗಿಂತ ಮೇಲಿನ ಸ್ಥಾನದಲ್ಲಿದ್ದರೂ ಅನೇಕ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕಾರಣಗಳಿಂದಾಗಿ ಸಾಮಾಜಿಕ ಜೀವನದ ಪ್ರಧಾನ ಧಾರೆಯಲ್ಲಿ ಆಕೆ ಅಂಚಿಗೆ ನೂಕಲ್ಪಟ್ಟಿದ್ದಾಳೆ. ಹತ್ತೊಂಬಂತ್ತನೇ ಶತಮಾನದ ಆದಿಭಾಗದಲ್ಲಿ ಹುಡುಗಿಯರಿಗೆ ತೆರೆದಿದ್ದ ಹಾದಿಯೊಂದೆ-ಒಂದಿಷ್ಟು ಓದು ನಂತರ ಮದುವೆ. ಹಿಂದಿನ ಕಾಲದಲ್ಲಿ ಮನೆಯೊಂದರಲ್ಲಿ ಹೆಣ್ಣು ಮಗು ಹುಟ್ಟಿತೆಂದರೆ ಮನೆಯವರು ಚಿಂತೆಗೊಳಗಾಗುತ್ತಿದ್ದರು ಅದಕ್ಕೆ ಕಾರಣ, ಹೆಣ್ಣು ಮಗುವು ಮುಂದೊಂದು ದಿನ ಪರರ ಮನೆಗೆ ವಿವಾಹವಾಗಿ ಹೋಗುವುದರಿಂದ ಅವಳ ಶಿಕ್ಷಣ, ಮದುವೆಯ ಖರ್ಚು ಜೊತೆಗೆ ವರದಕ್ಷಿಣೆ ಖರ್ಚು ಮನೆಯವರಿಗೆ ಚಿಂತೆಗೊಳಗಾಗುವಂತೆ ಮಾಡುತ್ತಿತ್ತು. ಹೀಗೆ ಅವಳಿಂದ ಖರ್ಚು ಜಾಸ್ತಿ ಹಾಗೂ ಅವಳಿಂದ ಬರುವ ಆದಾಯ ಕಡಿಮೆ ಎಂಬ ಭಾವನೆಯಿಂದ ಅವಳಿಗೆ ಸಿಗಬೇಕಾದ ಉನ್ನತ ಶಿಕ್ಷಣದಿಂದ ಅವಳು ವಂಚಿತಳಾಗುತ್ತಿದ್ದಾಳೆ. ಡಾ.ಅಮರ್ತ್ಯಸೇನ್ ಅವರು "ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯಲ್ಲಿ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಬೇಕು" ಎಂದು ಹೇಳಿದ್ದಾರೆ (ರಾಚಪ್ಪಾಜಿ, ೨೦೧೧)[1]. ೧೮೨೪ರಲ್ಲಿ ಕ್ರಿಶ್ಚಿಯನ್ ಮಿಷನರಿಗಳಿಂದ ಹೆಣ್ಣು ಮಕ್ಕಳಿಗಾಗಿ ಶಾಲೆಯನ್ನು ತೆರೆಯಲಾಯಿತು. ಮಹಾರಾಷ್ಟ್ರದಲ್ಲಿ ಜ್ಯೋತಿ ಬಾಪುಲೆಯವರು ೧೮೪೮ ರಲ್ಲಿ ಕನ್ಯಾ ಶಾಲೆಯನ್ನು ಪ್ರಾರಂಭಿಸಿದರು. ಇಂತಹ ಪ್ರಯತ್ನಗಳು 'ಹೆಣ್ಣೊಂದು ಕಲಿತರೆ ಮನೆಯೊಂದು ಕಲಿತಂತೆ' ಎಂಬುದಕ್ಕೆ ಅರ್ಥ ನೀಡುವಲ್ಲಿ ಯಶಸ್ವಿಯಾದವು.

ಭಾರತಕ್ಕೆ ಸ್ವಾತಂತ್ರ್ಯ ದೊರಕುವ ಮುಂಚೆ ಓದಿವಿದ್ಯಾವಂತರಾದ ಕೆಲವು ಮಹಿಳೆಯರು ಓದು ಮುಗಿಸಿದ್ದರೂ, ಮನೆ ಹೊರಗಡೆ ಹೋಗಿ ದುಡಿಯುತ್ತಿದ್ದ ಮಹಿಳೆಯರ ಸಂಖ್ಯೆ ಕಡಿಮೆ. ಇದಕ್ಕೆ ಕಾರಣ ಜನರು ಆಡಿಕೊಳ್ಳುವರು ಎಂದು (ವೆಂಕೋಬರಾವ್, ೨೦೦೦)[2]. ಹಾಗಾಗಿ ಆಕೆ ಮನೆಯವರನ್ನೇ ಅವಲಂಬಿಸಬೇಕಾದ ಪರಿಸ್ಥಿತಿಯಿತ್ತು. ವಿವಾಹದ ನಂತರದ ಮಹಿಳೆಯರ ಇಡೀ ಬದುಕು ಮನೆಕೆಲಸದಲ್ಲಿ, ಮಕ್ಕಳ ಆರೈಕೆಯಲ್ಲಿ ಮುಳುಗಿ ಹೋಗುತ್ತಿತ್ತು. ೧೯ನೇ ಮಧ್ಯಭಾಗದ ವೇಳೆಗೆ ಬ್ರಿಟಿಷ್ ಇಂಡಿಯಾದ ಭಾಗಗಳಲ್ಲಿ ಸತಿಪದ್ಧತಿ, ಹೆಣ್ಣು ಶಿಶುಗಳ ಹತ್ಯೆ, ಬಹುಪತ್ನಿತ್ವ, ಬಾಲ್ಯ ವಿವಾಹ, ಪರ್ದಾಪದ್ಧತಿ, ಸ್ತ್ರೀ ಶಿಕ್ಷಣಕ್ಕಿದ್ದ ನಿರ್ಬಂಧ, ದೇವದಾಸಿ ಪದ್ಧತಿ, ವಿವಾಹದೊಳಗಿನ ದೌರ್ಜನ್ಯ

ಅಸಾಧ್ಯವೆನಿಸಿದಾಗ ಮಹಿಳೆಯರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಹೀಗೆ ಹಲವಾರು ಹಿಂಸೆಯ ಸಮಸ್ಯೆಗಳಿಂದ ಹೊರಬರುವ ಉದ್ದೇಶದಿಂದ ಮಹಿಳೆಯರು ಓದು ಇಲ್ಲದಿದ್ದರೂ ಹೊರ ಬಂದು ಉದ್ಯೋಗ ಮಾಡುವ ಮೂಲಕ ತಮ್ಮ ಕಾಲ ಮೇಲೆ ನಿಲ್ಲುವ ಪಣವನ್ನು ತೊಟ್ಟಿದ್ದಾರೆ.

೧.೨ ಮಹಿಳೆ ಮತ್ತು ದುಡಿಮೆ

ಜೀವಿಸುವುದಕ್ಕೆ ಏನೇನು ಕಾರ್ಯಗಳನ್ನು/ಶ್ರಮಗಳನ್ನು ಮಾಡುತ್ತೇವೆಯೋ ಅದನ್ನು ದುಡಿಮೆ ಎನ್ನುತ್ತೇವೆ. ದುಡಿಮೆಗೂ ಲಿಂಗತ್ವಕ್ಕೂ ಸಂಬಂಧವಿದೆ. ದುಡಿಮೆಗಾರರು ಎಂದಾಕ್ಷಣ ಕಣ್ಣೆದುರಿಗೆ ಬರುವ ಚಿತ್ರಣ ಪುರುಷರದ್ದು. ಸೇವೆ ಎಂದಾಕ್ಷಣ ಮಹಿಳೆಯರ ಚಿತ್ರಣ ಬರುತ್ತದೆ. (ಶ್ರೀಮತಿ ಮತ್ತು ಇತರರು, ೨೦೦೭)[3]. ಆದುದರಿಂದ "ಉದ್ಯೋಗಂ ಪುರುಷ ಲಕ್ಷಣಂ" ಎಂಬ ನಾಣ್ಣುಡಿ ಪ್ರಚಲಿತದಲ್ಲಿದೆ. ಗುಡಿಸುವ, ಒರೆಸುವ, ಬಟ್ಟೆ ತೊಳೆಯುವ, ಅಡುಗೆ ಮಾಡುವ, ಆರೈಕೆ ಮಾಡುವ ಕೆಲಸಗಳು, ನರ್ಸ್, ಟೀಚರ್, ಫ್ಯಾಶನ್ ಡಿಸೈನರ್ ಎಂದಾಕ್ಷಣ ಮಹಿಳೆ ಹಾಗೂ ಕಟ್ಟಡ ಕಟ್ಟುವ, ಟ್ರಕ್ ಚಲಾಯಿಸುವ, ಇಂಜಿನಿಯರ್, ಬಡಗಿ, ಸೈನಿಕ, ವಿಜ್ಞಾನಿ ಎಂದಾಕ್ಷಣ ಪುರುಷರ ಚಿತ್ರ ಕಣ್ಣ ಮುಂದೆ ಬರುತ್ತದೆ.

ಕೆಲವು ಸಾಮಾಜಿಕ ತಜ್ಞರು ಹಾಗೂ ಮಹಿಳಾ ಅಧ್ಯಯನಕಾರರು, ತನ್ನ ಸ್ವ ಸಾಮರ್ಥ್ಯದಿಂದ ಅಥವಾ ಸಮಾಜದ ಪ್ರಭಾವದಿಂದಲೂ ಅಥವಾ ದಿನನಿತ್ಯ ಕೂಲಿ ಆಧಾರದ ಮೇಲೆ ಕೆಲಸ ಮಾಡುವ ಮಹಿಳೆಯನ್ನು ದುಡಿಯುವ ಮಹಿಳೆ ಎಂದು ಗುರುತಿಸಿದ್ದಾರೆ. ಇನ್ನು ಕೆಲವರು ತನ್ನ ಸೇವೆಗೆ ಬೆಲೆ ಬಯಸಿ ತನ್ನ ಮನೆಯಿಂದ ಹೊರಗೆ ದುಡಿಯುವವಳನ್ನು ದುಡಿಯುವ ಮಹಿಳೆ ಎಂದು ಗುರುತಿಸಲಾಗಿದೆ. ದೇಶವೊಂದರ ಆರ್ಥಿಕ ಹಿಂದುಳಿಯುವಿಕೆ ಇದ್ದರೆ ಆಗ ಮಹಿಳೆಯರು ಅನಕ್ಷರಸ್ಥರೂ, ವೃತ್ತಿ ಕೌಶಲ್ಯವಿಲ್ಲದವರೂ ಆಗಿರುತ್ತಾರೆ. ಹೀಗೆ ಅವರು ಉದ್ಯೋಗವನ್ನು ಹುಡುಕುವುದು ಕಡಿಮೆ. ಮಕ್ಕಳ ಸಂಖ್ಯೆ ಹೆಚ್ಚಾಗಿದ್ದರೆ ಆಕೆ ಕೂಲಿ ಉದ್ಯೋಗವನ್ನು ಮಾಡುವುದಿಲ್ಲ (ಶಿವಚಿತ್ತಪ್ಪ, ೨೦೧೧)[4].

"ಮಹಿಳೆಯು ಉದ್ಯಮವೊಂದರ ಮಾಲಿಕಳಾಗಿದ್ದು, ಒಟ್ಟು ಬಂಡವಾಳದಲ್ಲಿ ಕನಿಷ್ಠ ೫೧ ಶೇಕಡಾ ಪಾಲನ್ನು ಹೊಂದಿದ್ದರೆ ಮತ್ತು ಒಟ್ಟು ಉದ್ಯೋಗ ಸೃಷ್ಟಿಯಲ್ಲಿ ಕೊನೆಪಕ್ಷ ಶೇ. ೫೧ನ್ನು ಮಹಿಳೆಯರಿಗೆ ನೀಡಿದ್ದರೆ, ಅಂತಹ ಉದ್ಯಮಿಯನ್ನು ಮಹಿಳಾ ಉದ್ಯಮಿ" ಎಂದು ಭಾರತ ಸರಕಾರ ವ್ಯಾಖ್ಯಾನಿಸುತ್ತದೆ (ಜಯಶೀಲ ಮತ್ತು ಇತರರು, ೨೦೦೭)[5].

ಮಹಿಳೆ ಉದ್ಯೋಗ ರಂಗಕ್ಕೆ ಬಂದಾಗ ಮೇಲಧಿಕಾರಿ ಅವಳ ಮೇಲೆ ಅನಗತ್ಯವಾಗಿ ರೇಗಿದಾಗ ಅಥವಾ ಲೈಂಗಿಕ ಕಿರುಕುಳವನ್ನು ನೀಡಿದಾಗ ಪ್ರತಿಭಟಿಸುವ ಮನಸ್ಸಿದ್ದರೂ, ಧೈರ್ಯ ತಾಳಲು ಅಳುಕುತ್ತಾಳೆ. ಪ್ರಸ್ತುತ ದೈಹಿಕ ದುಡಿಮೆಗೆ

ಸಂಬಂಧಿಸಿದಂತೆ ಕೂಲಿ ತಾರತಮ್ಯ ಕಂಡುಬರುತ್ತಿದೆ. ಮಹಿಳೆಯರು ತಾವು ಯೋಚಿಸಿದ ರೀತಿಯಲ್ಲಿ ಬದುಕುವ ಸ್ವಾತಂತ್ರ್ಯದಿಂದ ವಂಚಿತರಾಗುತ್ತಿದ್ದಾರೆ. ಮಹಿಳೆಯರು ಸಂಕೋಚ ಬಿಟ್ಟು ತಮ್ಮ ಸಮಸ್ಯೆಗಳನ್ನು ಮೇಲಾಧಿಕಾರಿಗಳ ಎದುರು ಮಂಡಿಸಿ ತಮ್ಮ ಮೂಲಭೂತ ಹಕ್ಕುಗಳಿಗೆ ಹೋರಾಡಬೇಕು (ನೇಮಿಚಂದ್ರ ೨೦೦೧)[6].

ಬಡತನದಲ್ಲಿ ಹುಟ್ಟಿ ಬೆಳೆದಿರಲಿ ಅಥವಾ ಚಿನ್ನದ ಚಮಚವನ್ನೇ ಬಾಯಲ್ಲಿಟ್ಟುಕೊಂಡು ಬಂದಿರಲಿ ನಮ್ಮ ದೇಶದಲ್ಲಿರುವ ಹೆಣ್ಣು ಮಕ್ಕಳ ಸಾಮಾಜಿಕ ಸ್ಥಿತಿಯಲ್ಲಿ ಬದಲಾವಣೆ ಕಂಡು ಬಂದಿಲ್ಲ (ರತ್ನಮ್ಮ ಮತ್ತು ಗಾಯತ್ರಿ, ೨೦೦೫)[7]. ಕುಟುಂಬ ಎಂಬ ಘಟಕವು ಎರಡು ಪಕ್ಷಗಳಿಂದ ರಚಿತವಾಗಿರುತ್ತದೆ. ಆ ಎರಡು ಪಕ್ಷಗಳೆಂದರೆ ಗಂಡ ಮತ್ತು ಹೆಂಡತಿ. ಕುಟುಂಬದಲ್ಲಿ ಇವರ ಸಂಬಂಧವನ್ನು 'ಎತ್ತಿನ ಗಾಡಿಯ ಗಾಲಿಗಳ ಹಾಗೆ' ಎಂದು ಹೇಳಲಾಗುತ್ತದೆ. ಎಂದರೆ ಕುಟುಂಬದ ನಿರ್ವಹಣೆಯಲ್ಲಿ ಇಬ್ಬರಿಗೂ ಸಮಾನವಾದ ಜವಬ್ದಾರಿ, ಹಕ್ಕುಗಳು, ಕರ್ತವ್ಯಗಳಿರುತ್ತವೆ "ಪ್ರತಿಯೊಬ್ಬ ಯಶಸ್ವೀ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ" ಎಂಬ ಮಾತಿನಂತೆ ಪುರುಷರು ಮಾಡುವ ಪ್ರತಿಯೊಂದು ಒಳ್ಳೆಯ ಕೆಲಸಗಳಲ್ಲಿ ಮಹಿಳೆಯು ಸಹಭಾಗಿಯಾಗಿ ಪುರುಷರಿಗೆ ಬೆಂಬಲ ಕೊಡುತ್ತಾಳೆ. 'ಎಲ್ಲಿ ಮಹಿಳೆಯರಿಗೆ ಗೌರವವಿದೆಯೋ ಅಲ್ಲಿ ದೇವತೆಗಳು ವಾಸಿಸುತ್ತಾರೆ' ಎಂಬ ಮಾತೊಂದಿದೆ. ಆದರೆ ಮಹಿಳೆಯನ್ನು ಕೇವಲ ವಸ್ತುವಿನಂತೆ ನೋಡುವ ಸಮಾಜ ಇನ್ನೂ ಹಾಗೆ ಇದೆ. ಮಹಿಳೆಯೊಬ್ಬಳ ದುಡಿಮೆಯ ಯಶಸ್ವಿಯ ಹಿಂದೆ ಅವಳ ಧೈರ್ಯ, ಆತ್ಮವಿಶ್ವಾಸ, ಬದುಕುವ ಹಠ ಮತ್ತು ಪ್ರಾಮಾಣಿಕತೆ ಮಾತ್ರ ಕಂಡು ಬರುತ್ತದೆ. ಝಾನ್ಸಿ ರಾಣಿ ಲಕ್ಷ್ಮೀ ಬಾಯಿ, ಕಿತ್ತೂರು ರಾಣಿ ಚೆನ್ನಮ್ಮ ಇಂದಿರಾ ಗಾಂಧಿ, ಸರೋಜಿನಿ ನಾಯ್ಡು ಮುಂತಾದವರು ತೊಟ್ಟಿಲು ತೂಗುವ ಕೈ ರಾಜ್ಯ ಆಳುತ್ತದೆಯೇ? ಎಂಬ ಪ್ರಶ್ನೆಗೆ ಸಮರ್ಥನೆ ನೀಡಿದ್ದಾರೆ.

ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ.೪೮.೧೮ ಮಹಿಳೆಯರಿದ್ದಾರೆ. ವಿಶ್ವದ ಜನಸಂಖ್ಯೆಯಲ್ಲಿ ಮಹಿಳೆಯರು ಸರಿಸುಮಾರು ಶೇ ೪೯.೯ ರಷ್ಟಿದ್ದಾರೆ.

ಮಹಿಳೆಯರು ಮಾಡುವ ಕೆಲಸ ಎರಡು ರೀತಿಯದ್ದಾಗಿದೆ

೧. ಆದಾಯ ತರುವಂತಹ ಕೆಲಸ

೨. ಆದಾಯ ತರದಂತಹ ಕೆಲಸ

ಪುರುಷರಂತೆ ಅನೇಕ ಮಹಿಳೆಯರು ಮನೆಯ ಹೊರಗೆ ಉತ್ಪಾದನಾ ದುಡಿಮೆ ಮಾಡುತ್ತಾರೆ. ಅಲ್ಲದೆ ಅವರು ಮನೆಯೊಳಗೆ ಅನೇಕ ಉತ್ಪಾದನಾ ಚಟುವಟಿಕೆ ನಿರ್ವಹಿಸುತ್ತಾರೆ. ಇವೆಲ್ಲಕ್ಕಿಂತ ಮಿಗಿಲಾಗಿ ಪುರುಷರಿಗೆ ಅಸಾಧ್ಯವಾದ

'ಸಂತಾನೋತ್ಪತ್ತಿ' ಕಾರ್ಯವನ್ನು ಮಾಡುತ್ತಿದ್ದಾಳೆ. ಮಹಿಳೆಯರ ಪರಿಶ್ರಮವು ಕಣ್ಣಿಗೆ ಗೋಚರಿಸುತ್ತದೆ. ಆದರೆ ಅವರ ಕಾಣಿಕೆಯು ಅಗೋಚರವಾಗಿರುತ್ತದೆ (ಶ್ರೀಮತಿ ಮತ್ತು ಇತರರು, ೨೦೦೭).

ಹೆಣ್ಣು ತಮ್ಮ ಸಮಾನಕ್ಕೆ ಏರುವುದನ್ನು ಬಹುತೇಕ ಪುರುಷರು ಇಷ್ಟಪಡುವುದಿಲ್ಲ. ಸಾಂಪ್ರದಾಯಿಕ ರಿವಾಜುಗಳಿಂದ ಹೊರಬರಲು ಪ್ರಯತ್ನಿಸಿದರೆ ಆಕೆಯನ್ನು ಗಂಡುಬೀರಿ ಎಂದು ಸಮಾಜ ಹೀಯಾಳಿಸುತ್ತದೆ (ಮನೋರಮ, ೨೦೦೪)[8].

ಸಮಾಜದಲ್ಲಿ ಮಹಿಳೆ ಶ್ರಮಕ್ಕೆ ಮಾನವ ಬಂಡವಾಳದ ಪ್ರಮಾಣ ಕಡಿಮೆ ಇರುತ್ತದೆ, ಇದನ್ನು ತಾತ್ವಿಕ ಸಿದ್ಧಾಂತಗಳು ದೃಢೀಕರಿಸಿವೆ. ಸೆನೆಕಾ ಫಾಲ್ಸ್ ೧೮೪೮ರಲ್ಲಿ ಮೊದಲ ಮಹಿಳಾ ಸಮಾವೇಶದ ಮೂಲ ಮಂತ್ರವಾದ 'ಡಿಕ್ಲರೇಷನ್ ಆಫ್ ಸೆಂಟಿಮೆಂಟ್ಸ್' ಎಲ್ಲಾ ಪುರುಷರನ್ನು ಸಮಾನರನ್ನಾಗಿ ಸೃಷ್ಟಿಸಲಾಗಿದೆ ಎಂದು ಸಾರಿತು (ನೇಮಿಚಂದ್ರ, ೨೦೧೫)[9].

ವಿಶ್ವಸಂಸ್ಥೆಯು ೧೯೭೦ರಲ್ಲಿ ಇಡೀ ಪ್ರಪಂಚದ ಗಮನವನ್ನು ಮಹಿಳೆಯರ ಸ್ಥಿತಿಗತಿಗಳ ಮೇಲೆ ಕೇಂದ್ರೀಕರಿಸಲು ಹೇಳಿತು. ೧೯೭೫ನ್ನು ಅಂತರಾಷ್ಟ್ರೀಯ ಮಹಿಳಾ ವರ್ಷವೆಂದೂ, ೧೯೭೫-೮೫ನ್ನು ಮಹಿಳಾ ದಶಕವೆಂದೂ ಘೋಷಿಸಿತು (ಶ್ರೀಮತಿ ಎಚ್ ಎಸ್, ೨೦೦೧)[10].

ಪ್ರಸ್ತುತ ಉದ್ಯೋಗವಕಾಶಗಳಿಗೆ ಹೆಚ್ಚು ಹೆಚ್ಚಾಗಿ ಮಹಿಳೆಯರನ್ನೇ ಆಯ್ಕೆ ಮಾಡುತ್ತಿದ್ದಾರೆ ಇದಕ್ಕೆ ಕಾರಣ ಮಹಿಳೆಯರು ಭ್ರಷ್ಟಾಚಾರದಿಂದ ದೂರವಿದ್ದು ಕೆಲಸಗಳಲ್ಲಿ ಆಸಕ್ತಿ, ಕಾಳಜಿ ಮತ್ತು ನಂಬಿಕೆಯುಳ್ಳವರಾಗಿರುತ್ತಾರೆ. ಜನಸಂಖ್ಯೆಯನ್ನು ಕಡಿಮೆ ಮಾಡಿ, ಬಡತನ ನಿರ್ಮೂಲನೆ ಮಾಡಿದರೆ ಭಾರತ ಅಭಿವೃದ್ಧಿ ಹೊಂದಿದ ದೇಶಗಳಿಗಿಂತ ಮುಂದುವರಿಯುತ್ತದೆ. ಹಾಗೆ ಮುಂದುವರೆಯಲು ಮಹಿಳಾ ಶಿಕ್ಷಣ ಮತ್ತು ಉದ್ಯೋಗವಕಾಶಗಳನ್ನು ಕೊಡಬೇಕು ಎಂದು ನೋಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯಸೇನ್ ಹೇಳಿದ್ದಾರೆ (ರತ್ನಮ್ಮ ಮತ್ತು ಗಾಯತ್ರಿ, ೨೦೦೫).

ಮಹಿಳೆಯರ ಉದ್ಯೋಗದಲ್ಲಿ ಇನ್ನೂ ಹಲವಾರು ಸುಧಾರಣೆಗಳಾಗಬೇಕಾಗಿವೆ. ಮಹಿಳೆಯರಿಗೆ ಯಾಂತ್ರಿಕ ಜ್ಞಾನವಿಲ್ಲದರುವುದರಿಂದ ಅವರು ಕಡಿಮೆ ಸಂಬಳದ ಸಾಂಪ್ರದಾಯಿಕ ಉದ್ಯೋಗವನ್ನೇ ಇನ್ನೂ ಅವಲಂಬಿಸಿಕೊಂಡಿದ್ದಾರೆ. ಮಹಿಳೆಯ ದುಡಿಮೆಯನ್ನು ಹಣದ ರೂಪದಲ್ಲಿ ಮಾಪನ ಮಾಡಲು ಸಾಧ್ಯವಿಲ್ಲ. ಮಹಿಳೆಯಲ್ಲಿರುವ ದುಡಿಯುವ ಸಾಮರ್ಥ್ಯ ಪುರುಷರಷ್ಟಿದೆಯೋ? ಕಡಿಮೆ ಇದೆಯೋ ಅಥವಾ ಜಾಸ್ತಿ ಇದೆಯೋ? ಎಂಬುವುದು ಮುಖ್ಯವಾದುದಲ್ಲ. ಮಹಿಳೆಯರಲ್ಲಿ ದುಡಿಯುವ ಛಲವಿರುವುದು ಮುಖ್ಯವಾದದ್ದು.

ನಾವು ಮಹಿಳಾವಾದಿ ಅಥವಾ ಪುರುಷವಾದಿ ಆಗುವ ಬದಲು ಮಾನವತಾವಾದಿಯಾಗಬೇಕು. "ಸರ್ವೇಜನಾ ಸುಖಿನೋ ಭವಂತು" ಎಂದು ಬಯಸುವವರಾಗಿರಬೇಕು. ಸರ್ವಜನರಲ್ಲಿ ಮಹಿಳೆಯರು ಕೂಡ ಇದ್ದಾರೆ. ಅವರೆಲ್ಲರೂ ಸುಖದಿಂದ ಇದ್ದರೆ ಮಾತ್ರ "ಸರ್ವೇಜನಾ ಸುಖಿನೋ ಭವಂತು" ಎಂಬ ಮಾತಿಗೆ ಅರ್ಥ ಬರುತ್ತದೆ (ಶ್ರೀಮತಿ, ೨೦೦೧).

ಉದ್ಯೋಗ ಎಂದರೇನು?

ಕೆಲಸವು ಮಾನವ ಜೀವನದ ಒಂದು ಅವಿಭಾಜ್ಯ ಭಾಗವಾಗಿದೆ. ದೈನಂದಿನ ಜೀವನ ನಡೆಸಲು ದುಡಿಮೆಯು ಅತ್ಯಗತ್ಯವಾಗಿದೆ. ದಿನನಿತ್ಯದ ಖರ್ಚುಗಳನ್ನು ನಿಭಾಯಿಸಿಕೊಳ್ಳುವುದರಲ್ಲಿ ಉದ್ಯೋಗವು ಪ್ರಮುಖ ಪಾತ್ರ ವಹಿಸುತ್ತದೆ. ಆದುದರಿಂದ ಉದ್ಯೋಗವು ಜೀವನಕ್ಕೆ ಒಂದು ಆಧಾರ ಸ್ತಂಭವಾಗಿದೆ.

ಉದ್ಯೋಗ ಎನ್ನುವುದು ಉದ್ಯೋಗದಾತ ಮತ್ತು ಉದ್ಯೋಗಿಯ ನಡುವಿನ ಒಪ್ಪಂದವಾಗಿದೆ. ಇಲ್ಲಿ ಉದ್ಯೋಗದಾತನೆಂದರೆ ಉದ್ಯೋಗವಕಾಶ ಕಲ್ಪಿಸಿ, ಕೆಲಸಕ್ಕೆ ತಕ್ಕುದಾದ ವೇತನವನ್ನು ನೀಡುವವನು. ಉದ್ಯೋಗಿಯೆಂದರೆ, ಉದ್ಯೋಗದಾತ ಕಲ್ಪಿಸಿದ ಉದ್ಯೋಗವಕಾಶವನ್ನು ಉಪಯೋಗಿಸಿ ಕೆಲಸ ಕೈಗೊಳ್ಳುವವನು. ಇಲ್ಲಿ ಉದ್ಯೋಗಿಯು ಉದ್ಯೋಗದಾತನ ನಿರ್ದೇಶನದಂತೆ ಕೆಲಸ ನಿರ್ವಹಿಸುತ್ತಾನೆ ಹಾಗೂ ಅದಕ್ಕೆ ಪ್ರತಿಯಾಗಿ ಉದ್ಯೋಗದಾತನು ಉದ್ಯೋಗಿಗೆ ವೇತನವನ್ನು ನೀಡುತ್ತಾನೆ. ಇಂಗ್ಲೀಷ್‌ನ ಖ್ಯಾತ ಕವಿ ಪಿ.ಬಿ ಶೆಲ್ಲಿ ಅವರು ದುಡಿಮೆಗಾರರ ಬಗ್ಗೆ ಈ ರೀತಿ ಹೇಳಿದ್ದಾರೆ 'ಬೀಜ ಬಿತ್ತಿದೆ ನೀನು, ತಿನ್ನುವವರು ಬೇರೆ. ಸಂಪತ್ತು ಸೃಷ್ಟಿಸಿದೆ ನೀನು, ಹೊಂದುವವರು ಬೇರೆ. ಶಸ್ತ್ರಗಳನ್ನು ತಯಾರಿಸಿದೆ ನೀನು, ಉಪಯೋಗಿಸುವವನು ಬೇರೆ (ಬಿ.ಎಚ್ ಆಂಜನಪ್ಪ, ೨೦೦೬)[11].

ಸ್ವ-ಉದ್ಯೋಗ ಎಂದರೇನು?

ಸ್ವ-ಉದ್ಯೋಗವು ಸ್ವಂತ ಬಂಡವಾಳ ಅಥವಾ ಎರವಲು ಪಡೆದ ನಿಧಿಯನ್ನು ಬಳಸಿಕೊಂಡು ಮತ್ತು ಸ್ವಂತ ಜ್ಞಾನ, ಬುದ್ಧಿವಂತಿಕೆ, ದಕ್ಷತೆ ಮತ್ತು ಅಪಾಯವನ್ನು ತೆಗೆದುಕೊಳ್ಳುವ ಮೂಲಕ ಜೀವನವನ್ನು ನಡೆಸುವ ಪ್ರಕ್ರಿಯೆಯಾಗಿದೆ. ವ್ಯಕ್ತಿಯು ತಾನೇ ಸ್ವತಃ ಉತ್ಪಾದನಾ ಕಾರ್ಯದಲ್ಲಿ ತೊಡಗಿ, ವಸ್ತುಗಳನ್ನು ಕೊಳ್ಳುವ ಮತ್ತು ಮಾರಾಟ ಮಾಡುವ ವ್ಯವಹಾರ ಮಾಡುವುದೇ ಸ್ವ ಉದ್ಯೋಗ (ಜಯಶೀಲ ಮತ್ತು ಇತರರು, ೨೦೦೭).

ಸ್ವಯಂ ಉದ್ಯೋಗಿ ಎನ್ನುವುದು ಒಬ್ಬ ನೌಕರಿಗಾಗಿ ವೇತನ ಪಡೆಯುವ ಅಥವಾ ವೇತನವನ್ನು ಪಾವತಿಸುವ ಬದಲು ಒಬ್ಬ ವ್ಯಕ್ತಿಯು ತಾನೇ ಸ್ವತಃ ಕೆಲಸ ಮಾಡುವ ಪರಿಸ್ಥಿತಿಯಾಗಿದೆ. ಇಲ್ಲಿ ಉದ್ಯೋಗದಾತ ಮತ್ತು ಉದ್ಯೋಗಿಯು ಒಬ್ಬನೇ ಆಗಿರುತ್ತಾನೆ. ಸ್ವ ಉದ್ಯೋಗಿಯು ಬಂದ ಆದಾಯವನ್ನು ಲಾಭದಾಯಕ ಕಾರ್ಯಚರಣೆಗಳನ್ನು ನಡೆಸುವ ಮೂಲಕ ತನ್ನ ವ್ಯಾಪಾರ ಅಥವಾ ವ್ಯವಹಾರವನ್ನು ನಿರ್ವಹಿಸುತ್ತಾನೆ. ಜನರು ತಮ್ಮನ್ನು ತಾವು ಸ್ವಯಂ–ಉದ್ಯೋಗಿಗಳಾಗಿ ತೊಡಗಿಸಿಕೊಳ್ಳಲು ನಿಜವಾಗಿಯೂ ಭಯಪಡುತ್ತಾರೆ ಏಕೆಂದರೆ ವ್ಯವಹಾರವನ್ನು ಪ್ರಾರಂಭಿಸುವುದಕ್ಕೆ ಸಾಕಷ್ಟು ಬಂಡವಾಳ ಬೇಕಾಗುತ್ತದೆ ಎಂಬುದು ಸಾಮಾನ್ಯ ಗ್ರಹಿಕೆಯಾಗಿದೆ.

ಸ್ವ–ಉದ್ಯೋಗವನ್ನು ಮಾಡಲು ಅನೇಕ ರೀತಿಯ ಅವಕಾಶಗಳಿವೆ. ಸ್ವ ಉದ್ಯೋಗದಲ್ಲಿ ೧. ಕೃಷಿಯಾಧಾರಿತ ೨. ಗುಡಿ ಕೈಗಾರಿಕೆ ೩. ಸಣ್ಣ ಕೈಗಾರಿಕೆ ೪. ವಾಣಿಜ್ಯಧಾರಿತ ೫. ಸೇವಾ ಕ್ಷೇತ್ರದಲ್ಲಿ ಸ್ವ ಉದ್ಯೋಗ ಎಂದು ವಿಂಗಡಿಸಲಾಗುವುದು.

ಕೃಷಿಯಾಧಾರಿತ ಸ್ವ ಉದ್ಯೋಗ

ಇದರಲ್ಲಿ ಮುಖ್ಯವಾಗಿ ಹೈನುಗಾರಿಕೆ, ಕೋಳಿ ಸಾಕಾಣೆ, ತೋಟಗಾರಿಕೆ, ಹಂದಿ ಸಾಕಾಣೆ, ಜೇನು ಸಾಕಾಣೆ, ಕುರಿ ಸಾಕಾಣೆ, ಮೀನುಗಾರಿಕೆ, ರೇಷ್ಮೆ ಕೃಷಿ, ಅಣಬೆ ಕೃಷಿ, ಹತ್ತಿ, ಹೂವು ಮತ್ತು ತರಕಾರಿ ಬೆಳೆಸುವುದು, ಸಿಗಡಿ ಕೃಷಿ ಮುಂತಾದವುಗಳು ಕಂಡು ಬರುತ್ತವೆ.

ಗುಡಿ ಕೈಗಾರಿಕೆಗಳು

ಮೇಣದ ಬತ್ತಿ ತಯಾರಿಕೆ, ಅಗರ ಬತ್ತಿ ಅಥವಾ ಊದು ಬತ್ತಿ ತಯಾರಿಕೆ, ಬುಟ್ಟಿ ಹೆಣೆಯುವುದು, ಹಗ್ಗ ಹೆಸೆಯುವುದು, ಹೂ ಮಾಲೆ ಮಾಡುವುದು, ಮಣ್ಣಿನ ಆಟಿಕೆ ತಯಾರಿಕೆ, ಕರಕುಶಲ, ಉಪ್ಪಿನಕಾಯಿ, ಸೆಣಬು, ಬೆಲ್ಲ ಮಾಡುವಿಕೆ, ಕಮ್ಮಾರರು, ಮಡಕೆ ಮಾಡುವುದು, ಬಡಗಿಗಳು, ನೇಕಾರರು, ಹಪ್ಪಳ ಮತ್ತು ಸಂಡಿಗೆ ಮಾಡುವುದು, ಮುಂತಾದವುಗಳು ಗುಡಿ ಕೈಗಾರಿಕೆಗಳಾಗಿವೆ.

ಸಣ್ಣ ಕೈಗಾರಿಕೆಗಳು

ಸಣ್ಣ ಕೈಗಾರಿಕೆಗಳಲ್ಲಿ ಮುಖ್ಯವಾಗಿ ಸೋಪ್ ಮತ್ತು ಡಿಟರ್ಜೆಂಟ್ ಮೇಕಿಂಗ್, ಪಾದರಕ್ಷೆ ತಯಾರಿಕೆ, ಬೇಕರಿ ಪದಾರ್ಥಗಳ ತಯಾರಿಕೆ, ಐಸ್ ಕ್ರೀಮ್ ಮಾಡುವುದು, ಆಮಂತ್ರಣ ಪತ್ರ ತಯಾರಿಕೆ, ಪೇಪರ್ ತಯಾರಿಕೆ, ಇಟ್ಟಿಗೆ ಮತ್ತು ಹಂಚು ತಯಾರಿಕೆ ಮುಂತಾದವುಗಳು ಕಂಡು ಬರುತ್ತವೆ.

ವಾಣಿಜ್ಯಾಧಾರಿತ ಸ್ವ ಉದ್ಯೋಗ

ವಾಣಿಜ್ಯಾಧಾರಿತ ಸ್ವ ಉದ್ಯೋಗವಕಾಶಗಳೆಂದರೆ ವಿವಿಧ ಅಂಗಡಿಗಳು, ಸಾಮಾಜಿಕ ಮಾಧ್ಯಮ ಸಲಹೆಗಾರ, ಗೃಹಾಧಾರಿತ ರೆಸ್ಟೋರೆಂಟ್, ಮೊಬೈಲ್ ದುರಸ್ತಿ, ಲೋಗೋ ವಿನ್ಯಾಸ ಇತ್ಯಾದಿ

ಸೇವಾ ಕ್ಷೇತ್ರದಲ್ಲಿ ಸ್ವ ಉದ್ಯೋಗ

ಟ್ಯುಟೋರಿಯಲ್ಸ್, ಮಕ್ಕಳ ಪ್ಲೇ ಸೆಂಟರ್, ಕಾರ್ಯಕ್ರಮ ನಿರ್ವಹಣೆ, ಪ್ರವಾಸ ಮಾರ್ಗದರ್ಶಕರು, ಮನೆ ಡೆಕೋರೇಟರ್, ಜೀವನ ಸಲಹೆಗಾರರು, ಜಿಮ್ ಬೋಧಕ, ಮದುವೆ ಪ್ರಪೋಸಲ್ ಸೇವೆಗಳು, ಬ್ಯೂಟಿ ಪಾರ್ಲರ್‌ಗಳು, ಟೈಲರಿಂಗ್ ಇತ್ಯಾದಿಗಳು ಸೇವಾ ಕ್ಷೇತ್ರದಲ್ಲಿರುವ ಸ್ವ ಉದ್ಯೋಗವಕಾಶಗಳಾಗಿವೆ.

೧.೩ ಮಹಿಳೆ ಮತ್ತು ಸ್ವ-ಉದ್ಯೋಗ

ವಿವಾಹಿತ ಮಹಿಳೆಯರು ತಮ್ಮ ಗಂಡಂದಿರ ಸೇವೆ ಮಾಡಿ ಅವರನ್ನು ಎಷ್ಟೇ ಗಮನವಿಟ್ಟು ನೋಡಿಕೊಂಡರೂ ವಿನಾಕಾರಣ ಸಂಶಯ, ಮಾದಕ ಪಾನೀಯಗಳ ಕುಡಿತದ ಅಭ್ಯಾಸದಿಂದ ಹೆಂಡತಿಯನ್ನು ಬೈದು ಹೊಡೆದು ವರದಕ್ಷಿಣೆ ಹಿಂಸೆ ಅನುಭವಿಸುವ ಸಂದರ್ಭದಲ್ಲಿ ಮಹಿಳೆಗೆ ಸ್ವಾವಲಂಬಿಯಾಗುವುದು ಅನಿವಾರ್ಯವೆನಿಸಿತು. ಒಂದು ಕುಟುಂಬವು ಆರ್ಥಿಕವಾಗಿ ಬಳಲುತ್ತಿದ್ದಾಗ ಮಹಿಳೆಯು ಹೊರಗೆ ಹೋಗಬೇಕು ಮತ್ತು ಕೆಲಸ ಮಾಡಬೇಕು ಎಂದು ಜನರು ಆಗಾಗ ಭಾವಿಸುತ್ತಾರೆ. ಆದುದರಿಂದ ಮಹಿಳೆಯರು ದುಡಿಯಲಾರಂಭಿಸಿದರು. ಹೀಗೆ ಇತರ ಪುರುಷರಂತೆ ಮಹಿಳೆಯರು ದುಡಿದು ಮುಂದೊಂದು ದಿನ ಸ್ವ ಉದ್ಯೋಗಿಗಳಾಗಿ ಅವರು ದುಡಿದ ಹಣವನ್ನು ತನ್ನ ಹಾಗೂ ಕುಟುಂಬದ ಬೇಡಿಕೆಗಳನ್ನು ಪೂರೈಸಲು ಪ್ರಾರಂಭಿಸಿದರು. ಕೆಲಸದಲ್ಲಿನ ತಾರತಮ್ಯ ಮತ್ತು ಶಿಕ್ಷಣದ ಕೊರತೆಯು ಮಹಿಳೆಯರಿಗೆ ಸ್ವತಂತ್ರವಾಗಿ ಏನನ್ನಾದರೂ ಸಾಧಿಸಲು ಪ್ರೇರಣೆಯಾಗಿವೆ. ವಿವಿಧ ಸ್ವ ಸಹಾಯ ಗುಂಪುಗಳು ಮಹಿಳೆಯರ ಜೀವನ ಮಟ್ಟದಲ್ಲಿ ಸುಧಾರಣೆ ತರುವಲ್ಲಿ ಸಹಕಾರಿಯಾಗಿವೆ. ಸಾಮಾನ್ಯವಾಗಿ ಅವಿವಾಹಿತ ಸ್ವ ಉದ್ಯೋಗಿಗಳು ತಮ್ಮ ಪೋಷಕರಿಗೆ ತಾವು ದುಡಿದ ಹಣವನ್ನು ಕೊಟ್ಟರೆ ಕೆಲವರು ಈ ಹಣವನ್ನು ಅವರ ಸೌಂದರ್ಯವರ್ಧಕ, ಉಡುಗೆ, ಶಿಕ್ಷಣ ಇತ್ಯಾದಿಗಳಲ್ಲಿ ಬಳಸುತ್ತಾರೆ. ಇನ್ನು ಕೆಲವರು ಈ ಹಣವನ್ನು ಬ್ಯಾಂಕ್‌ನಲ್ಲಿ ಠೇವಣಿ ಮಾಡುತ್ತಾರೆ ಅಥವಾ ಅವರ ಮದುವೆಗೆ ತಾವು ತೊಡಗಿಸಿಕೊಂಡಿಸಿದ್ದಾರೆ. ಆದರೆ ಸಾಕ್ಷರತೆ, ಬಡತನ, ಕೈಗಾರಿಕೆಗಳ ಅವನತಿ, ಕಾರ್ಖಾನೆಗಳಿಂದ ಸ್ಪರ್ಧೆ ಮತ್ತು ತಾಂತ್ರಿಕ ಬದಲಾವಣೆಗಳು ಮಹಿಳಾ ಉದ್ಯೋಗದ ಪ್ರಮುಖ ಅಡೆತಡೆಗಳಾಗಿವೆ. ಜೊತೆಗೆ ಧರ್ಮವು ಮಹಿಳೆಯರ ಮೇಲೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರಭಾವ ಬೀರುತ್ತದೆ.

ಸ್ವ ಉದ್ಯೋಗ ಸೇವಾ ಕ್ಷೇತ್ರದಲ್ಲಿ ಮಹಿಳೆಯರು

ವೇಗವಾಗಿ ಬೆಳೆಯುತ್ತಿರುವ ಅಭಿವೃದ್ಧಿಶೀಲ ದೇಶಗಳಲ್ಲಿ, ಭಾರತದ ಸೇವಾ ಕ್ಷೇತ್ರದ ಪಾತ್ರವು ವಿಶಿಷ್ಟವಾಗಿದೆ. ಸೇವಾ ಕ್ಷೇತ್ರವು ಅನೇಕ ಮಹಿಳೆಯರಿಗೆ ಅಭಿವೃದ್ಧಿ ಹೊಂದುವ ಉದ್ಯೋಗಕ್ಕೆ ಮೂಲವಾಗಿದೆ. ಮಹಿಳೆಯರಲ್ಲಿ ಸೇವಾ ಕ್ಷೇತ್ರದ ವಿಸ್ತರಣೆಯು ಕಡಿಮೆ ಕುಶಲತೆ ಮತ್ತು ಉನ್ನತ ಮಟ್ಟದ ಸೃಷ್ಟಿಗೆ ಕಾರಣವಾಗಿದೆ. ಟ್ಯುಟೋರಿಯಲ್ಸ್, ಮಕ್ಕಳ ಪ್ಲೇ ಸೆಂಟರ್, ಕಾರ್ಯಕ್ರಮ ನಿರ್ವಹಣೆ, ಪ್ರವಾಸ ಮಾರ್ಗದರ್ಶಕರು, ಮನೆ ಡೆಕೋರೇಟರ್, ಜೀವನ ಸಲಹೆಗಾರರು, ಜಿಮ್ ಬೋಧಕ, ಮದುವೆ ಪ್ರಪೋಸಲ್ ಸೇವೆಗಳು, ಬ್ಯೂಟಿ ಪಾರ್ಲರ್‌ಗಳು, ಟೈಲರಿಂಗ್ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಮಹಿಳೆಯರು ದುಡಿಯುತ್ತಿದ್ದಾರೆ. ನಾನು ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಟ್ಯುಟೋರಿಯಲ್ಸ್, ಮಕ್ಕಳ ಪ್ಲೇ ಸೆಂಟರ್, ಕಾರ್ಯಕ್ರಮ ನಿರ್ವಹಣೆ, ಬ್ಯೂಟಿ ಪಾರ್ಲರ್‌ಗಳು ಮತ್ತು ಟೈಲರಿಂಗ್ ಈ ಮೇಲಿನ ಸ್ವ ಉದ್ಯೋಗವನ್ನು ಮಾಡಿಕೊಂಡಿರುವ ಮಹಿಳೆಯರನ್ನು ಆಯ್ಕೆ ಮಾಡಿದ್ದೇನೆ.

೧.೪ ಸಾಹಿತ್ಯ ಸಮೀಕ್ಷೆ

ಪಾಂಡ ಪ್ರದೀಪ ಕುಮಾರ (೨೦೦೩)[12] ಲಿಂಗತ್ವ ಮತ್ತು ಅಭಿವೃದ್ಧಿ: ಇದರಲ್ಲಿ ಬಡತನ ಮತ್ತು ಯುವ ಮಹಿಳೆಯರ ನಡುವಿನ ಕೊಂಡಿಯ ಬಗ್ಗೆ ವಿಶ್ಲೇಷಿಸಿದ್ದಾರೆ. ಕೇರಳ ರಾಜ್ಯದಲ್ಲಿ ಮಹಿಳೆಯರು ಉದ್ಯೋಗದಲ್ಲಿ ಭಾಗವಹಿಸುವ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಮತ್ತು ದಕ್ಷಿಣದ ರಾಜ್ಯಗಳಿಗಿಂತ ಕಡಿಮೆ ಇದೆ. ಉದ್ಯೋಗ ಆಯ್ಕೆಯ ವಿಶ್ಲೇಷಣೆಯ ಪ್ರಕಾರ ಕಠಿಣತರವಾದ ಲಿಂಗ ತಾರತಮ್ಯ ಕಂಡು ಬರುತ್ತದೆ. ಯುವತಿಯರು ಹೆಚ್ಚಾಗಿ ಬೆರಳಚ್ಚು, ಉಡುಪು ತಯಾರಿಕೆ, ಸೆಕ್ರೆಟೆರಿಯಲ್ ಪ್ರಾಕ್ಟಿಸ್, ಟೈಲರಿಂಗ್, ಕೂದಲು–ಚರ್ಮ ಸಂರಕ್ಷಣೆ ಇತ್ಯಾದಿ ಉದ್ಯೋಗಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದಾರೆ. ಮಹಿಳೆಯರ ಆತ್ಮಹತ್ಯೆ ಪ್ರಕರಣಗಳು ಮತ್ತು ದೌರ್ಜನ್ಯ ಪ್ರಮಾಣ ಹೆಚ್ಚಾಗಿವೆ. ಅವಿವಾಹಿತ ಮಹಿಳೆಯರ ಉದ್ಯೋಗದ ಪ್ರಮಾಣವು ವಿವಾಹಿತ ಮಹಿಳೆಯರ ಉದ್ಯೋಗದ ಪ್ರಮಾಣಕ್ಕಿಂತ ಹೆಚ್ಚಾಗಿರುವುದು ಕಂಡು ಬಂದಿದೆ. ಅತೀ ಮೇಲ್ವರ್ಗದ ಹಾಗೂ ಅತೀ ಕೆಳವರ್ಗದ ವಿವಾಹಿತ ಮಹಿಳೆಯರ ಉದ್ಯೋಗದ ಪ್ರಮಾಣ ಹೆಚ್ಚಿದ್ದು ಮದ್ಯಮ ವರ್ಗದ ವಿವಾಹಿತ ಮಹಿಳೆಯರ ಉದ್ಯೋಗದ ಪ್ರಮಾಣ ಕಡಿಮೆ ಇದೆ. ಇದಕ್ಕೆ ಕಾರಣ ಕೆಳವರ್ಗದ ಮಹಿಳೆಯರಿಗೆ ಉದ್ಯೋಗದ ಅವಶ್ಯಕತೆಯಿರುತ್ತದೆ ಮತ್ತು ಮೇಲ್ವರ್ಗದ ಮಹಿಳೆಯರಿಗೆ ಉದ್ಯೋಗ ಪಡೆದುಕೊಳ್ಳುವ ಸಾಮರ್ಥ್ಯ ಹೆಚ್ಚಿರುತ್ತದೆ.

ಸರವನನ್ ವೆಲಯುಧಮ್ (೨೦೦೨)[13] ಮಹಿಳಾ ಉದ್ಯೋಗ ಮತ್ತು ಬಾಲಕಾರ್ಮಿಕರ ನಿರ್ಮೂಲನೆ: ಇದರಲ್ಲಿ ಗ್ರಾಮೀಣ ಮಹಿಳಾ ಸಬಲೀಕರಣ ಮತ್ತು ಬಾಲಕಾರ್ಮಿಕರ ನಿರ್ಮೂಲನೆಯ ನಡುವಿನ ಕೊಂಡಿಯ ಬಗ್ಗೆ ವಿವರಿಸಲಾಗಿದೆ. ತಮಿಳುನಾಡಿನಲ್ಲಿ ಬೀಡಿ ಉದ್ಯಮ ಮಾಡುತ್ತಿರುವ ಬಹುತೇಕ ಮಹಿಳೆಯರು ಅಶಿಕ್ಷಿತರಾದರೂ

ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರುವುದು ಕಂಡು ಬಂದಿದೆ. ಬಾಲಕಾರ್ಮಿಕರ ಪ್ರಮಾಣ ಖಚಿತಗೊಳಿಸಬೇಕಾದರೆ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಮತ್ತು ಶಾಲೆಯಿಂದ ಹೊರಗುಳಿದು ಬೀಡಿ ಉದ್ಯಮ ಮಾಡುವ ಮಕ್ಕಳ ಸಂಖ್ಯೆಯು ಬಹು ಮುಖ್ಯವಾಗಿದೆ. ಬೀಡಿ ಉದ್ಯಮ ಮಾಡುತ್ತಿರುವ ಮಹಿಳೆಯರ ಆದಾಯ ಕಡಿಮೆಯಾಗಿರುವುದರಿಂದ ಅವರ ಮಕ್ಕಳ ಶಿಕ್ಷಣಕ್ಕೆ ಅವರ ಕೊಡುಗೆ ಅಲ್ಪ ಪ್ರಮಾಣದ್ದಾಗಿರುವುದು ಹಾಗೂ ತಮಿಳುನಾಡಿನ ಗ್ರಾಮೀಣ ಕಾನೂನು ನಿಬಂಧನೆಗಳು ಮತ್ತು ಸಾಮಾಜಿಕ ಕ್ರಮಗಳಿಂದಾಗಿ ಬೀಡಿ ಉದ್ಯಮದಿಂದ ಬಾಲಕಾರ್ಮಿಕರ ನಿರ್ಮೂಲನೆಯಲ್ಲಿ ಯಾವುದೇ ಸಹಾಯವಾಗಲಿಲ್ಲ ಎಂಬುವುದು ಕಂಡು ಬಂದಿದೆ.

ಬಿ.ಎಚ್ ಆಂಜನಪ್ಪ (೨೦೦೬) ಮಹಿಳೆ ಮತ್ತು ದುಡಿಮೆ: ಇದರಲ್ಲಿ ಹತ್ತಿ ಹಿಂಜುವ ಮಹಿಳೆಯರ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಿವರಿಸಲಾಗಿದೆ. ಇವರ ಅಭಿಪ್ರಾಯದಂತೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವಂತಹ ಮಹಿಳಾ ಕಾರ್ಮಿಕರ ಮೇಲೆ ಕೌಟುಂಬಿಕ ಜವಾಬ್ದಾರಿಗಳು ಹೆಚ್ಚು ಇರುವುದರಿಂದ ಅವರು ಅನಿವಾರ್ಯವಾಗಿ ಕಾರ್ಖಾನೆಗಳಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದಾರೆ. ಕೆಲಸ ನಿರ್ವಹಿಸುವ ಮಹಿಳಾ ಕಾರ್ಮಿಕರಲ್ಲೇ ಒಬ್ಬರಿಂದ ಇನ್ನೊಬ್ಬರಿಗೆ ಕೂಲಿಯಲ್ಲಿ ವ್ಯತ್ಯಾಸ ಕಂಡು ಬಂದಿದೆ. ಮಕ್ಕಳಿಗೆ ಸರಿಯಾದ ಶಿಕ್ಷಣ ಕೊಡಲು ಅಸಾಧ್ಯವಾಗಿ, ಮಕ್ಕಳ ದುಡಿಮೆಯು ಅನಿವಾರ್ಯವಾಗಿದೆ. ಮಹಿಳೆಯರಿಗೆ ಮೂಲಭೂತ ಸೌಲಭ್ಯಗಳು ಸಿಗದಿರುವುದು ದೃಢಪಟ್ಟಿದೆ.

ಜಯಶೀಲ, ಮೇಗಲಮನಿ ಶೌಕತ್ ಆಲಿ ಎಂ ಮತ್ತು ಎಸ್ ಸುಧಾಕರ (೨೦೦೭) ಮಹಿಳೆ ಮತ್ತು ಅಭಿವೃದ್ಧಿ: ಮಹಿಳಾ ಉದ್ಯಮಿಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿವರಿಸಲಾಗಿದೆ. ಭಾರತದಂತಹ ಹಿಂದುಳಿದ ದೇಶದಲ್ಲಿ ಮಹಿಳಾ ಉದ್ಯಮಿಗಳ ಸಂಖ್ಯೆ ತುಂಬಾ ಕಡಿಮೆ ಇರಲು ಕಾರಣವೇನೆಂದರೆ ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯದ ಕೊರತೆಯಿರುವುದು. ಉದ್ಯಮವನ್ನು ಸಮರ್ಥವಾಗಿ ನಿಭಾಯಿಸುವ ಮತ್ತು ಮುನ್ನಡೆಸುವ ಕೌಶಲ್ಯವಿಲ್ಲದೆ ಅವರು ವಿಫಲರಾಗುತ್ತಾರೆ. ಸಾಮಾಜಿಕ ಮತ್ತು ಕೌಟುಂಬಿಕ ಕಟ್ಟುಪಾಡುಗಳು, ಲಿಂಗ ಭೇದಭಾವ, ಸಂಪ್ರದಾಯಗಳು, ಧಾರ್ಮಿಕ ನಂಬಿಕೆಗಳು ಮಹಿಳೆಯರನ್ನು ಉದ್ಯಮದಲ್ಲಿ ತೊಡಗಿಸಿಕೊಳ್ಳಲು ಅಡ್ಡಿಗಳಾಗಿವೆ. ಮಹಿಳೆಯಲ್ಲಿರುವ ಶಿಕ್ಷಣದ ಕೊರತೆ, ಆತ್ಮವಿಶ್ವಾಸದ ಕೊರತೆ, ಮಾರುಕಟ್ಟೆಯ ಸಮಸ್ಯೆಗಳಾದ ತೀವ್ರ ಪೈಪೋಟಿ, ಮಾರುಕಟ್ಟೆಯಲ್ಲಿ ಆಗುತ್ತಿರುವ ಬದಲಾವಣೆ ಕುರಿತು ಮಾಹಿತಿ ದೊರಕದಿರುವುದು, ಜಾಹೀರಾತಿನ ಕೊರತೆ, ಬಂಡವಾಳದ ಕೊರತೆಗಳಿಂದಾಗಿ ಮಹಿಳೆಯರು ಉದ್ಯಮವನ್ನು ಸ್ಥಾಪಿಸಲು ಹಿಂದೇಟು ಹಾಕುತ್ತಾರೆ. ಮಹಿಳಾ ಉದ್ಯಮಶೀಲತೆಯನ್ನು ಅಭಿವೃದ್ಧಿ ಪಡಿಸಬೇಕಾದರೆ ಉದ್ಯಮ ತರಬೇತಿ, ಹಣಕಾಸಿನ ನೆರವು, ಕುಟುಂಬದ ಬೆಂಬಲ, ಸರ್ಕಾರದ ಸಹಾಯ, ಪುರುಷರ ಸಹಾಯ ಮುಂತಾದ ಅಂಶಗಳನ್ನು ಪರಿಗಣಿಸುವುದು ಅತ್ಯಗತ್ಯವಾಗಿದೆ. ಇವರ ಅಭಿಪ್ರಾಯದಂತೆ ಮಹಿಳೆಯರು ಸ್ವಾವಲಂಬಿಗಳಾಗಬೇಕಾದರೆ ಸ್ವ ಉದ್ಯೋಗವಕಾಶವನ್ನು ಒದಗಿಸಿ ಆಕೆಯನ್ನು ಆರ್ಥಿಕ ಸ್ವಾವಲಂಬಿಯನ್ನಾಗಿಸುವುದು, ಉದ್ಯಮ ತರಬೇತಿ, ಮಹಿಳಾ ವಿದ್ಯಾಭ್ಯಾಸಕ್ಕೆ ಹೆಚ್ಚು ಪ್ರೋತ್ಸಾಹ, ಮಹಿಳೆಯ

ಬಗ್ಗೆ ಸಮಾಜದ ದೃಷ್ಟಿಕೋನದಲ್ಲಿ ಬದಲಾವಣೆ, ಮಹಿಳಾ ಶೋಷಣೆಯ ವಿರುದ್ಧ ಶಾಸನ ಬದ್ಧ ಕ್ರಮಗಳು ಮುಖ್ಯವಾಗಿರುತ್ತದೆ. ಕಾರ್ಮಿಕ ಕಾನೂನುಗಳು ವಿವಿಧ ಸೌಲಭ್ಯಗಳನ್ನು ಮಹಿಳಾ ಕಾರ್ಮಿಕರಿಗೆ ನೀಡಿದ್ದರೂ ಅವುಗಳ ಅನುಷ್ಠಾನ ಸಮರ್ಪಕವಾಗಿಲ್ಲದಿರುವುದು ಕಂಡು ಬಂದಿದೆ.

ವೆಂಕಟೇಶ (೨೦೧೦)[14] ಮಹಿಳಾ ಅಧ್ಯಯನದ ನೆಲೆಗಳು: ಈ ಅಧ್ಯಯನದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಖಾಸಗಿ ಆಸ್ತಿಯಾಗಿರಿಸಿಕೊಂಡಿರುವುದನ್ನು ವಿರೋಧಿಸಿ, ಮಹಿಳಗೆ ತನ್ನ ಹಕ್ಕನ್ನು ಚಲಾಯಿಸವ ಸ್ವತಂತ್ರವನ್ನು ಕಲ್ಪಿಸಿಕೊಡಬೇಕೆಂಬುವುದು ಕಂಡು ಬಂದಿದೆ. ಮಹಿಳೆಯರಿಗೆ ಉದ್ಯೋಗದಲ್ಲಿ ಭದ್ರತೆಯ ಕೊರತೆ, ಆರೋಗ್ಯದ ಸಮಸ್ಯೆಗಳು, ಲೈಂಗಿಕ ಕಿರುಕುಳ ಇರುವುದರಿಂದ ಉದ್ಯೋಗಿಗಳಿಗೆ ಸುರಕ್ಷಿತವಾದ ಆರೋಗ್ಯಕರವಾದ ಸ್ವಚ್ಛ ಹಾಗೂ ಮುಕ್ತ ವಾತಾವರಣವನ್ನು ಕಲ್ಪಿಸಿ ಕೊಡುವ ಅವಶ್ಯಕತೆ ಇದೆ. ಶಿಕ್ಷಣದ ಮೂಲಕ ಮಹಿಳೆಯರ ಸಶಕ್ತೀಕರಣ ನಡೆಯಬೇಕಾದರೆ ಮೂಲಭೂತವಾದ ಬದಲಾವಣೆಗಳು ಉಂಟಾಗಬೇಕು. ಕೇವಲ ಸಂಖ್ಯಾತ್ಮಕ ಹೆಚ್ಚಳದಿಂದ, ಮಹಿಳಾ ಸ್ಥಿತಿ–ಗತಿಗಳಲ್ಲಿ ಬದಲಾವಣೆಗಳು ಆಗುವುದಿಲ್ಲ. ಮಹಿಳಾ ಸಬಲೀಕರಣಗೊಳ್ಳಬೇಕಾದರೆ ಅವರಿಗೆ ಅಧಿಕಾರ ಮತ್ತು ಸಂಪನ್ಮೂಲಗಳು ಅತ್ಯವಶ್ಯಕ.

ಪಾಲನೀಸ್ವರಿ ಟಿ (೨೦೧೨)[15] ಸ್ವ ಉದ್ಯೋಗ ಮತ್ತು ಮಹಿಳಾ ಸಬಲೀಕರಣ: ಸ್ವ ಉದ್ಯೋಗವನ್ನು ಆರಂಭಿಸುವ ಮೊದಲು ಮತ್ತು ನಂತರದ ಆದಾಯ ಮತ್ತು ವೆಚ್ಚದಲ್ಲಿ ವ್ಯತ್ಯಾಸವಿರುತ್ತದೆ. ಮಹಿಳೆಯರಿಗೆ ಸ್ವ ಉದ್ಯೋಗವು ಹೆಚ್ಚುವರಿ ಆದಾಯ, ಆರ್ಥಿಕ ಅಧಿಕಾರ ಮತ್ತು ಸ್ವಾವಲಂಬಿಯಾಗಲು ಸಹಾಯ ಮಾಡುತ್ತದೆ. ಸ್ವ ಉದ್ಯೋಗವು ಮಹಿಳೆಯರಿಗೆ ತಮ್ಮ ಪ್ರಯತ್ನದಲ್ಲಿ ಯಶಸ್ಸನ್ನು ಸಾಧಿಸಲು ಪ್ರೇರಣೆ ನೀಡುತ್ತದೆ. ಸಾಮಾನ್ಯವಾಗಿ ಗ್ರಾಮೀಣ ಮಹಿಳೆಯರಲ್ಲಿ ಉದ್ಯಮದ ಸ್ಥಾಪನೆಗೆ ಬೇಕಾದ ಜ್ಞಾನ, ಸಾಮರ್ಥ್ಯ, ಕೌಶಲ್ಯ ಹಾಗೂ ಸಂಪನ್ಮೂಲಗಳಿವೆ. ಆದರೆ ಉದ್ಯೋಗಕ್ಕೆ ಸಂಬಂಧಿಸಿದ ಮಾರುಕಟ್ಟೆ ಹಾಗೂ ಸ್ವ ಉದ್ಯೋಗಕ್ಕೆ ಬೇಕಾದ ಆರ್ಥಿಕ ನೆರವುಗಳ ಮಾಹಿತಿ ಕೊರತೆ ಕಂಡು ಬಂದಿದೆ. ಆದುದರಿಂದ ಮಹಿಳಾ ಸ್ವ ಉದ್ಯೋಗಕ್ಕೆ ಸಂಬಂಧಿಸಿದಂತೆ ಸ್ವಯಂ ಉದ್ಯೋಗ ತರಬೇತಿ ಬಗ್ಗೆ ಜಾಗೃತಿ, ಉದ್ಯೋಗಕ್ಕೆ ಬೇಕಾದ ಸೂಕ್ತ ತರಬೇತಿ, ಸರಿಯಾದ ಸಮಯಕ್ಕೆ ಕಚ್ಚಾ ಸಾಮಾಗ್ರಿಗಳ ಪೂರೈಕೆ, ಮಹಿಳೆಯರಿಗೆ ಸಮಾನ ಹಕ್ಕುಗಳು, ಮಹಿಳಾ ಆಯೋಗಗಳ ರಚನೆ ಮಾಡವ ಅಗತ್ಯತೆ ಕಂಡು ಬಂದಿದೆ.

ಅಪ್ಪರಾಯ ಶೇಖರ (೨೦೧೫)[16] ಇವರು ಮಹಿಳೆ ಸ್ವ ಉದ್ಯೋಗದಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿಶ್ಲೇಷಿಸಿದ್ದಾರೆ. ಅವರ ಅಭಿಪ್ರಾಯದಂತೆ ಮಹಿಳೆಯರಿಗೆ ತಮ್ಮ ನಿರ್ಧಾರಗಳನ್ನು ನಿರ್ವಹಿಸಲು ಅಧಿಕಾರ ನೀಡಬೇಕು. ಅಧಿಕಾರ ಹೊಂದಿರುವವರು ಮಾತ್ರ ಉದ್ಯಮವನ್ನು ಮಾಡಬಹುದು. ಭಾರತೀಯ ಮಹಿಳೆಯರಿಗೆ ಸ್ವ ಉದ್ಯೋಗವು ಹೊಸತಲ್ಲ ಯಾಕೆಂದರೆ ಅನಾದಿ ಕಾಲದಿಂದಲೂ ಮಹಿಳೆಯರು ಮನೆಯಲ್ಲಿಯೇ ಸಣ್ಣ ಪ್ರಮಾಣದ

ಮನೆಯಾಧಾರಿತ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಬಂದಿದ್ದಾರೆ. ಗೃಹಾಧಾರಿತ ಸ್ವ ಉದ್ಯೋಗದಲ್ಲಿ ತೊಡಗಿಸಿಕೊಂಡಿರುವ ಬಹುತೇಕ ಮಹಿಳೆಯರು ಕೆಳ ಮತ್ತು ಮಧ್ಯಮ ವರ್ಗದವರು. ಸ್ವ ಉದ್ಯೋಗದಲ್ಲಿ ಮಹಿಳೆಯರು ಎದುರುಸುತ್ತಿರುವ ಪ್ರಮುಖ ಸಮಸ್ಯೆಯೆಂದರೆ ಮಾರುಕಟ್ಟೆ ಅಥವಾ ಮಾರ್ಕೆಟಿಂಗ್ ಸಮಸ್ಯೆ. ಮಾರುಕಟ್ಟೆ ಅರ್ಜಿ ಸಲ್ಲಿಸುವಿಕೆ, ಜಾಹೀರಾತು ಮತ್ತು ಪ್ರಚಾರದ ಕೊರತೆಗಳನ್ನು ಅನುಭವಿಸುತ್ತಿದ್ದಾರೆ. ಮಹಿಳೆಯರಲ್ಲಿರುವ ಆತ್ಮವಿಶ್ವಾಸದ ಕೊರತೆ, ಸಾಕ್ಷರತೆ ದರ ಕಡಿಮೆ ಇರುವಿಕೆ, ಸಾಂಪ್ರದಾಯಿಕ ನಿರ್ಬಂಧಗಳು, ತರಬೇತಿ ಸಿಗದೆ ಇರುವುದು, ಹಣಕಾಸಿನ ಸಂಪನ್ಮೂಲದ ಸಮಸ್ಯೆಗಳು ಮಹಿಳಾ ಸ್ವ ಉದ್ಯೋಗಕ್ಕೆ ಅಡ್ಡಿಗಳಾಗಿವೆ.

ಶ್ರೀವಾಸ್ತವ ಎನ್ ಮತ್ತು ಶ್ರೀವಾಸ್ತವ ಆರ್ (೨೦೦೯)[17] ಇವರ ಅಭಿಪ್ರಾಯದಂತೆ ಸ್ವ ಉದ್ಯೋಗಿ ಕೆಲಸಗಾರರು ಏಕರೂಪದ ಗುಂಪಲ್ಲ. ಅವರನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ. ಮೊದಲನೆಯದು 'ಉದ್ಯೋಗದಾತರು', ಎರಡನೆಯದು 'ಸ್ವಂತ ಕಾರ್ಮಿಕರು' ಮೂರನೆಯದು 'ಕುಟುಂಬದ ಸಹಾಯದಲ್ಲಿ ದುಡಿಯುತ್ತಿರುವವರು'. ಅವಿವಾಹಿತ ಅಥವಾ ವಿಧವಾ ಮಹಿಳೆಯರು ಹೆಚ್ಚಾಗಿ ಸ್ವ ಉದ್ಯೋಗ ಮಾಡುತ್ತಿರುವುದು ಕಂಡು ಬಂದಿದೆ. ವೇತನ ಕಡಿಮೆ ಇರುವ ಪ್ರದೇಶಗಳಲ್ಲಿ ಮಹಿಳೆಯರು ಕೃಷಿಯಲ್ಲಿ ಕೇಂದ್ರೀಕೃತರಾಗಿದ್ದಾರೆ ಇವರ ಅಭಿಪ್ರಾಯದಂತೆ ಬಹುತೇಕ ವರ್ಷಗಳಿಂದ ಮಹಿಳೆಯರು ಕೃಷಿಕ್ಷೇತ್ರದಲ್ಲಿ ಸ್ವ ಉದ್ಯೋಗಿಗಳಾಗಿ ದುಡಿಯುತ್ತಿದ್ದಾರೆ. ಮಹಿಳೆಯರು ಇತರ ಉದ್ಯೋಗದಲ್ಲಿ ವಿವಿಧ ಬಗೆಯ ತಾರತಮ್ಯಗಳನ್ನು ಅನುಭವಿಸುತ್ತಿದ್ದಾರೆ. ಮಹಿಳೆಯರು ಶಿಕ್ಷಣಕ್ಕನುಗುಣವಾಗಿ ನಾನಾ ತರಹದ ಉದ್ಯೋಗಗಳನ್ನು ಮಾಡಿಕೊಂಡಿದ್ದಾರೆ. ಅನೇಕ ಮಹಿಳೆಯರು ಕೃಷಿಯನ್ನು ಸ್ವ ಉದ್ಯೋಗವಾಗಿ ಆಯ್ಕೆ ಮಾಡಲು ಕಾರಣವೇನೆಂದರೆ ಇತರ ಉದ್ಯೋಗಗಳಲ್ಲಿ ಉದ್ಯೋಗದಾತನಿಂದ ಉದ್ಯೋಗಕ್ಕೆ ಸಂಬಂಧಿಸಿದಂತೆ ತಾರತಮ್ಯ ಕಂಡು ಬರಬಹುದೆಂದು. ಇದರಿಂದ ತಿಳಿದು ಬರುವುದೇನೆಂದರೆ ಶಿಕ್ಷಣವಿದ್ದರೂ ಹೆಚ್ಚಿನ ಮಹಿಳೆಯರು ಸ್ವ ರಕ್ಷಣೆಗಾಗಿ ಮತ್ತು ತಾರತಮ್ಯದಿಂದ ಮುಕ್ತರಾಗಲು ಸ್ವ ಉದ್ಯೋಗಿಯಾಗಿ ದುಡಿಯುತ್ತಿದ್ದಾರೆ. ಸ್ವ ಉದ್ಯೋಗಿಗಳಿಗೆ ಅವರ ಶಿಕ್ಷಣವು ಅವರ ಭಾಗವಹಿಸುವಿಕೆಗೆ ಯಾವುದೇ ಪ್ರಭಾವ ಬೀರಿಲ್ಲ ಎಂಬುವುದು ಅವರ ಅಭಿಪ್ರಾಯವಾಗಿದೆ. ಮನೆಯಲ್ಲಿ ಉದ್ಯೋಗ ಮಾಡಲು ಬಿಡದೆ ಕಟ್ಟುಪಾಡುಗಳನ್ನು ಹೇರಿದಾಗ ಅದಕ್ಕೆ ಹೆದರಿ ಮನೆಯಲ್ಲಿ ಇರುವ ಅನೇಕ ಮಹಿಳೆಯರಿಗೆ ಏನಾನ್ನದರೂ ಸಾಧಿಸಲು ಸ್ವ ಉದ್ಯೋಗವು ಪ್ರೇರಣೆಯಾಗಿದೆ. ಗ್ರಾಮೀಣ ಕೃಷಿ ಮಾರುಕಟ್ಟೆಯಲ್ಲಿ ಮಹಿಳಾ ಕಾರ್ಮಿಕರಿಗೆ ಹೆಚ್ಚು ಅನಾನುಕೂಲತೆ ಇದೆ. ಎಲ್ಲಾ ರೀತಿಯ ಕೆಲಸಗಳಲ್ಲಿ ಪುರುಷರಿಗೆ ವೇತನ ಹೆಚ್ಚಾಗಿದೆ.

ರುಸ್ತಗಿ ಪ್ರೀತ್ (೨೦೧೦)[18] ಮಹಿಳೆ ಮತ್ತು ಉದ್ಯೋಗ: ಇದರಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಮಹಿಳೆಯರ ಉದ್ಯೋಗ ಸ್ಥಿತಿ, ಮಹಿಳೆಯರ ಕೆಲಸದ ಸ್ವಭಾವ ಮತ್ತು ಅವರಿಗೆ ಲಭಿಸುವ ಉದ್ಯೋಗವಕಾಶಗಳ ಬಗ್ಗೆ ವಿಶ್ಲೇಷಿಸಲಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶದ ಸ್ವಉದ್ಯೋಗಿಗಳಲ್ಲಿ 'ಸ್ವಂತ ಖಾತೆ'ಯನ್ನು

ಹೊಂದಿರುವವರಲ್ಲಿ ಪುರುಷರೇ ಅಧಿಕವಾಗಿದ್ದಾರೆ ಎಂದು ಕಂಡು ಬಂದಿದೆ. ಮಹಿಳೆಯರು ಮಾಡುವ ಕೆಲಸವು ಗುರುತಿಸಲಾಗದ ಮತ್ತು ಅಗೋಚರವಾಗಿದೆ. ಆದುದರಿಂದ ಮಹಿಳೆಯರು ಮಾಡುವ ಕೆಲಸಗಳಲ್ಲಿ ಕೌಶಲ್ಯ ಉತ್ಪತ್ತಿಯಾಗಿ ಆದಾಯ ಹೆಚ್ಚಾಗಬೇಕಾದರೆ ಮಹಿಳೆಯರಿಗೆ ಮೂಲ ಶಿಕ್ಷಣ, ಯಾಂತ್ರಿಕ ಮಾಹಿತಿ, ಮಾರುಕಟ್ಟೆಯ ಸ್ಥಿತಿಗಳ ಮಾಹಿತಿ ನೀಡುವುದು ಮತ್ತು ಆಹಾರ ಭದ್ರತೆ, ಪೌಷ್ಠಿಕ ಆಹಾರ, ನೀರಿನ ಸೌಲಭ್ಯ, ಮಗುವಿನ ಕಾಳಜಿ ಸೌಲಭ್ಯಗಳು ಅತ್ಯಗತ್ಯವಾಗಿವೆ.

ಭವ್ಯ ಹೆಚ್. ಪಿ (೨೦೧೩)[19] ಸ್ವಸಹಾಯ ಸಂಘಗಳು ಮತ್ತು ಆರ್ಥಿಕ ಸಬಲೀಕರಣ: ಇವರ ಅಭಿಪ್ರಾಯದಂತೆ ಸ್ವ ಉದ್ಯೋಗ, ಸಾಲ, ತಂತ್ರಜ್ಞಾನ ಮತ್ತು ಮಾರುಕಟ್ಟೆ ಸೌಲಭ್ಯದೊಂದಿಗೆ ಮೂಲಭೂತ ಅವಶ್ಯಕತೆಗಳನ್ನು ಮಹಿಳೆಯರಿಗೆ ಉಚಿತವಾಗಿ ಒದಗಿಸಿಕೊಟ್ಟಾಗ ಅವರ ದುಡಿಮೆಯು ಹೆಚ್ಚಾಗಿ ಸಮಾಜದ ಏಳಿಗೆಯಾಗುತ್ತದೆ. ಸ್ವಸಹಾಯ ಸಂಘದ ಸದಸ್ಯರಾದ ನಂತರ ಅನೇಕ ಮಹಿಳೆಯರು ಅಕ್ಷರಸ್ಥರಾಗಿದ್ದಾರೆ ಜೊತೆಗೆ ತಮ್ಮ ಹಾಗೂ ಕುಟುಂಬದ ಆರೋಗ್ಯ ಮತ್ತು ಶುಚಿತ್ವದ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಂಡಿದ್ದಾರೆ. ಬ್ಯಾಂಕ್ ಖಾತೆ ತೆರೆಯುವುದರ ಮೂಲಕ ತಮ್ಮ ಬ್ಯಾಂಕ್ ವ್ಯವಹಾರವನ್ನು ತಾವೇ ನಿರ್ವಹಿಸುತ್ತಿದ್ದಾರೆ. ಗ್ರಾಮಸಭೆಗಳಲ್ಲಿ ಭಾಗವಹಿಸುವುದು, ಗ್ರಾಮಪಂಚಾಯಿತಿ, ಅಂಚೆಕಛೇರಿಗಳಿಗೆ ಭೇಟಿ ನೀಡುವುದನ್ನು ಕಲಿತಿದ್ದಾರೆ. ಬಹುಮುಖ್ಯವಾಗಿ ಉದ್ಯೋಗವಕಾಶಗಳನ್ನು ಸ್ವ ಸಹಾಯ ಗುಂಪುಗಳು ಕಲ್ಪಿಸಿಕೊಡುತ್ತಿವೆ. ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸಿ ಸೂಕ್ತ ಸಲಹೆಗಳನ್ನು ನೀಡುತ್ತಿವೆ. ಸ್ವಸಹಾಯ ಸಂಘದ ಸದಸ್ಯರಾದ ನಂತರ ಮಹಿಳೆಯರು ತಮ್ಮ ಕುಟುಂಬದ ಸದಸ್ಯರ ಸಾಲಗಳನ್ನು ಮರುಪಾವತಿ ಮಾಡುವಲ್ಲಿ ಸಹಕಾರಿಯಾಗಿದ್ದಾರೆ. ಮಹಿಳಾ ಸ್ವಸಹಾಯ ಸಂಘಗಳಿಂದ ಮಹಿಳಾ ಆರ್ಥಿಕ, ಸಾಮಾಜಿಕ, ರಾಜಕೀಯ ಸಬಲೀಕರಣವಾಗಿದೆ ಎಂಬುದು ಕಂಡು ಬಂದಿದೆ

ಹೆಗ್ಗಡೆ ಒಡೆಯರ್ ಡಿ (೨೦೧೧)[20] ಅವರ ಅಭಿಪ್ರಾಯದಂತೆ ಸೇವಾಕ್ಷೇತ್ರದಲ್ಲಿ ಮಹಿಳಾ ಪಾಲುಗೊಳ್ಳುವಿಕೆ ಮತ್ತು ಉದ್ಯೋಗ ಹೆಚ್ಚುತ್ತಿದೆ. ಸಾರ್ವಜನಿಕ ಸೇವಾಕ್ಷೇತ್ರದಲ್ಲಿ ದುಡಿಯುವ ಮಹಿಳೆಯರು ಯಾವುದೇ ತಾರತಮ್ಯಗಳಿಗೆ ಗುರಿಯಾಗಿಲ್ಲ. ಅವರನ್ನು ಆರ್ಥಿಕ ವಿಷಯಗಳಲ್ಲಿ ಪುರುಷ ಕಾರ್ಮಿಕರಿಗೆ ಸರಿಸಮಾನರಾಗಿ ನಡೆಸಿಕೊಳ್ಳಲಾಗುತ್ತಿದೆ. ಆದರೆ ಖಾಸಗಿ ಕ್ಷೇತ್ರಗಳಲ್ಲಿ ಅನೇಕ ತರಹದ ಆರ್ಥಿಕ ತಾರತಮ್ಯಗಳಿಗೆ, ಶೋಷಣೆಗೆ ಗುರಿಯಾಗಿದ್ದಾರೆ. ಮಹಿಳೆಯರು ಉದ್ಯೋಗದಲ್ಲಿರುವ ಪ್ರಮಾಣ ಕಡಿಮೆ ಇದೆ ಇದಕ್ಕೆ ಕಾರಣಗಳೆಂದರೆ ಬಡ ಮಹಿಳೆಯರು ಶಿಕ್ಷಣ ವಂಚಿತರಾಗಿರುವುದು, ಪುರುಷರಿಂದ ಬಡ ಮಹಿಳೆಯರು ತೀವ್ರ ಸ್ಪರ್ಧೆ ಎದುರಿಸುವುದು, ದುಡಿಮೆ ಸಮಯ ಮತ್ತು ಸ್ಥಳಗಳು ಬಡ ಮಹಿಳೆಯರಿಗೆ ಪೂರಕವಾಗಿಲ್ಲದಿರುವುದು ಆಗಿವೆ. ಮಹಿಳೆಯರಿಗೆ ಹೆಚ್ಚು ಹೆಚ್ಚು ಉದ್ಯೋಗವಕಾಶಗಳನ್ನು ಕಲ್ಪಿಸಿಕೊಡಲು ಮಹಿಳೆಯರಿಗೆ ಸಾಂಸ್ಥಿಕ ಹಣಕಾಸಿಗೆ ಪ್ರವೇಶಾವಕಾಶವನ್ನು ವಿಸ್ತರಿಸಬೇಕು.

ರಾಚಪ್ಪಾಜಿ ಮತ್ತು ನಾಗರಾಜು (೨೦೧೦)[21] ಮಹಿಳಾ ಸಬಲೀಕರಣ: ಇವರ ಅಭಿಪ್ರಾಯದಂತೆ ಮಹಿಳಾ ಸ್ವ ಉದ್ಯೋಗ ಪ್ರೋತ್ಸಾಹಿಸಲು ಮಹಿಳೆಯರಿಗೆ ಉತ್ತಮ ಶಿಕ್ಷಣ ಮತ್ತು ಅವರಲ್ಲಿ ಸಾಕ್ಷರತೆಯ ದರವನ್ನು ಹೆಚ್ಚಿಸಬೇಕು. ಮಹಿಳೆಯರಿಗೆ ತರಬೇತಿ ಮತ್ತು ಉದ್ಯೋಗಗಳನ್ನು ನೀಡಿ ಅವರ ಸ್ಥಾನಮಾನಗಳನ್ನು ಹೆಚ್ಚಿಸಬೇಕು. ರಾಜಕೀಯ ಕ್ಷೇತ್ರದಲ್ಲಿ ಮಹಿಳೆಗೆ ಸಾಕಷ್ಟು ಪ್ರಮಾಣದ ಮೀಸಲಾತಿಯನ್ನು ನೀಡಬೇಕು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಕೊನೆಗಾಣಿಸುವುದು ಅತ್ಯಗತ್ಯವಾಗಿದೆ. ಇವರ ಅಭಿಪ್ರಾಯದಂತೆ ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೊರಗ ಸಮುದಾಯದವರ ಆರ್ಥಿಕ ಸ್ಥಿತಿಗತಿಯು ಬಹಳ ಶೋಚನೀಯವಾಗಿದೆ. ಅವರಿಗೆ ಮನೆಯೊಳಗೆ ಮತ್ತು ಮನೆಯ ಹೊರಗೆ ಅಂದರೆ ಬೀದಿಗಳಲ್ಲಿ ಲಭ್ಯವಿರುವ ಸವಲತ್ತುಗಳು ಸಮರ್ಪಕವಾಗಿಲ್ಲ. ಹೆಚ್ಚಿನವರು ತಮ್ಮ ಮೂಲ ಕಸುಬುಗಳಾದಂತಹ ಬುಟ್ಟಿ, ಚಾಪೆ, ಬೀಡಿ ಮತ್ತಿತರ ನೇಯುವ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ಮಾರುಕಟ್ಟೆಯಲ್ಲಿ ಬೇಡಿಕೆ ಇಲ್ಲದಿರುವುದು ಅವರ ಪ್ರಮುಖ ಸಮಸ್ಯೆಯಾಗಿದೆ. ಆದುದರಿಂದ ಅವರು ಈ ಕಾರ್ಯಗಳನ್ನು ಮಾಡುವುದನ್ನು ಬಿಟ್ಟಿದ್ದಾರೆ.

ಜಾರ್ಜೆಲ್ಲಿಸ್ ಮತ್ತು ಹೋವರ್ಡ್(೨೦೦೪)[22] ಜರ್ಮನಿಯಲ್ಲಿ ನಡೆಸಿದ ಅಧ್ಯಯನದ ಅಭಿಪ್ರಾಯದಂತೆ ಸ್ವ ಉದ್ಯೋಗವು ಇತರರ ಕೈಕೆಳಗೆ ದುಡಿಯುವ ಸಂಬಳದ ಉದ್ಯೋಗಕ್ಕಿಂತ ಹೆಚ್ಚು ಲಾಭದಾಯಕವಾಗಿದೆ. ಉದ್ಯೋಗವು ಸ್ವ ಪ್ರೇರಿತ ಅನುಸರಣೆಯ ಮೇಲೆ ಅವಲಂಬಿಸಿರುತ್ತದೆ. ಈ ಅಧ್ಯಯನದ ಪ್ರಕಾರ ಪುರುಷರಿಗಿಂತ ಮಹಿಳೆಯರೇ ಹೆಚ್ಚಾಗಿ ಸ್ವ ಉದ್ಯೋಗವನ್ನು ಮಾಡುತ್ತಿದ್ದಾರೆ ಯಾಕೆಂದರೆ ಸ್ವ ಉದ್ಯೋಗ ಹೆಚ್ಚಿನ ಮಟ್ಟದಲ್ಲಿ ಮಹಿಳೆಯರಿಗೆ ತಮ್ಮ ಮಕ್ಕಳ ಆರೈಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಹಕಾರಿಯಾಗಿವೆ. ಯಾವಾಗ ಮಹಿಳೆಯರಿಗೆ ಇತರ ಉದ್ಯೋಗದಿಂದ ಸಿಗುವ ವೇತನ ಕಡಿಮೆ ಎನಿಸುತ್ತದೆಯೋ ಆಗ ಮಹಿಳೆಯರು ಸ್ವ ಉದ್ಯೋಗವನ್ನು ಆಯ್ಕೆ ಮಾಡುತ್ತಾರೆ.

ಕಾಂಬಳೆ ಉತ್ತಮ ಅ (೨೦೧೧)[23] ಗ್ರಾಮೀಣ ಮಹಿಳಾ ಸಾಮಾಜಿಕ ಆರ್ಥಿಕ ಅಭಿವೃದ್ಧಿ: ಇದರಲ್ಲಿ ಕೃಷಿಯಲ್ಲಿ ಮಹಿಳೆಯರ ಪಾತ್ರದ ಕುರಿತು ವಿಶ್ಲೇಷಿಸಲಾಗಿದೆ. ಕೃಷಿ ಸಂಬಂಧಿ ಚಟುವಟಿಕೆಗಳಾದ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಜೇನು, ರೇಷ್ಮೆ ಹುಳು ಸಾಕಾಣಿಕೆ, ಅರಣ್ಯ ತೋಟಗಾರಿಕೆಗಳಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ. ಗ್ರಾಮೀಣ ಸಮಾಜದ ಸಾಂಪ್ರದಾಯಿಕ ಆಚರಣೆಗಳು ರೂಢಿಯಲ್ಲಿರುವುದರಿಂದ ಮಹಿಳೆಯರ ಸಾಮರ್ಥ್ಯಕ್ಕೆ ಬೆಲೆ ಇಲ್ಲದಂತಾಗಿದೆ. ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶದ ಪುರುಷರಿಗೆ ಹೋಲಿಸಿದರೆ, ಮಹಿಳೆಯರು ಅಧಿಕ ಸಂಖ್ಯೆಯ ಪೂರ್ಣಾವಧಿ ಮತ್ತು ಅಪೂರ್ಣಾವಧಿ ಕೆಲಸಗಾರರಿರುವುದು ಕಂಡು ಬಂದಿದೆ. ಕರ್ನಾಟಕ ರಾಜ್ಯವು ಗೃಹ ಕೈಗಾರಿಕೆಗಳಲ್ಲಿ ಪ್ರಗತಿಯನ್ನು ಸಾಧಿಸಿರುವುದಿಲ್ಲ ಎಂಬುವುದು ಕಂಡು ಬಂದಿದೆ. ಮೇಲ್ವರ್ಗದ ಮಹಿಳಾ ಕುಟುಂಬಗಳು ಭೂಮಿಯನ್ನು ಹೊಂದಿದ್ದು, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳು ಉನ್ನತ ಮಟ್ಟದ್ದಾಗಿದೆ.

ಮೇಲ್ವರ್ಗದ ಮಹಿಳೆಯರು ಕೃಷಿ ಕೂಲಿಗಳಾಗಿ ದುಡಿಯುವ ಪ್ರಮಾಣ ಅತ್ಯಂತ ಕಡಿಮೆಯಾಗಿರುತ್ತದೆ. ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪುರುಷರಿಗೆ ಮಹಿಳೆಯರೇ ಮಾರ್ಗದರ್ಶನ ನೀಡುತ್ತಾರೆ. ಮೂಲಭೂತ ಸೌಲಭ್ಯಗಳಾದ ಆರೋಗ್ಯ, ಪೋಷಕಾಂಶ ಆಹಾರ ಮತ್ತು ಶಿಕ್ಷಣದಿಂದ ಮಹಿಳೆಯರು ವಂಚಿತರಾಗಿರುವುದು ತಿಳಿದು ಬಂದಿರುತ್ತದೆ.

ಮಹಿಳಾ ಸ್ವ ಉದ್ಯೋಗಕ್ಕೆ ಸಂಬಂಧಿಸಿದಂತೆ ಹಲವು ಅಧ್ಯಯನಗಳು ನಡೆದಿವೆ. ಸ್ವ ಉದ್ಯೋಗಕ್ಕೆ ಸಂಬಂಧಿಸಿದಂತೆ ಮಹಿಳೆಯರು ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡು ಬಂದಿದೆ. ಮಹಿಳಾ ಸ್ವ ಉದ್ಯೋಗದ ಬಗೆಗಿನ ಕೆಲವು ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕೆಲವು ಪ್ರಶ್ನೆಗಳು ಈ ಕೆಳಗಿನಂತಿವೆ.

೧.೫ ಸಮಸ್ಯೀಕರಣ

ಹೆಚ್ಚಿನ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ಪುರುಷರಷ್ಟೇ ದುಡಿಮೆಯಲ್ಲಿ ಸಾಮರ್ಥ್ಯ ಹೊಂದಿದ್ದರೂ ಮಹಿಳೆಯರ ದುಡಿಯುವ ಪ್ರಮಾಣದ ಸಂಖ್ಯೆ ಪುರುಷರಿಗಿಂತ ಯಾಕೆ ಕಡಿಮೆ ಇದೆ?

ಇದಕ್ಕೆ ಮಹಿಳೆಯರಿಗೆ ಸಿಗುವ ಶಿಕ್ಷಣ ಕಡಿಮೆಯಾಗುತ್ತಿದೆಯೇ?

ದುಡಿಯುವ ಮಹಿಳೆಯರು ಉದ್ಯೋಗ ಕ್ಷೇತ್ರಗಳಲ್ಲಿ ಪುರುಷರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಶೋಷಿತರಾಗಿದ್ದಾರೆಯೇ?

ದುಡಿಯುವ ಮಹಿಳೆಯರಿಗೆ ತಮ್ಮ ಕುಟುಂಬದಲ್ಲಿ ಸಾಕಷ್ಟು ಪ್ರೋತ್ಸಾಹ ಮತ್ತು ಸಹಕಾರ ಸಿಗುತ್ತಿಲ್ಲವೇ?

ಸಾಮಾಜಿಕ ಅಂಶಗಳಾದ ಜಾತಿ, ಧರ್ಮ ಇತ್ಯಾದಿ ಮಹಿಳೆಯರನ್ನು ಉದ್ಯೋಗ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳದಂತೆ ಕಟ್ಟುಪಾಡುಗಳನ್ನಿರಿಸುತ್ತಿದೆಯೇ?

ದುಡಿಯುವ ಕ್ಷೇತ್ರದಲ್ಲಿ ಮಹಿಳೆಯರಿಗೆ ದೈಹಿಕ ಹಾಗೂ ಮಾನಸಿಕ ತೊಂದರೆಗಳಿವೆಯೇ?

ಉದ್ಯೋಗ ಕ್ಷೇತ್ರದಲ್ಲಿ ಲಿಂಗ ತಾರತಮ್ಯ ಹೋಗಲಾಡಿಸಲು ಸರಕಾರಗಳು ಕೈಗೊಂಡ ಕಾರ್ಯಕ್ರಮಗಳು ಯಶಸ್ವಿಯಾಗುತ್ತಿಲ್ಲವೇ?

ಕಾನೂನಿನಲ್ಲಿ ಏನಾದರೂ ಲೋಪದೋಷಗಳಿವೆಯೇ?

ಮುಂತಾದ ಅನೇಕ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕಾಗಿದೆ. ಅನೇಕ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಅಂಶಗಳು ಮಹಿಳೆಯ ದುಡಿಮೆಯ ಮೇಲೆ ಯಾವ ಪರಿಣಾಮಗಳನ್ನುಂಟು ಮಾಡುತ್ತವೆ ಎಂಬುದನ್ನು ಅಧ್ಯಯನ ಮಾಡಬೇಕಾಗಿದೆ.

೧.೬ ಅಧ್ಯಯನದ ಉದ್ದೇಶಗಳು

ನನ್ನ ಅಧ್ಯಯನವು ಈ ಕೆಳಕಂಡ ಉದ್ದೇಶಗಳನ್ನೊಳಗೊಂಡಿದೆ.

೧. ಮಹಿಳೆಯರು ಸ್ವ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಲು ಕಾರಣವಾದ ಅಂಶಗಳನ್ನು ಅಧ್ಯಯನ ಮಾಡುವುದು.

೨. ಮಹಿಳೆಯರಿಗೆ ಸ್ವ ಉದ್ಯೋಗ ಕೈಗೊಳ್ಳಲು ನೆರವಾಗುವ ಸಾಮಾಜಿಕ ಮತ್ತು ಆರ್ಥಿಕ ಸೌಲಭ್ಯಗಳ ವಿಶ್ಲೇಷಣೆ ಮಾಡುವುದು.

೩. ಸೇವಾ ಕ್ಷೇತ್ರದಲ್ಲಿ ಮಹಿಳಾ ಸ್ವ ಉದ್ಯೋಗಿಗಳ ಸಮಸ್ಯೆಗಳು ಮತ್ತು ಸವಾಲುಗಳನ್ನು ವಿಶ್ಲೇಷಿಸುವುದು.

೪. ಸ್ವ ಉದ್ಯೋಗಿ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಚರ್ಚಿಸಿ ಅದಕ್ಕೆ ಸೂಕ್ತ ಪರಿಹಾರ ಸೂಚಿಸುವುದು

೧.೭ ಅಧ್ಯಯನದ ವಿಧಾನಗಳು

ದತ್ತಾಂಶ ಸಂಗ್ರಹಣೆಯನ್ನು ಎರಡು ವಿಧಗಳಲ್ಲಿ ಮಾಡಲಾಗಿದೆ.

ಪ್ರಾಥಮಿಕ ಮೂಲಗಳಿಂದ:

ಮಂಗಳೂರು ತಾಲೂಕಿನ ಸ್ವ ಉದ್ಯೋಗಿಗಳನ್ನು ಭೇಟಿ ಮಾಡಿ, ಸಂದರ್ಶನ ಮಾಡುವ ಮುಖಾಂತರ, ಪ್ರಶ್ನಾವಳಿಯ ಮೂಲಕ ಮಾಹಿತಿ ಸಂಗ್ರಹಣೆಯನ್ನು ಮಾಡಲಾಗಿದೆ

ಅನುಷಂಗಿಕ ಮೂಲಗಳಿಂದ:

ವಿವಿಧ ಗ್ರಂಥಗಳು, ನಿಯತಕಾಲಿಕೆಗಳು, ಪ್ರಕಟಿತ ಮತ್ತು ಅಪ್ರಕಟಿತ ಪ್ರಬಂಧಗಳು, ಪ್ರಕಟಿತ ಜನಸಂಖ್ಯಾ ವರದಿಗಳು, ಸಂಶೋಧನಾ ಲೇಖನಗಳು, ದಿನಪತ್ರಿಕೆಗಳು ಮತ್ತು ಅಂತರ್ಜಾಲ ತಾಣಗಳಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

೧.೮ ಅಧ್ಯಯನದ ಪ್ರಾಮುಖ್ಯತೆ

ಮಹಿಳೆಯೊಬ್ಬಳು ಇತರರ ಅವಲಂಬನೆಯನ್ನು ತೊಡೆದು ಹಾಕಿ ಸ್ವತಂತ್ರವಾದ ಜೀವನ ನಡೆಸುವುದೇ ಮಹಿಳಾ ಸಬಲೀಕರಣವಾಗಿದೆ. ಇದಕ್ಕೆ ಮಹಿಳೆಯು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವ ಪರಿಸರ ನಿರ್ಮಾಣವಾಗಬೇಕು. ಮಹಿಳೆಯರು ತಮ್ಮದೇ ಆದ ಉದ್ಯೋಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಮೇಲ್ನೋಟಕ್ಕೆ ಅವರು ಸ್ವ ಉದ್ಯೋಗದಲ್ಲಿ ಅನುಭವಿಸುತ್ತಿರುವ ಸಮಸ್ಯೆಗಳು ಕಾಣವುದಿಲ್ಲ. ಆದುದರಿಂದ ಮಹಿಳೆಯರು ಸ್ವ ಉದ್ಯೋಗದಲ್ಲಿ ಎದುರಿಸುತ್ತಿರುವ ಅನೇಕ ರೀತಿಯ ಸಮಸ್ಯೆಗಳನ್ನು ತಿಳಿಯುವ ದೃಷ್ಟಿಯಿಂದ ಈ ಅಧ್ಯಯನವು ಪ್ರಾಮುಖ್ಯತೆಯನ್ನು ಪಡೆದಿದೆ. ಮಂಗಳೂರು ತಾಲೂಕಿನ ಸ್ವ ಉದ್ಯೋಗಿ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಪಡೆಯುವುದು ಈ ಅಧ್ಯಯನದ ಮಹತ್ವವಾಗಿದೆ. ಮಹಿಳೆಯರು ಸೇವಾ ಕ್ಷೇತ್ರದ ಸ್ವ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಲು ಇರುವ ಕಾರಣಗಳನ್ನು ವಿಶ್ಲೇಷಿಸುವ ದೃಷ್ಟಿಯಿಂದ ಈ ಅಧ್ಯಯನವು ಪ್ರಾಮುಖ್ಯತೆಯನ್ನು ಪಡೆದಿದೆ.

೧.೯ ಅಧ್ಯಯನದ ಮಿತಿಗಳು

೧. ಸ್ವ ಉದ್ಯೋಗಿಗಳು ಕೃಷಿಯಾಧಾರಿತ, ಗುಡಿ ಕೈಗಾರಿಕೆ, ಸಣ್ಣ ಕೈಗಾರಿಕೆ, ವಾಣಿಜ್ಯಧಾರಿತ, ಸೇವಾ ಕ್ಷೇತ್ರ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸಮಯ ಮತ್ತು ಹಣಕಾಸಿನ ಪರಿಮಿತಿಯ ದೃಷ್ಟಿಯಿಂದ ನಾನು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ವ್ಯಾಪ್ತಿಯಲ್ಲಿ ಸೇವಾ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆಯರನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿದ್ದೇನೆ.

೨. ಈ ಅಧ್ಯಯನದ ಫಲಿತಗಳು ಇತರ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರಿಗೆ ನೇರವಾಗಿ ಸಂಬಂಧಪಡುವುದಿಲ್ಲ.

೩. ಟ್ಯುಟೋರಿಯಲ್ಸ್, ಮಕ್ಕಳ ಪ್ಲೇ ಸೆಂಟರ್, ಕಾರ್ಯಕ್ರಮ ನಿರ್ವಹಣೆ, ಬ್ಯೂಟಿ ಪಾರ್ಲರ್‌ಗಳು ಮತ್ತು ಟೈಲರಿಂಗ್ ಈ ಕ್ಷೇತ್ರಗಳನ್ನು ಮಾತ್ರ ಸಮಯದ ಪರಿಮಿತಿಯಿಂದ ಆಯ್ಕೆ ಮಾಡಿಕೊಂಡಿದ್ದೇನೆ.

೧.೧೦ ಅಧ್ಯಾಯಗಳು

ಈ ಅಧ್ಯಯನವನ್ನು ಒಟ್ಟು ೫ ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಮೊದಲನೇ ಅಧ್ಯಾಯದಲ್ಲಿ ಪೀಠಿಕೆ, ಅಧ್ಯಯನದ ಸಮಸ್ಯೆಗಳು, ಅಧ್ಯಯನದ ಉದ್ದೇಶಗಳು, ಅಧ್ಯಯನದ ಮಿತಿಗಳು, ಅಧ್ಯಯನದ ವಿಧಾನಗಳು, ಅಧ್ಯಯನದ ಪ್ರಾಮುಖ್ಯತೆ ಮತ್ತು ಸಾಹಿತ್ಯ ಸಮೀಕ್ಷೆಯನ್ನು ನೀಡಲಾಗಿದೆ.

ಎರಡನೇ ಅಧ್ಯಾಯದಲ್ಲಿ ಅಧ್ಯಯನ ಕ್ಷೇತ್ರವಾದ ಮಂಗಳೂರು ತಾಲೂಕಿನ ಪ್ರದೇಶ ಪರಿಚಯವನ್ನು ಹಾಗೂ ಮಹಿಳಾ ಸ್ವ ಉದ್ಯೋಗಕ್ಕೆ ಕಾರಣವಾದ ಅಂಶಗಳ ಬಗ್ಗೆ ವಿವರಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಮಂಗಳೂರು ತಾಲೂಕಿನ ಸ್ವ ಉದ್ಯೋಗಿ ಮಹಿಳೆಯರಿಗೆ ವಿವಿಧ ಮೂಲಗಳಿಂದ ದೊರಕುವ ಸೌಲಭ್ಯಗಳ ಬಗ್ಗೆ ವಿವರಣೆ ನೀಡಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಮಂಗಳೂರು ತಾಲೂಕಿನಲ್ಲಿರುವ ಮಹಿಳಾ ಸ್ವ ಉದ್ಯೋಗಿಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳ ವಿಶ್ಲೇಷಣೆ ಮಾಡಲಾಗಿದೆ.

ಐದನೇ ಅಧ್ಯಾಯದಲ್ಲಿ ಸ್ವ ಉದ್ಯೋಗಿ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಚರ್ಚಿಸಿ ಅದಕ್ಕೆ ಸೂಕ್ತ ಪರಿಹಾರ ಸೂಚಿಸಲಾಗಿದೆ.

ಕೊನೆ ಟಿಪ್ಪಣಿ

1. ರಾಚಪ್ಪಾಜಿ ಎಂ, *ಮಹಿಳಾ ಸಬಲೀಕರಣ ಮತ್ತು ರಾಜಕೀಯ ಪ್ರಾತಿನಿಧಿತ್ವ*, ಮೈಸೂರು: ವಾಣಿ ಪ್ರಕಾಶನ, ೨೦೧೧, ಪುಟ ಸಂಖ್ಯೆ ೨೫.
2. ವೆಂಕೋಬರಾವ್ ಡಿ, *ನ್ಯಾಯಕ್ಕಾಗಿ ಮಹಿಳೆಯರ ಹೋರಾಟ*, ಬೆಂಗಳೂರು: ದಿವ್ಯಚಂದ್ರ ಪ್ರಕಾಶನ, ೨೦೦೦, ಪುಟ ಸಂಖ್ಯೆ ೧೫–೧೬.
3. ಶ್ರೀಮತಿ ಎಚ್ ಎಸ್, ಶಿವಾನಂದ ಎಸ್. ಮತ್ತು ಕೃಷ್ಣ ಜೆ, *ಮಹಿಳಾ ಆರ್ಥಿಕತೆ*, ಹಂಪಿ: ಶ್ರೀಮತಿ ಎಚ್ ಎಸ್ ಪ್ರಕಾಶನ, ೨೦೦೭, ಪುಟ ಸಂಖ್ಯೆ ೧, ೩೭–೩೯.
4. ಶಿವಚಿತ್ತಪ್ಪ ಕೆ, *ಮಹಿಳಾಭಿವೃದ್ಧಿಯ ಆಯಾಮಗಳು*, ಮೈಸೂರು: ಜ್ಞಾನೋದಯ ಪಬ್ಲಿಕೇಷನ್ಸ್, ೨೦೧೧, ಪುಟ ಸಂಖ್ಯೆ ೧೦೨.
5. ಜಯಶೀಲ, ಮೇಗಲಮನಿ ಶೌಕತ್ ಆಲಿ ಎಂ ಮತ್ತು ಎಸ್. ಸುಧಾಕರ, *ಮಹಿಳೆ ಮತ್ತು ಅಭಿವೃದ್ಧಿ*, ಕಿಸಾನ್ ಪಬ್ಲಿಕೇಷನ್ಸ್, ೨೦೦೭, ಪುಟ ಸಂಖ್ಯೆ ೨೪೦.
6. ನೇಮಿಚಂದ್ರ, *ಮಹಿಳಾ ಅಧ್ಯಯನ*, ಬೆಂಗಳೂರು: ಅಂಕಿತ ಪುಸ್ತಕ, ೨೦೦೧, ಪುಟ ಸಂಖ್ಯೆ ೫–೧೦.
7. ರತ್ನಮ್ಮ ಕೆ. ಎಸ್. ಮತ್ತು ಗಾಯತ್ರಿ ಸ.ನ, *ಮಹಿಳಾ ಮೀಸಲಾತಿ*, ಮೈಸೂರು: ಈಶ್ವರಿ ಪ್ರಕಾಶನ, ೨೦೦೫, ಪುಟ ಸಂಖ್ಯೆ ೨೦–೨೪.
8. ಭಟ್ ಮನೋರಮಾ ಎಂ, *ಹೆಣ್ಣಿಗೇಕೆ ಈ ಶಿಕ್ಷೆ?*, ನಾಗರಿಕ ಸೇವಾ ಟ್ರಸ್ಟ್ ಮತ್ತು ಕರಾವಳಿ ಮಹಿಳಾ ಜಾಗೃತಿ ವೇದಿಕೆ, ೨೦೦೪, ಪುಟ ಸಂಖ್ಯೆ ೧೫–೨೦.

9. ನೇಮಿಚಂದ್ರ, ಹೋರಾಟದ ಹಾದಿಯಲ್ಲಿ ಧೀಮಂತ ಮಹಿಳೆಯರು, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ೨೦೧೫, ಪುಟ ಸಂಖ್ಯೆ ೧೪.

10. ಶ್ರೀಮತಿ ಎಚ್. ಎಸ್, ಆಧುನಿಕ ಭಾರತದಲ್ಲಿ ಮಹಿಳೆ, ಹಂಪಿ: ಪ್ರಸಾರಾಂಗ ಪ್ರಕಟಣಾ ವಿಭಾಗ, ೨೦೦೧, ಪುಟ ಸಂಖ್ಯೆ ೮–೧೧.

11. ಬಿ.ಹೆಚ್.ಆಂಜನಪ್ಪ, ಮಹಿಳೆ ಮತ್ತು ದುಡಿಮೆ , ಬೆಂಗಳೂರು: ಸೃಷ್ಟಿ ಪಬ್ಲಿಕೇಷನ್ಸ್, ೨೦೦೬, ಪುಟ ಸಂಖ್ಯೆ ೨೬೧.

12. ಪಾಂಡ ಪ್ರದೀಪ್ ಕುಮಾರ್, "ಪಾವರ್ಟಿ ಆ್ಯಂಡ್ ಯಂಗ್ ವುಮೆನ್ಸ್ ಎಂಪ್ಲೋಯ್‌ಮೆಂಟ್", ಇಕನೋಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ಸಂಪುಟ ೩೮, ಸಂಖ್ಯೆ ೩೮ ೨೦ ಸೆಪ್ಟೆಂಬರ್ ೨೦೦೩.

13. ಸರವನನ್ ವೆಲಯುಧಮ್ "ವುಮೆನ್ಸ್ ಎಂಪ್ಲೋಯ್‌ಮೆಂಟ್ ಆ್ಯಂಡ್ ರಿಡಕ್ಷನ್ ಆಫ್ ಚೈಲ್ಡ್ ಲೇಬರ್", ಇಕನೋಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ಸಂಪುಟ ೩೭, ಸಂಖ್ಯೆ ೫೨, ೨೮ ಡಿಸೆಂಬರ್ ೨೦೦೨.

14. ವೆಂಕಟೇಶ್ ಸಿ.ಡಿ, ಮಹಿಳಾ ಅಧ್ಯಯನದ ನೆಲೆಗಳು, ಬೆಂಗಳೂರು: ಶ್ರೀ ಶಿರಡಿ ಸಾಯಿ ಎಂಟರ್ ಪ್ರೈಸಸ್, ೨೦೧೦, ಪುಟ ಸಂಖ್ಯೆ ೧೮–೨೩.

15. ಪಾಲನೀಸ್ವಾಮಿ ಟಿ, "ಎಂಪವರ್‌ಮೆಂಟ್ ಆಫ್ ರೂರಲ್ ವುಮೆನ್ ತ್ರೂ ಸೆಲ್ಫ್ ಎಂಪ್ಲೋಯ್ಮೆಂಟ್", ಸಂಪುಟ ೨, ಸಂಚಿಕೆ ೬, ೨೦೧೨.

16. ಅಪ್ಪರಾಯ ಶೇಖರ, "ವುಮೆನ್ ಆ್ಯಂಡ್ ಸೆಲ್ಫ್ ಎಂಪ್ಲೋಯ್ಮೆಂಟ್: ಒಪೋರ್ಚುನಿಟೀಸ್ ಆ್ಯಂಡ್ ಚಾಲೆಂಜಸ್", ಸಮಾಜಶಾಸ್ತ್ರ, ಸಂಪುಟ ४, ಸಂಚಿಕೆ ೫. ಮೇ ೨೦೧೫

17. ಶ್ರೀವಾಸ್ತವ ಎನ್ ಮತ್ತು ಶ್ರೀವಾಸ್ತವ ಆರ್, "ವುಮೆನ್ಸ್, ವರ್ಕ್ ಆ್ಯಂಡ್ ಎಂಪ್ಲೋಯ್ಮೆಂಟ್ ಔಟ್ಕಂಮ್ಸ್ ಇನ್ ರೂರಲ್ ಇಂಡಿಯಾ", ಇಕನೋಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ೪೫, ಸಂಖ್ಯೆ ೨೮, ೧೦ ಜುಲೈ ೨೦೧೦.

18. ರುಸ್ತಗಿ ಪ್ರೀತ್ "ಎಂಪ್ಲೋಯ್‌ಮೆಂಟ್ ಟ್ರೆಂಡ್ಸ್ ಫೊರ್ ವುಮೆನ್ಸ್ ಇನ್ ಇಂಡಿಯಾ", ೨೦೧೦.

19. ಭವ್ಯ ಹೆಚ್.ಪಿ, ಮಹಿಳಾ ಸ್ವ ಸಹಾಯ ಸಂಘಗಳು ಮತ್ತು ಆರ್ಥಿಕ ಸಬಲೀಕರಣ, ಮೈಸೂರು: ತಾರಾ ಪ್ರಿಂಟಿಂಗ್ ಆ್ಯಂಡ್ ಪಬ್ಲಿಷಿಂಗ್ ಹೌಸ್, ೨೦೧೩, ಪುಟ ಸಂಖ್ಯೆ ೨೫–೩೫.

20. ಹೆಗ್ಗಡೆ ಒಡೆಯರ್ ಡಿ., ಮಹಿಳಾ ಅಧ್ಯಯನಗಳು, ಬೆಂಗಳೂರು: ಸಿ.ಪಿ. ಇನ್ನೋವೇಷನ್ಸ್, ೨೦೧೧, ಪುಟ ಸಂಖ್ಯೆ ೭೨, ೧೩೬–೧೪೪.

21. ರಾಚಪ್ಪಾಜಿ ಎಂ ಮತ್ತು ನಾಗರಾಜು ಎಸ್, ಮಹಿಳಾ ಸಬಲೀಕರಣದ ವಿವಿಧ ಹೆಜ್ಜೆಗಳು, ಕೊಳ್ಳೇಗಾಲ: ಸಂದೀಪ್ ಪ್ರಕಾಶನ, ೨೦೧೦, ೩೫–೪೦.

22. ಜಾರ್ಜೆಲ್ಲಿಸ್ ಯನ್ನಿಸ್ ಮತ್ತು ಹೋವರ್ಡ್, *ಜೆಂಡರ್ ಡಿಫರೆನ್ಸಸ್ ಇನ್ ಸೆಲ್ಫ್ ಎಂಪ್ಲೊಯ್‌ಮೆಂಟ್*, ೨೦೦೪.

23. ಕಾಂಬಳೆ ಉತ್ತಮ ಅ, *ಗ್ರಾಮೀಣ ಮಹಿಳೆಯರ ಸಾಮಾಜಿಕ ಆರ್ಥಿಕ ಹಿನ್ನೆಲೆ*, ಬೆಂಗಳೂರು: ಸಚಿನ್ ಪಬ್ಲಿಷರ್ಸ್, ೨೦೧೧, ಪುಟ ಸಂಖ್ಯೆ ೨೭–೩೨.

ಅಧ್ಯಾಯ–೨

ಅಧ್ಯಯನದ ಪ್ರದೇಶ ಪರಿಚಯ ಮತ್ತು ಸ್ವ ಉದ್ಯೋಗದ ಆಯ್ಕೆ

ಹಿಂದಿನ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯ ಬಗ್ಗೆ ವಿವರಿಸಲಾಗಿದ್ದು ಪ್ರಸ್ತುತ ಅಧ್ಯಾಯವು ಅಧ್ಯಯನ ಕ್ಷೇತ್ರಕಾರ್ಯವಾದ ಮಂಗಳೂರು ತಾಲೂಕಿನ ಬಗೆಗಿನ ಮಾಹಿತಿ ಮತ್ತು ಈ ತಾಲೂಕಿನಲ್ಲಿರುವ ಸೇವಾ ವಲಯದಲ್ಲಿ ದುಡಿಯುತ್ತಿರುವ ಸ್ವ ಉದ್ಯೋಗಿ ಮಹಿಳೆಯರ ಉದ್ಯೋಗ ಆಯ್ಕೆಗೆ ಇರುವ ಕಾರಣಗಳ ಬಗ್ಗೆ ವಿವರಣೆ ನೀಡುತ್ತದೆ.

ಒಂದು ಕಾಲದಲ್ಲಿ ದಕ್ಷಿಣ ಕನ್ನಡ ಬಹು ದೊಡ್ಡ ಜಿಲ್ಲೆಯಾಗಿ ೮ ತಾಲೂಕುಗಳನ್ನು ಒಳಗೊಂಡಿತ್ತು. ೧೫೬೦ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ವಿಜಯನಗರ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಆ ನಂತರ ೧೭೬೩ರಲ್ಲಿ ಹೈದರಾಲಿಯು ಮೈಸೂರು ರಾಜ್ಯಕ್ಕೆ ಈ ಜಿಲ್ಲೆಯನ್ನು ಸೇರಿಸಿದನು. ಆ ಬಳಿಕ ಆತನ ಮಗನಾದ ಟಿಪ್ಪು ಸುಲ್ತಾನನು ಈ ಜಿಲ್ಲೆಯನ್ನು ಆಳುತ್ತಿದ್ದು ೧೭೯೯ ರ ಮೈಸೂರು ಕದನದ ಬಳಿಕ ಬ್ರಿಟಿಷ್ ಸಾಮ್ರಾಜ್ಯದ ಒಂದು ಅಂಗವಾಗಿದೆ. ಸ್ವಾತಂತ್ರ್ಯದ ನಂತರ ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯದ ರಚನೆಯ ಬಳಿಕ ಇದು ಕರ್ನಾಟಕದ ೨೦ ಜಿಲ್ಲೆಗಳಲ್ಲಿ ಒಂದಾಗಿ ಅಸ್ತಿತ್ವಕ್ಕೆ ಬಂತು. ೧೯೯೭ರಲ್ಲಿ ಜಿಲ್ಲೆಯು ವಿಭಜಿಸಲ್ಪಟ್ಟು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಾಗಿ ರೂಪುಗೊಂಡಿತು.

ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕದ ಕಡಲ ಕಿನಾರೆಯನ್ನು ಹೊಂದಿದ ಜಿಲ್ಲೆಗಳ ಪೈಕಿ ಒಂದಾಗಿದೆ. ಜಿಲ್ಲೆಯು ಸುಮಾರು ೬೦ ಕಿ.ಮೀ ಉದ್ದದ ಅರಬ್ಬೀ ಸಮುದ್ರದ ಕಡಲ ತೀರವನ್ನು ಹೊಂದಿದೆ. ದಕ್ಷಿಣ ಕನ್ನಡ ಜಿಲ್ಲೆಯು ಒಟ್ಟು ೪೮೫೯ ಚದರ ಕಿ.ಮೀ ವಿಸ್ತೀರ್ಣ ಪ್ರದೇಶವನ್ನು ಒಳಗೊಂಡಿದೆ. ಜಿಲ್ಲೆಯ ಪೂರ್ವ ದಿಕ್ಕಿನಲ್ಲಿ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿವೆ. ದಕ್ಷಿಣದಲ್ಲಿ ಕೊಡಗು ಜಿಲ್ಲೆ ಹಾಗೂ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯಿದೆ. ಉತ್ತರದಲ್ಲಿ ಉಡುಪಿ ಜಿಲ್ಲೆಯಿದೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರಾಕೃತಿಕವಾಗಿ ಕರಾವಳಿ ಪ್ರದೇಶ (ಮಂಗಳೂರು ತಾಲೂಕು), ಒಳನಾಡು ಪ್ರದೇಶ (ಬಂಟ್ವಾಳ, ಪುತ್ತೂರು ಹಾಗೂ ಬೆಳ್ತಂಗಡಿ ತಾಲೂಕಿನ ಕೆಲವು ಭಾಗಗಳು) ಹಾಗೂ ಪಶ್ಚಿಮ ಘಟ್ಟಗಳ ಪ್ರದೇಶ (ಸುಳ್ಯ ಹಾಗೂ ಬೆಳ್ತಂಗಡಿ ತಾಲೂಕಿನ ಹೆಚ್ಚಿನ ಭಾಗಗಳು) ಎಂದು ೩ ವಿಭಾಗಗಳಾಗಿ ವಿಂಗಡಿಸಬಹುದು. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯು ಒಳಗೊಂಡಿರುವ ತಾಲೂಕುಗಳೆಂದರೆ ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ, ಬೆಳ್ತಂಗಡಿ. ಉಡುಪಿ ಜಿಲ್ಲೆಯು ಒಳಗೊಂಡಿರುವ ತಾಲೂಕುಗಳೆಂದರೆ ಉಡುಪಿ, ಕುಂದಾಪುರ ಮತ್ತು ಕಾರ್ಕಳ. ಈ ಎರಡೂ ಜಿಲ್ಲೆಗಳನ್ನು ಒಟ್ಟಾಗಿ ತುಳು ನಾಡು ಎಂದು ಕರೆಯಲಾಗುತ್ತದೆ ಯಾಕೆದಂರೆ ಈ

ಪ್ರದೇಶಗಳಲ್ಲಿ ತುಳು ಅತ್ಯಂತ ಜನಪ್ರಿಯ ಭಾಷೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯು "ಪರಶುರಾಮನ ನಾಡು" ಅಥವಾ " ಪರಶುರಾಮನ ಕ್ಷೇತ್ರ" ಎಂದೇ ಪ್ರಖ್ಯಾತವಾಗಿದ್ದು ತನ್ನದೇ ಆದ ಇತಿಹಾಸವನ್ನು ಹೊಂದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರಸ್ಥಳ ಮಂಗಳೂರು ನಗರವು ನೇತ್ರಾವತಿ ಹಾಗೂ ಗುರುಪುರ ನದಿಗಳ ಸಂಗಮದಲ್ಲಿದೆ. ಪಶ್ಚಿಮ ಕರಾವಳಿ ತೀರ ಪ್ರದೇಶವು ಪೌರಾಣಿಕ ಪುರುಷ ಪರಶುರಾಮನ ಸೃಷ್ಟಿ ಎಂದು ದಂತಕಥೆಗಳಿದ್ದು ಮಂಗಳೂರು ಕೂಡಾ ಇದರ ಒಂದು ಭಾಗವಾಗಿದೆ. ಅಲುಪ, ಚೌಟ ಹಾಗೂ ಬಂಗ ಮುಂತಾದ ಅರಸು ಮನೆತನದವರು ಆಳಿದ ನಾಡಿದು. ೧೬ ನೇ ಶತಮಾನದಲ್ಲಿ ಮಂಗಳೂರು ಪೋರ್ಚುಗೀಸರ ವಶವಾದಾಗ ಉಳ್ಳಾಲದ ರಾಣಿ ಅಬ್ಬಕ್ಕ ದೇವಿಯು ಅವರನ್ನು ಹೊಡೆದಟ್ಟಿ ವಶಪಡಿಸಿಕೊಂಡಿದ್ದಳು. ೧೭೯೯ರಲ್ಲಿ ಈ ಪ್ರದೇಶ ಸಂಪೂರ್ಣವಾಗಿ ಬ್ರಿಟಿಷರ ಸ್ವಾದೀನವಾಯಿತು. ೧೮೬೬ರಲ್ಲಿ ಬ್ರಿಟಿಷರು ಮಂಗಳೂರು ನಗರಸಭೆಯನ್ನು ರಚನೆ ಮಾಡಿದರು. ೧೯೪೭ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಾಗ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮದ್ರಾಸು ಪ್ರಾಂತ್ಯಕ್ಕೆ ಸೇರಿತ್ತು. ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗ ಮಂಗಳೂರು ನಗರವು ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರವಾಗಿ ರೂಪುಗೊಂಡಿತು.[1] ಸ್ಥಳೀಯ ಹಿಂದೂ ದೇವತೆಯಾದ ಮಂಗಳಾದೇವಿಯಿಂದ ಮಂಗಳೂರು ತನ್ನ ಹೆಸರನ್ನು ಪಡೆದುಕೊಂಡಿದೆ. ಮಂಗಳೂರು ನಗರವು ಉತ್ತರಕ್ಕೆ ೧೨-೫೨ ಡಿಗ್ರಿ ಅಕ್ಷಾಂಶ ಮತ್ತು ಪೂರ್ವಕ್ಕೆ ೭೪-೪೭ ಡಿಗ್ರಿ ರೇಖಾಂಶದಲ್ಲಿ ಗುರುತಿಸಲ್ಪಟ್ಟಿದೆ. ೨೦೧೧ರ ಜನಗಣತಿಯ ಪ್ರಕಾರ ಮಂಗಳೂರಿನ ಭೌಗೋಳಿಕ ವಿಸ್ತೀರ್ಣವು ೯೨೩ ಚ.ಕಿ.ಮೀ ಆಗಿದೆ. ಮಂಗಳೂರು ನಗರ ಸಮೂಹವು ದಕ್ಷಿಣದಲ್ಲಿ ಉಳ್ಳಾಲದಿಂದ ೪೦ ಕಿ.ಮೀ. ದೂರದಲ್ಲಿದ್ದು, ಉತ್ತರದಲ್ಲಿ ಮುಲ್ಕಿಗೆ ವಿಸ್ತರಿಸಿದೆ. ಪೂರ್ವದಿಂದ ಪಶ್ಚಿಮ ಘಟ್ಟಗಳು, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಈ ನಗರವನ್ನು ಸುತ್ತುವರಿದಿದೆ. ಮಹಾರಾಷ್ಟ್ರದ ಪಾನ್ವೆಲ್‌ನಿಂದ ಕನ್ಯಾಕುಮಾರಿವರೆಗೆ ಸಂಪರ್ಕ ಕಲ್ಪಿಸುವ, ಮಂಗಳೂರು ಮತ್ತು ಮಹಾರಾಷ್ಟ್ರದ ಶೋಲಾಪುರದ ನಡುವೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಗಳನ್ನೊಳಗೊಂಡಿದೆ. ಭಾರತದ ಕರ್ನಾಟಕ ರಾಜ್ಯದ ಪಶ್ಚಿಮ ಕರಾವಳಿ ತೀರದಲ್ಲಿರುವ ಮಂಗಳೂರು ನಮ್ಮ ದೇಶದ ಒಂದು ಪ್ರಮುಖ ವಾಣಿಜ್ಯ ನಗರವಾಗಿದೆ. ಮಂಗಳೂರು ಕಡಲತೀರಗಳಿಗೆ ಮತ್ತು ಕೈಗಾರಿಕೆಗಳಿಗೆ ತುಂಬಾ ಹೆಸರುವಾಸಿಯಾಗಿದೆ. ವ್ಯಾಪಾರ ಮತ್ತು ರಾಜಕೀಯ ಬೆಳವಣಿಗಳ ಕಾರಣದಿಂದ ನಗರದ ವಿಸ್ತರಣೆಯಗುತ್ತಾ ಹೋಯಿತು. ವ್ಯಾಪಾರ, ಗುಡಿಕೈಗಾರಿಕೆ, ಶಿಕ್ಷಣ, ಮತ್ತು ಕೈಗಾರಿಕೆಗಳ ಬೆಳವಣಿಗೆ ನಗರವನ್ನು ಬೆಳಸಲು ಕಾರಣವಾದವು. ಈ ನಗರವು ಬ್ಯಾಂಕಿಂಗ್, ವಾಣಿಜ್ಯ, ಶಿಕ್ಷಣ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆ. ನವ ಮಂಗಳೂರು ಬಂದರು ಭಾರತದ ೯ನೇ ಅತೀ ದೊಡ್ಡ ಸರಕು ನಿರ್ವಹಣಾ ಬಂದರಾಗಿದೆ. ಇದು ಭಾರತದ ಕಾಫಿ ಮತ್ತು ಗೋಡಂಬಿ ರಫ್ತುಗಳಲ್ಲಿ ಶೇ.೭೫ ರಷ್ಟು ನಿಭಾಯಿಸುತ್ತದೆ. ಕೊಂಕಣ್‌ರೈಲ್ವೆ ಸಹಿತ ದೇಶದ ವಿವಿಧ ಪ್ರಮುಖ ನಗರಗಳಿಗೆ ಸಂಪರ್ಕ ಕಲ್ಪಿಸುವ ರೈಲು ಮಾರ್ಗವಿದೆ. ಕೆಂಜಾರು ಎಂಬ ಪ್ರದೇಶದಲ್ಲಿ ಅಂತರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣವಿದೆ. ಇಲ್ಲಿನ ಪ್ರಮುಖ ಭಾಷೆಗಳು ತುಳು, ಕೊಂಕಣಿ, ಕನ್ನಡ ಮತ್ತು

ಬ್ಯಾರಿ ಭಾಷೆ. ಮಂಗಳೂರು ನಗರಕ್ಕೆ ತುಳು ಭಾಷೆಯಲ್ಲಿ 'ಕುಡ್ಲಾ' ಎಂದು ಕರೆಯುತ್ತಾರೆ. ಮಂಗಳೂರಿಗೆ ವಿವಿಧ ಹೆಸರುಗಳಿವೆ. ಕ್ರಿಶ್ಚಿಯನ್ನರು 'ಕೊಡಿಯಾಳ್' ಎಂದೂ, ಮುಸ್ಲಿಂ ಭಾಂದವರು 'ಮೈಕಾಲ' ಎಂದೂ, ಮಲಯಾಳಂ ಭಾಷೆಯಲ್ಲಿ 'ಮಂಗಲಪುರಂ' ಎಂದು ಕರೆಯುತ್ತಾರೆ. ಹೀಗೆ ಬೇರೆ ಬೇರೆ ಜಾತಿ, ಭಾಷೆ, ಧರ್ಮಕ್ಕೆ ಸೇರಿದ ಜನರು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಮಂಗಳೂರಿನ ನಿವಾಸಿಯೊಬ್ಬರನ್ನು ತುಳುವಿನಲ್ಲಿ "ಕುಡ್ಲದಾರ್" ಎಂದೂ, ಕನ್ನಡದಲ್ಲಿ "ಮಂಗಳೂರಿನವರು" ಎಂದೂ, ಕ್ಯಾಥೋಲಿಕ್ ಕೊಂಕಣಿಯಲ್ಲಿ "ಕೊಡಿಯಲ್ಗೊ/ಕೊಡಿಯಲ್ಚಿ" ಎಂದೂ, ಆಂಗ್ಲ ಭಾಷೆಯಲ್ಲಿ "ಮ್ಯಾಂಗಲೋರಿಯನ್" ಎಂದೂ ಕರೆಯುತ್ತಾರೆ. ಹಿಂದೂ ಧರ್ಮದ ಶೈವ, ವೈಷ್ಣವ, ಶಾಕ್ತ, ಗಾಣಪತ್ಯ, ಬ್ರಹ್ಮ ಜೊತೆಗೆ ಕೋಲ, ನೇಮಗಳ ಅವಾಸಸ್ಥಾನವೂ ಈ ಮಂಗಳೂರು. ಮುಸ್ಲಿಂ ಧರ್ಮದ ಮಸೀದಿಗಳು ಮತ್ತು ದರ್ಗಾಗಳು, ರೋಮನ್ ಕ್ರೈಸ್ತ ಪಂಥದ ಮತ್ತು ಪ್ರೊಟೆಸ್ಟೆಂಟ್ ಪಂಥದ ಇಗರ್ಜಿಗಳು, ಜೈನ ಬಸದಿ, ವೀರಶೈವ ಮಠಗಳ ಜೊತೆಗೆ ಸಿಖ್ಖರ ಗುರುದ್ವಾರವು ಮಂಗಳೂರಿನ ಬಹು ಧರ್ಮದ ಸಾಮರಸ್ಯವನ್ನು ವಿವರಿಸುತ್ತದೆ. ಮಂಗಳೂರಿನ ಜನವಸತಿ ಕೂಡ ಸಮುದಾಯಾಧಾರಿತವಾಗಿದ್ದುದು ಕಂಡು ಬರುತ್ತದೆ. ಮುಸಲ್ಮಾನರು ಬಂದರು, ಬೋಳಾರ, ಕುದ್ರೋಳಿ ಪ್ರದೇಶಗಳಲ್ಲಿ; ಕ್ರಿಶ್ಚಿಯನ್ನರು ಜಪ್ಪು, ಕಂಕನಾಡಿ, ಬಲ್ಮಠ ಮತ್ತು ಬಿಜೈಗಳಲ್ಲಿ; ಕೊಂಕಣಿಗರು ರಥಬೀದಿ, ಡೊಂಗರಕೇರಿ, ಕೊಡಿಯಾಲ್‌ಬೈಲ್‌ಗಳಲ್ಲಿ; ಗುಜರಾತಿಗಳು ಬಂದರ್, ರಥಬೀದಿ, ಕುದ್ರೋಳಿ, ಅಳಕೆ, ಮಣ್ಣಗುಡ್ಡ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಸತಿ ಹೊಂದಿದ್ದರು.[3] ನಗರ ಬೆಳೆಯುತ್ತಿದ್ದಂತೆ ಬಲ್ಮಠ, ಬಾವುಟಗುಡ್ಡೆ, ದೇರೆಬೈಲ್, ಮರೋಳಿ ಮುಂತಾದ ಪ್ರದೇಶಗಳಲ್ಲಿ ಕೆಲವು ಸಮುದಾಯದವರು ವಸತಿಯನ್ನು ನಿರ್ಮಿಸಿಕೊಂಡಿದ್ದರು. ಆದರೆ ಈ ಎಲ್ಲರಿಗೂ ಬಂದರು ಪ್ರದೇಶ ಮುಖ್ಯನ ವ್ಯವಹಾರ ಕೇಂದ್ರವಾಗಿತ್ತು. ಆಸ್ಟ್ರೇಲಿಯಾ ದೇಶದ ವಿಕ್ಟೋರಿಯ ರಾಜ್ಯದಲ್ಲಿಯೂ ಮಂಗಳೂರು ಎಂಬ ಹೆಸರಿನ ಊರು ಇದೆ.

ಮಂಗಳೂರು ನಗರದ ಜನಸಂಖ್ಯಾ ಬೆಳವಣಿಗೆ

ನಗರದಲ್ಲಿ ಜನಸಂಖ್ಯಾ ಬೆಳವಣಿಗೆಯು ೧೯೬೧ರಲ್ಲಿ ೧,೪೩,೦೦೦; ೧೯೭೧ರಲ್ಲಿ ೧,೬೫,೦೦೦; ೧೯೮೧ರಲ್ಲಿ ೨,೦೧,೦೦೦; ೧೯೯೧ರಲ್ಲಿ ೩,೪೬,೦೦೦; ೨೦೦೧ರಲ್ಲಿ ೪,೧೯,೩೦೬; ೨೦೧೦ರಲ್ಲಿ ೪,೬೭,೯೩೬; ೨೦೧೫ರಲ್ಲಿ ೪,೯೪,೧೧೧ ಆಗಿರುತ್ತದೆ.

೨೦೧೧ ರ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆಯು ೨೦,೮೯,೬೪೯. ಪುರುಷರು ೧೦,೩೪,೭೧೪; ಮಹಿಳೆಯರು ೧೦,೫೪,೯೩೫. ಇವರಲ್ಲಿ ಹಿಂದೂಗಳು ೧೪,೦೩,೮೫೪, ಮುಸ್ಲಿಮರು ೫,೦೧,೮೯೬, ಕ್ರೈಸ್ತರು ೧,೭೧,೩೯೮, ಸಿಖ್ ೫೨೫, ಬೌದ್ದರು ೪೪೫, ಜೈನರು ೧೦,೩೯೭, ಇತರರು ೧೩೮, ಧರ್ಮದ ಆಧಾರದಲ್ಲಿ ಗುರುತಿಸಿಕೊಳ್ಳದವರು ೯೯೬. ಮಂಗಳೂರು ತಾಲೂಕಿನ ಜನಸಂಖ್ಯೆ ೯,೯೪,೬೦೨. ಇದರಲ್ಲಿ ಪುರುಷರು ೪೯೦೭೯೭ ಮತ್ತು ಮಹಿಳೆಯರು ೫೦೩೮೦೫. ಹಿಂದೂ ೬,೧೭,೨೩೯, ಮುಸ್ಲಿಂ ೨,೩೬,೨೩೧, ಕ್ರೈಸ್ತ ೧,೧೦,೮೩೩, ಸಿಖ್ ೪೪೧, ಬೌದ್ಧ ೩೧೯, ಜೈನ ೪,೧೦೧, ಇತರರು ೧೧೫, ಗುರುತಿಸಿಕೊಳ್ಳದವರು ೭೮೧.

೨೦೧೧ರ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩೩೧ ಜನವಸತಿ ಗ್ರಾಮಗಳು, ೧ ಮಹಾನಗರಪಾಲಿಕೆ, ೨ ಪುರಸಭೆ, ೨ ನಗರಸಭೆ ಹಾಗೂ ೫ ಪಟ್ಟಣ ಪಂಚಾಯತ್‌ಗಳು ಇವೆ.[4] ೨೦೧೧ರ ಜನಗಣತಿ ಅಂಕಿಅಂಶ ಪ್ರಕಾರ ಈ ಜಿಲ್ಲೆಯಲ್ಲಿ ೧೬.೬೬ ಲಕ್ಷ ಜನರು ಅಕ್ಷರಸ್ಥರಾಗಿದ್ದು, ಇದರಲ್ಲಿ ೮.೬೬ಲಕ್ಷ ಗಂಡಸರು ಹಾಗೂ ೮.೦೧ ಲಕ್ಷ ಹೆಂಗಸರಾಗಿರುತ್ತಾರೆ. ಲಿಂಗಾನುಪಾತ ಪ್ರಮಾಣವು ಪ್ರತಿ ೧೦೦೦ ಹುಡುಗರಿಗೆ ೯೪೬ ಹುಡುಗಿಯರು ಆಗಿರುತ್ತದೆ.

ನಗರದ ಭೂದೃಶ್ಯವು ಬೆಟ್ಟಗಳು, ತೆಂಗಿನ ಮರಗಳು, ಸಿಹಿನೀರಿನ ಹೊಳೆಗಳು ಮತ್ತು ಎಲ್ಲೆಲ್ಲೂ ಕಾಣುವ ಕೆಂಪು ಜೇಡಿಮಣ್ಣಿನ ಹಂಚಿನ ಛಾವಣಿಯ ಕಟ್ಟಡಗಳಿಂದ ತನ್ನ ವಿಶಿಷ್ಟತೆಯನ್ನು ಪಡೆದುಕೊಂಡಿದೆ. ಮಂಗಳೂರು ನಗರವು ಜೀವನದ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಏಷ್ಯಾದಲ್ಲಿ ೨ನೇ ಸ್ಥಾನ ಪಡೆದಿದೆ ಹಾಗೂ ಆರೋಗ್ಯ ಜಾಗತಿಕ ಪಟ್ಟಿಯಲ್ಲಿ ೧೨ನೇ ಸ್ಥಾನ ಪಡೆದಿದೆ. ಹರ್ಮನ್ ಮೊಗ್ಲಿಂಗ್‌ನ ಸಂಪಾದಕತ್ವದಲ್ಲಿ "ಮಂಗಳೂರು ಸಮಾಚಾರ" ಕನ್ನಡ ಪತ್ರಿಕೆಯು ಪ್ರಕಟವಾಗತೊಡಗಿದ್ದು ಇದುವೇ ಕನ್ನಡದ ಮೊದಲ ಪತ್ರಿಕೆಯೆಂದು ತಿಳಿಯಲಾಗಿದೆ.[2]

೨.೧ ಮಂಗಳೂರಿನಲ್ಲಿ ಉದ್ಯಮ

ಕರಾವಳಿ ಪ್ರದೇಶವಾದ ಮಂಗಳೂರಿನಲ್ಲಿ ಮೂಲಭೂತ ಸೌಕರ್ಯಗಳು ಹೆಚ್ಚಾಗಿರುವುದರಿಂದ ಜನಸಾಂದ್ರತೆ ಹೆಚ್ಚಾಗಿರುತ್ತದೆ. ಮಂಗಳೂರು ಪಟ್ಟಣದ ಕೇಂದ್ರವಾಗಿ ಬಂದರು ಇತ್ತು. ಇದು ಬಂದರು ನಗರವಾಗಿರುವುದರಿಂದ ವಾಣಿಜ್ಯ ವ್ಯಾಪಾರ ವಹಿವಾಟುಗಳು ಅನಾದಿಕಾಲದಿಂದ ಬೆಳೆಯುತ್ತಾ ಬಂದಿದೆ. ವ್ಯಾಪಾರ ಮತ್ತು ರಾಜಕೀಯ ಬೆಳವಣಿಗೆಗಳ ಕಾರಣದಿಂದ ಮಂಗಳೂರು ನಗರ ವಿಸ್ತರಣೆಗೊಳ್ಳುತ್ತಾ ಹೋಯಿತು. ಪ್ರಾಚೀನ ಕಾಲದಲ್ಲೇ ಅರಬ ದೇಶದ ವ್ಯಾಪಾರಿಗಳು ಇಲ್ಲಿಗೆ ಬಂದು ಸಂಬಾರ ಜಿನಸುಗಳನ್ನು ಕೊಂಡೊಯ್ಯುತ್ತಿದ್ದರೆಂದು ತಿಳಿದು ಬರುತ್ತದೆ. ೧೯ನೇ ಶತಮಾನಕ್ಕಿಂತ ಹಿಂದೆ, ಮಂಗಳೂರಿನ ಆರ್ಥಿಕತೆಯು ಭಾರತದ ಇತರ ಪ್ರದೇಶಗಳಂತೆ ಮುಖ್ಯವಾಗಿ ಕೃಷಿಯ ಮೇಲೆ ಆಧರಿತವಾಗಿತ್ತು. ಇಲ್ಲಿ ಇಂದಿಗೂ ಭತ್ತ, ದ್ವಿದಳ ಧಾನ್ಯಗಳು, ಕಬ್ಬು, ತೆಂಗು ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತದೆ. ೧೯ನೇ ಶತಮಾನದ ಕೊನೆಗೆ ಹಂಚಿನ ಮತ್ತು ಇಟ್ಟಿಗೆ ಕಾರ್ಖಾನೆಗಳು ಅಧಿಕ ಸಂಖ್ಯೆಯಲ್ಲಿ ಜನರಿಗೆ ಉದ್ಯೋಗ ದೊರಕಿಸಿಕೊಟ್ಟವು. ಕ್ರಮೇಣ ಕುಂದಾಪುರ ಮತ್ತು ಗುಜರಾತುಗಳಲ್ಲಿ ಹಂಚಿನ ಉದ್ಯಮವು ಆರಂಭವಾದ ಬಳಿಕ ಮಂಗಳೂರಿನಲ್ಲಿ ಈ ಉದ್ಯಮವು ಕುಂಠಿತವಾಯಿತು. ಇಲ್ಲಿ ಇದ್ದ ೩೯ ಹಂಚಿನ ಕಾಖಾನೆಗಳಲ್ಲಿ ಈಗ ಕೇವಲ ಎರಡು ಮಾತ್ರ ಉಳಿದಿವೆ. ಹಂಚಿನ ಉದ್ಯಮದ ಕ್ಷೀಣಿಸುವಿಕೆ ಬೀಡಿ ಉದ್ಯಮಕ್ಕೆ ನಾಂದಿಯಾಯಿತು. ಮಂಗಳೂರಿನ ಸುತ್ತಮುತ್ತಲಿನ ಹೆಂಗಸರು ಬೀಡಿ ಸುತ್ತುವ ಮೂಲಕ ಬೀಡಿ ಉದ್ಯಮವು ಆರಂಭಗೊಂಡಿತು. ಈ ಕೆಲಸಕ್ಕೆ ಯಾವುದೇ ರೀತಿಯ ಕಟ್ಟಡಗಳ ಅಗತ್ಯವಿಲ್ಲದಿರುವುದರಿಂದ ಇದು ಸಾವಿರಾರು ಜನರಿಗೆ ಕುಳಿತಲ್ಲೇ ಮಾಡುವ ಕೆಲಸವಾಯಿತು. ಆದರೆ ಹೊಗೆಸೊಪ್ಪಿನ ಧಾರಣೆ ಮತ್ತು ವಿವಿಧ ತೆರಿಗೆಗಳ ಹೊಡೆತದಿಂದ ಬೀಡಿ ಉದ್ಯಮ ಕುಸಿಯತೊಡಗಿತು. ೧೯೨೦ರಲ್ಲಿ ಗೋಡಂಬಿ ಉದ್ದಿಮೆಯು ಮಂಗಳೂರಿನಲ್ಲಿ ಪ್ರಾರಂಭವಾಯಿತು. ಮಂಗಳೂರಿನಲ್ಲಿ

ಕಾಫಿ ತೋಟಗಳು ಇಲ್ಲದಿದ್ದರೂ ಅಸುಪಾಸಿನ ಜಿಲ್ಲೆಗಳಾದ ಚಿಕ್ಕಮಗಳೂರು ಮತ್ತು ಕೊಡಗು ಪ್ರದೇಶಗಳಿಂದ ಕಾಫಿ ಬೀಜಗಳನ್ನು ತರಿಸಿ ಕಾಫಿ ಶುದ್ಧೀಕರಿಸುವ ಕಾರ್ಖಾನೆಗಳ ಸ್ಥಾಪನೆಯಾಯಿತು. ಮೀನುಗಾರಿಕೆ ಅಥವಾ ಮತ್ಸ್ಯೋದ್ಯಮದಿಂದ ಅಸಂಖ್ಯಾತ ಬೆಸ್ತರು ಜೀವನ ನಡೆಸುತ್ತಿದ್ದಾರೆ. ಶತಮಾನಗಳಿಂದಲೂ ಮಂಗಳೂರು ದೋಣಿ ಮತ್ತು ಹಡಗು ಕಟ್ಟುವ ಪ್ರದೇಶವಾಗಿದ್ದ ಕಾರಣ ಸಮುದ್ರಯಾನ ಮತ್ತು ಮೀನುಗಾರಿಕೆಗೆ ಸಹಕಾರಿಯಾಯಿತು. ಗಂಡಸರು ಮೀನು ಹಿಡಿಯುವ ಕೆಲಸದಲ್ಲಿ ತೊಡಗಿದರೆ ಹೆಂಗಸರು ಮೀನು ಮಾರುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮೀನಿನ ರಫ್ತು ಮಂಗಳೂರಿನ ಆರ್ಥಿಕ ಪ್ರಗತಿಗೆ ಮುಖ್ಯ ಕೊಡುಗೆಯಾಗಿದೆ. ೨೦೦೧ರಲ್ಲಿ ಮಾಹಿತಿ ತಂತ್ರಜ್ಞಾನ ಉದ್ಯಮವು ಸಣ್ಣ ಮಟ್ಟಿನಲ್ಲಿ ಆರಂಭವಾಗಿ ಈಗ ಸುಮಾರು ೧೨,೦೦೦ ಪದವೀಧರರು ದುಡಿಯುತ್ತಿದ್ದಾರೆ. ಮಂಗಳೂರಿನಲ್ಲಿ ಇರುವಷ್ಟು ಅಲೋಪತಿಕ್, ಆಯುರ್ವೇದಿಕ್, ಹೋಮಿಯೋಪತಿ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳು ಕರ್ನಾಟಕದ ಬೇರೆ ಯಾವ ಜಿಲ್ಲೆಯಲ್ಲೂ ಇಲ್ಲವೆಂದೂ ಹೇಳಬಹುದು. ಹೋಟೆಲು ಮತ್ತು ಆಹಾರ ತಯಾರಿ ಘಟಕಗಳು, ದಕ್ಷಿಣಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ, ಮಂಗಳೂರು ರಾಸಾಯನಿಕ ಗೊಬ್ಬರ ಕಾರ್ಖಾನೆ, ಮಂಗಳೂರು ತೈಲ ಶುದ್ಧೀಕರಣ ಉದ್ಯಮ ಮುಂತಾದ ಉದ್ಯೋಗವಕಾಶಗಳಿವೆ. ಕೆನರಾ ವರ್ಕ್‌ಶಾಪ್ ಮತ್ತು ಸಿ.ಪಿ.ಸಿ.(ಕೆನರಾ ಸಾರ್ವಜನಿಕ ಸಾರಿಗೆ) ಈ ಸಂಸ್ಥೆಗಳನ್ನು ಪ್ರಾರಂಭಿಸಿ ಮಂಗಳೂರಿನ ಉದ್ಯಮಕ್ಕೆ ಚಾಲನೆ ಕೊಟ್ಟವರು ಶ್ರೀನಿವಾಸ ವಿ. ಕುಡ್ವರು. ತದನಂತರ ಅನೇಕ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು ಪ್ರಾರಂಭಗೊಂಡಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮೀಣ ಕರಕುಶಲ ಕಲೆಗಳ ಉದ್ಯಮಗಳಾದ ಬಡಗಿಗಳು, ಕಮ್ಮಾರರು, ಕುಂಬಾರರು, ಕೈಮಗ್ಗ ನೇಯ್ಗೆ, ಬುಟ್ಟಿ ಹೆಣೆಯುವಿಕೆ, ಚಾಪೆ ಹೆಣೆಯುವುದು, ಗಾಣಿಗರು, ಅಕ್ಕಸಾಲಿಗರು, ಸುಣ್ಣ ತಯಾರಿಸುವುದು, ತಾಮ್ರ ಬೆಸುಗೆಯವರು, ಗಂಧದ ಕೆತ್ತನೆಗಾರರು, ಶಿಲ್ಪಿಗಳು, ಕೊಂಬಿನ ಕೆಲಸಗಳು ಇನ್ನೂ ಚಾಲ್ತಿಯಲ್ಲಿವೆ. ಸ್ಥಳೀಯರಿಗೆ ಶಿಕ್ಷಣ, ಕೈಗಾರಿಕೆ, ಮಿಲ್ಲುಗಳು, ಸೈನ್ಯ, ಬಂದರು, ನಿರ್ಮಾಣ ಕಾಮಗಾರಿಗಳಲ್ಲಿ ಉದ್ಯೋಗ ದೊರೆಯಿತು. ಮಂಗಳೂರಿನ ಉಪನಗರವಾದ ಉಳ್ಳಾಲದಲ್ಲಿ ಉಡುಪುಗಳು ಹಾಗೂ ತೆಂಗಿನ ದಾರಗಳನ್ನು ತಯಾರಿಸಲಾಗುತ್ತದೆ. ಮಂಗಳೂರು (ನಗರ) ಯೋಜನೆಯಲ್ಲಿ ೧೪೪ ಸ್ತ್ರೀಶಕ್ತಿ ಗುಂಪುಗಳು ಇದ್ದು ೨೨೫೪ ಸದಸ್ಯರು ಇರುತ್ತಾರೆ.

೨.೨ ಮಹಿಳೆಯರ ಸ್ವ ಉದ್ಯೋಗದ ಆಯ್ಕೆ

ಸೇವಾ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳಾ ಸ್ವ ಉದ್ಯೋಗಕ್ಕೆ ಸಂಬಂಧಿಸಿದಂತೆ ಅವರ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ಅಧ್ಯಯನ ಮಾಡುವ ಉದ್ದೇಶದಿಂದ ಮಂಗಳೂರು ತಾಲೂಕಿನ ೫೦ ಪ್ರತಿಕ್ರಿಯೆದಾರರನ್ನು ಸಂದರ್ಶಿಸಲಾಗಿದೆ. ಮಂಗಳೂರಿನಲ್ಲಿ ಮಹಿಳೆಯರು ಶೇಕಡಾ ೫೦.೫ ರಷ್ಟಿದ್ದು ಈ ಪ್ರದೇಶದಲ್ಲಿ ಮಾತೃಪ್ರಧಾನ ಕುಟುಂಬಗಳೇ ಹೆಚ್ಚಾಗಿ ಕಂಡು ಬರುತ್ತವೆ. ಇದು ಸ್ವ ಉದ್ಯೋಗಕ್ಕೆ ಪ್ರೇರಣೆಯಾಗಿದೆ. ದಕ್ಷಿಣ

ಕನ್ನಡದಲ್ಲಿ ೮.೦೧ಲಕ್ಷ ಮಹಿಳೆಯರು ಶಿಕ್ಷಣ ಹೊಂದಿದ್ದು, ಮಂಗಳೂರು ತಾಲೂಕಿನಲ್ಲಿ ೨.೦೬ ಲಕ್ಷ ಮಹಿಳೆಯರು ವಿದ್ಯಾಭ್ಯಾಸ ಪಡೆದವರಾಗಿದ್ದಾರೆ. ಮಂಗಳೂರಿನಲ್ಲಿ ಮಹಿಳಾ ವಿದ್ಯಾಭ್ಯಾಸದ ಮಟ್ಟವು ಹೆಚ್ಚಿರುವುದರಿಂದ ಮಹಿಳೆಯರು ಸ್ವಾವಲಂಬಿಯಾಗಿರಲು ಬಯಸುತ್ತಿರುವ ಪ್ರಮಾಣ ಹೆಚ್ಚಾಗಿದೆ. ಮಹಿಳೆಯರು ಹೆಚ್ಚಾಗಿ ಕೃಷಿಕ್ಷೇತ್ರವನ್ನು ಬಿಟ್ಟು ಸೇವಾ ವಲಯಕ್ಕೆ ಹೋಗುತ್ತಿರುವುದು ಕಂಡು ಬರುತ್ತಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ಕೃಷಿಕ್ಷೇತ್ರಕ್ಕಿಂತ ಸೇವಾ ಕ್ಷೇತ್ರಕ್ಕೆ ಸಿಗುವ ಪ್ರೋತ್ಸಾಹ ಮತ್ತು ಸೌಲಭ್ಯಗಳು ಹೆಚ್ಚಾಗಿವೆ. ಮಂಗಳೂರು ತಾಲೂಕಿನಲ್ಲಿರುವ ಮಹಿಳೆಯರು ಸ್ವ ಉದ್ಯೋಗವನ್ನು ಮಾಡಿಕೊಂಡಿದ್ದು ಅವರು ಸೇವಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅವರ ಆಯ್ಕೆಗೆ ವಿವಿಧ ಕಾರಣಗಳಿರಬಹುದು. ಉದ್ಯೋಗ ಆಯ್ಕೆ ಮಾಡುವ ಸಂದರ್ಭದಲ್ಲಿ ವಿವಿಧ ವಿಷಯಗಳನ್ನು ಪರಿಗಣಿಸಬೇಕಾಗುತ್ತದೆ. ಉದ್ಯೋಗದಿಂದ ಲಾಭಾಂಶ ಬರಬೇಕಾದರೆ ಉದ್ಯೋಗದ ಆಯ್ಕೆ ಸರಿಯಾಗಿರಬೇಕು. ಮಹಿಳೆಯರ ಸ್ವ ಉದ್ಯೋಗದ ಆಯ್ಕೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಪಡೆದುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

ಕೆಳಗಿನ ಕೋಷ್ಟಕ ೨.೧ ಸೇವಾ ಕ್ಷೇತ್ರದ ಸ್ವ ಉದ್ಯೋಗದ ಕುರಿತು ಪ್ರತಿಕ್ರಿಯೆ ನೀಡಿದ ೫೦ ಸ್ವ ಉದ್ಯೋಗಿಗಳ ವೈಯಕ್ತಿಕ ಅಂಶಗಳ ಬಗ್ಗೆ ಅಂಕಿ ಅಂಶವನ್ನು ನೀಡುತ್ತದೆ. ಪ್ರತಿಕ್ರಿಯೆದಾರರಲ್ಲಿ ಶೇಕಡಾ ೨೮ರಷ್ಟು ಅಂದರೆ ೧೪ ಮಂದಿ ೩೦ ಕ್ಕಿಂತ ಕಡಿಮೆ ವರ್ಷದೊಳಗಿನವರಾಗಿದ್ದು, ಶೇಕಡಾ ೬೪ರಷ್ಟು ಅಂದರೆ ೩೨ ಮಂದಿ ೩೦ ರಿಂದ ೫೦ ವರ್ಷದವರಾಗಿದ್ದು, ಶೇಕಡಾ ೮ರಷ್ಟು ಅಂದರೆ ೪ ಜನರು ೫೦ ವರ್ಷಕ್ಕಿಂತ ಮೇಲ್ಪಟ್ಟವರು. ಪ್ರತಿಕ್ರಿಯೆದಾರರಲ್ಲಿ ಶೇಕಡಾ ೨೦ರಷ್ಟು ಅವಿವಾಹಿತೆಯರು, ಶೇಕಡಾ ೭೨ ವಿವಾಹಿತೆಯರು, ಶೇಕಡಾ ೪ ವಿಧವೆಯರು ಹಾಗೂ ಶೇಕಡಾ ೪ ವಿಚ್ಛೇದಿತೆಯರು. ಪ್ರತಿಕ್ರಿಯೆದಾರರಲ್ಲಿ ಶೇಕಡಾ ೩೫.೧ ಮಂದಿ ೧ ಮಗುವನ್ನು, ಶೇಕಡಾ ೪೮.೭ ಮಂದಿ ೨ ಮಕ್ಕಳನ್ನು ಹಾಗೂ ಶೇಕಡಾ ೧೬.೨ ಮಂದಿ ೩ ಮಕ್ಕಳನ್ನು ಹೊಂದಿರುವವರು. ಶೇಕಡಾ ೬೦ ರಷ್ಟು ಸ್ವ ಉದ್ಯೋಗಿಗಳು ಹಿಂದೂ ಧರ್ಮಕ್ಕೆ, ಶೇಕಡಾ ೪ ಮುಸ್ಲಿಂ ಧರ್ಮಕ್ಕೆ ಹಾಗೂ ಶೇಕಡಾ ೩೬ ರಷ್ಟು ಕ್ರೈಸ್ತ ಧರ್ಮಕ್ಕೆ ಸೇರಿದವರು. ಪ್ರತಿಕ್ರಿಯೆದಾರರಲ್ಲಿ ಶೇಕಡಾ ೦೮ ಜನ ಪ್ರಾಥಮಿಕ ಶಿಕ್ಷಣ ಪಡೆದವರಾಗಿದ್ದು, ಶೇಕಡಾ ೨೪ ಜನ ಪ್ರೌಢ ಶಿಕ್ಷಣ, ಶೇಕಡಾ ೪೦ ಜನ ಪದವಿಪೂರ್ವ, ಶೇಕಡಾ ೧೨ ಜನ ಪದವಿ, ಶೇಕಡಾ ೧೬ ಸ್ನಾತಕೋತ್ತರ ಪದವಿ ಪಡೆದವರಾಗಿದ್ದಾರೆ. ಪ್ರತಿಕ್ರಿಯೆದಾರರಲ್ಲಿ ಶೇಕಡಾ ೭೨ ಜನರು ೧ ಲಕ್ಷಕ್ಕಿಂತ ಕಡಿಮೆ ಆದಾಯ ಹೊಂದಿರುವವರು, ಶೇಕಡಾ ೧೬ ಮಂದಿ ೧ ಲಕ್ಷದಿಂದ ೩ ಲಕ್ಷದವರೆಗೆ, ಶೇಕಡಾ ೮ರಷ್ಟು ಜನರು ೫ ಲಕ್ಷಕ್ಕಿಂತ ಮೇಲ್ಪಟ್ಟು ಆದಾಯ ಹೊಂದಿದವರಾಗಿದ್ದಾರೆ.

ಕೋಷ್ಟಕ ೨.೧ ಪ್ರತಿಕ್ರಿಯೆದಾರರ ಸಂಕ್ಷಿಪ್ತ ವಿವರಗಳು

ವೈಯಕ್ತಿಕ ಅಂಶಗಳು		ವಯಸ್ಸು			ಒಟ್ಟು
		೩೦ಕ್ಕಿಂತ ಕಡಿಮೆ	೩೦–೫೦	೫೦ಕ್ಕಿಂತ ಮೇಲ್ಪಟ್ಟು	
ವೈವಾಹಿಕ ಸ್ಥಿತಿ	ಅವಿವಾಹಿತೆ	೧೦(೭೧.೪)	–	–	೧೦ (೨೦)
	ವಿವಾಹಿತೆ	೦೨(೧೪.೩)	೩೦(೯೩.೮)	೦೪(೧೦೦)	೩೬(೭೨)
	ವಿಧವೆ	–	೦೨(೬.೨)	–	೦೨(೦೪)
	ವಿಚ್ಛೇದಿತೆ	೦೨(೧೪.೩)	–	–	೦೨(೦೪)
ಮಕ್ಕಳ ಸಂಖ್ಯೆ	೧ ಮಗು	೦೧(೧೦೦)	೧೨ (೩೭.೫)	–	೧೩(೩೫.೧)
	೨ ಮಕ್ಕಳು	–	೧೪(೪೩.೮)	೦೪(೧೦೦)	೧೮(೪೮.೭)
	೩ ಮಕ್ಕಳು	–	೦೬(೧೮.೭)	–	೦೬(೧೬.೨)
	೪ ಮಕ್ಕಳಿಗಿಂತ ಮೇಲ್ಪಟ್ಟು	–	–	–	–
ಧರ್ಮ	ಹಿಂದೂ	೧೦(೭೧..೪)	೨೦(೬೨.೫)	–	೩೦(೬೦)
	ಮುಸ್ಲಿಂ	೦೨(೧೪.೩)	–	–	೦೨(೦೪)
	ಕ್ರಿಶ್ಚಿಯನ್	೦೨(೧೪.೩)	೧೨(೩೭.೫)	೦೪(೧೦೦)	೧೮(೩೬)
ಶಿಕ್ಷಣ	ಪ್ರಾಥಮಿಕ	–	೦೪(೧೨.೫)	–	೦೪(೦೮)
	ಪ್ರೌಢಶಿಕ್ಷಣ	೦೨(೧೪.೨)	೧೦(೩೧.೩)	–	೧೨(೨೪)
	ಪದವಿಪೂರ್ವ	೦೬(೪೨.೯)	೧೨(೩೭.೫)	೦೨(೫೦)	೨೦(೪೦)
	ಪದವಿ	–	೦೪(೧೨.೫)	೦೨(೫೦)	೦೬(೧೨)
	ಸ್ನಾತಕೋತ್ತರ	೦೬(೪೨.೯)	೦೨(೬.೨)	–	೦೮(೧೬)
ಆದಾಯ	೧ ಲಕ್ಷಕ್ಕಿಂತ ಕಡಿಮೆ	೧೪(೨೮)	೨೨(೪೪)	–	೩೬(೭೨)
	೧–೩ ಲಕ್ಷ	–	೦೬(೧೨)	೦೨(೦೪)	೦೮(೧೬)
	೩–೫ ಲಕ್ಷ	–	೦೨(೦೪)	೦೨(೦೪)	೦೪(೦೮)
	೫ ಲಕ್ಷಕ್ಕಿಂತ ಮೇಲ್ಪಟ್ಟು	–	೦೨(೦೪)	–	೦೨(೦೪)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ


ಮುಂದಿನ ಕೋಷ್ಟಕ ೨.೨ ರಲ್ಲಿ ಮಹಿಳಾ ಸ್ವ ಉದ್ಯೋಗಿಗಳು ಅವರ ವಯಸ್ಸಿಗನುಗುಣವಾಗಿ ಸ್ವ ಉದ್ಯೋಗ ಆಯ್ಕೆ ಮಾಡಲು ಇರುವ ಕಾರಣಗಳ ಅಂಕಿ ಅಂಶಗಳನ್ನು ನೀಡಲಾಗಿದೆ.

ಕೋಷ್ಟಕ ೨.೨ ವಯಸ್ಸಿಗನುಗುಣವಾಗಿ ಸ್ವ ಉದ್ಯೋಗದ ಆಯ್ಕೆಗೆ ಕಾರಣ

ವಯಸ್ಸು	ಸ್ವ ಉದ್ಯೋಗ ಆಯ್ಕೆಗೆ ಕಾರಣ				
	ಶೈಕ್ಷಣಿಕ ಅರ್ಹತೆ	ಕುಟುಂಬದ ಸದಸ್ಯರ ಆಯ್ಕೆ	ಹಣಕಾಸಿನ ನೆರವಿದ್ದುದರಿಂದ	ಸೂಕ್ತ ತರಬೇತಿ ದೊರಕುವಿಕೆ	ಇತರ
೩೦ಕ್ಕಿಂತ ಕಡಿಮೆ	–	–	೨(೧೪.೩)	೧೦(೧೪.೩)	೨(೭೧.೪)
೩೦–೫೦	೧೦(೩೧.೩)	೨(೬.೩)	–	೬(೧೮.೭)	೧೪(೪೩.೭)
೫೦ಕ್ಕಿಂತ ಮೇಲ್ಪಟ್ಟು	–	–	೨(೫೦)	–	೨(೫೦)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ನಕ್ಷೆ ೨.೧




೫೦ ಪ್ರತಿಕ್ರಿಯೆದಾರರಲ್ಲಿ ಶೇಕಡಾ ೨೮ ರಷ್ಟು ಜನರು ಹಣಕಾಸಿನ ನೆರವಿನಿಂದ, ಸೂಕ್ತ ತರಬೇತಿ ದೊರಕುವಿಕೆಯಿಂದ ಮತ್ತು ಇತರ ಕಾರಣಗಳಿಂದಾಗಿ ಸ್ವ ಉದ್ಯೋಗವನ್ನು ಆಯ್ಕೆ ಮಾಡಿಕೊಂಡಿದ್ದು ಅವರು ೩೦ ವರ್ಷದೊಳಗಿನವರಾಗಿದ್ದಾರೆ. ಈ ಅಧ್ಯಯನ ಕ್ಷೇತ್ರಕಾರ್ಯದಲ್ಲಿ ೩೦-೫೦ ವರ್ಷದೊಳಗಿನವರಲ್ಲಿ ಪ್ರತಿಕ್ರಿಯೆದಾರರು ಹೆಚ್ಚಾಗಿ ಕಂಡು ಬಂದಿದ್ದು ಶೇಕಡಾ ೬೪ರಷ್ಟು ಜನರು ಶೈಕ್ಷಣಿಕ ಅರ್ಹತೆ, ಕುಟುಂಬದ ಸದಸ್ಯರ ಆಯ್ಕೆ, ಸೂಕ್ತ ತರಬೇತಿ ದೊರಕುವಿಕೆ ಹಾಗೂ ಇತರ ಕಾರಣಗಳಿಂದಾಗಿ ಸ್ವ ಉದ್ಯೋಗವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಶೇಕಡಾ ೮ರಷ್ಟು ಜನರು ಹಣಕಾಸಿನ ನೆರವಿದ್ದುದರಿಂದ, ಹಾಗೂ ಇತರ ಕಾರಣಗಳಿಂದಾಗಿ ಸ್ವ ಉದ್ಯೋಗವನ್ನು ಆಯ್ಕೆ ಮಾಡಿಕೊಂಡಿದ್ದು ಅವರು ೫೦ ವರ್ಷಕ್ಕಿಂತ ಮೇಲ್ಪಟ್ಟವರಾಗಿದ್ದಾರೆ. ಉದ್ಯೋಗ ಆಯ್ಕೆಗೆ ಅಧ್ಯಯನದಲ್ಲಿ ಕಂಡು ಬಂದ ಇತರ ಕಾರಣಗಳೆಂದರೆ ಸ್ವಂತ ಆಸಕ್ತಿ ಇರುವಿಕೆ ಹಾಗೂ ದುಡಿಮೆಯ ಅನಿವಾರ್ಯತೆ ಆಗಿದೆ.

ಕೋಷ್ಟಕ ೨.೩ ಉದ್ಯೋಗಕ್ಕನುಗುಣವಾಗಿ ಸ್ವ ಉದ್ಯೋಗದ ಆಯ್ಕೆಗೆ ಕಾರಣ

ಉದ್ಯೋಗ	**ಸ್ವ ಉದ್ಯೋಗ ಆಯ್ಕೆಗೆ ಕಾರಣ**				
	ಶೈಕ್ಷಣಿಕ ಅರ್ಹತೆ	**ಕುಟುಂಬದ ಸದಸ್ಯರ ಆಯ್ಕೆ**	**ಹಣಕಾಸಿನ ನೆರವಿದ್ದುದರಿಂದ**	**ಸೂಕ್ತ ತರಬೇತಿ ದೊರಕುವಿಕೆ**	**ಇತರ**
ಟ್ಯೂಟೋರಿಯಲ್ಸ್	೨(೨೦)	-	-	-	೮(೮೦)
ಟೈಲರಿಂಗ್	-	೨(೨೦)	೨(೨೦)	೨(೨೦)	೪(೪೦)
ಬ್ಯೂಟಿಪಾರ್ಲರ್	-	-	-	-	೧೦(೧೦೦)
ಮಕ್ಕಳ ಪ್ಲೇ ಸೆಂಟರ್	೪(೪೦)	-	೨(೨೦)	೨(೨೦)	೨(೨೦)
ಕಾರ್ಯಕ್ರಮ ನಿರ್ವಹಣೆ	೪(೪೦)	-	-	೨(೨೦)	೪(೪೦)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ನಕ್ಷೆ ೨.೨



ಶೇಕಡಾ ೨೦ ರಷ್ಟು ಜನರು ಶೈಕ್ಷಣಿಕ ಅರ್ಹತೆಯಿದ್ದುದರಿಂದ ಉದ್ಯೋಗ ಆಯ್ಕೆ ಮಾಡಿಕೊಂಡಿದ್ದು ಇವರು ಟ್ಯೂಟೋರಿಯಲ್ಸ್, ಮಕ್ಕಳ ಪ್ಲೇ ಸೆಂಟರ್ ಹಾಗೂ ಕಾರ್ಯಕ್ರಮ ನಿರ್ವಹಣೆ ನಡೆಸುವವರು. ಶೇಕಡಾ ೪ ರಷ್ಟು ಜನರು ಕುಟುಂಬದ ಸದಸ್ಯರ ಆಯ್ಕೆಯಿಂದ ಸ್ವ ಉದ್ಯೋಗ ಆಯ್ಕೆ ಮಾಡಿಕೊಂಡಿದ್ದು ಇವರು ಟೈಲರಿಂಗ್ ಮಾಡುವವರು. ಶೇಕಡಾ ೮ರಷ್ಟು ಜನರು ಹಣಕಾಸಿನ ನೆರವು ಇರುವುದರಿಂದ ಸ್ವ ಉದ್ಯೋಗ ಆಯ್ಕೆ ಮಾಡಿಕೊಂಡಿದ್ದು ಇವರು ಟೈಲರಿಂಗ್, ಮಕ್ಕಳ ಪ್ಲೇ ಸೆಂಟರ್ ನಡೆಸುವವರು. ಶೇಕಡಾ ೧೨ರಷ್ಟು ಜನರು ಉದ್ಯೋಗಕ್ಕೆ ಬೇಕಾದ ಸೂಕ್ತ ತರಬೇತಿ ದೊರೆಯುವುದರಿಂದ ಸ್ವ ಉದ್ಯೋಗ ಆಯ್ಕೆ ಮಾಡಿಕೊಂಡಿದ್ದು ಇವರು ಟೈಲರಿಂಗ್, ಮಕ್ಕಳ ಪ್ಲೇ ಸೆಂಟರ್ ಹಾಗೂ ಕಾರ್ಯಕ್ರಮ ನಿರ್ವಹಣೆ ನಡೆಸುವವರು. ಶೇಕಡಾ ೫೬ರಷ್ಟು ಜನರು ಇತರ ಕಾರಣಗಳಿಂದಾಗಿ ಸ್ವ ಉದ್ಯೋಗ ಆಯ್ಕೆ ಮಾಡಿಕೊಂಡಿದ್ದು ಇವರು ಟ್ಯೂಟೋರಿಯಲ್ಸ್, ಟೈಲರಿಂಗ್,

ಬ್ಯೂಟಿಪಾರ್ಲರ್, ಮಕ್ಕಳ ಪ್ಲೇ ಸೆಂಟರ್ ಹಾಗೂ ಕಾರ್ಯಕ್ರಮ ನಿರ್ವಹಣೆ ನಡೆಸುವವರಾಗಿದ್ದಾರೆ. ಮುಂದಿನ ಕೋಷ್ಟಕ ೨.೪ ಧರ್ಮ ಮತ್ತು ಸ್ವ ಉದ್ಯೋಗದ ಆಯ್ಕೆಯ ಕುರಿತು ತಿಳಿಸುತ್ತದೆ.

ಕೋಷ್ಟಕ ೨.೪ ಧರ್ಮಕ್ಕನುಗುಣವಾಗಿ ಸ್ವ ಉದ್ಯೋಗದ ಆಯ್ಕೆಗೆ ಕಾರಣ

ಧರ್ಮ	ಸ್ವ ಉದ್ಯೋಗ ಆಯ್ಕೆಗೆ ಕಾರಣ				
	ಶೈಕ್ಷಣಿಕ ಅರ್ಹತೆ	ಕುಟುಂಬದ ಸದಸ್ಯರ ಆಯ್ಕೆ	ಹಣಕಾಸಿನ ನೆರವಿದ್ದುದರಿಂದ	ಸೂಕ್ತ ತರಬೇತಿ ದೊರಕುವಿಕೆ	ಇತರ
ಹಿಂದೂ	೪(೧೪.೩)	೨(೭.೧)	೨(೭.೧)	೨(೭.೧)	೧೮(೬೪.೪)
ಮುಸ್ಲಿಂ	–	–	–	೨(೫೦)	೨(೫೦)
ಕ್ರಿಶ್ಚಿಯನ್	೬(೩೩.೩)	–	೨(೧೧.೧)	೨(೧೧.೧)	೮(೪೪.೫)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನಲ್ಲಿ ವಿವಿಧ ಧರ್ಮದ ಜನರು ವಾಸಿಸುತ್ತಿದ್ದಾರೆ. ನನ್ನ ಅಧ್ಯಯನದಲ್ಲಿ ಹಿಂದೂ ಮತ್ತು ಕ್ರಿಶ್ಚಿಯನ್ ಸ್ವ ಉದ್ಯೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬಂದಿದ್ದು ಮುಸ್ಲಿಂ ಸ್ವ ಉದ್ಯೋಗಿಗಳ ಸಂಖ್ಯೆಯು ಕಡಿಮೆ ಇರುತ್ತದೆ. ಒಟ್ಟು ೫೦ ಪ್ರತಿಕ್ರಿಯೆದಾರರಲ್ಲಿ ಶೈಕ್ಷಣಿಕ ಅರ್ಹತೆಯಿಂದ ಸ್ವ ಉದ್ಯೋಗ ಆಯ್ಕೆ ಮಾಡಿಕೊಂಡವರು ಶೇಕಡಾ ೨೦ ಆಗಿದ್ದು ಹಿಂದೂ ಮತ್ತು ಕ್ರೈಸ್ತ ಧರ್ಮಕ್ಕೆ ಸೇರಿದವರು. ಕುಟುಂಬದ ಸದಸ್ಯರ ಆಯ್ಕೆಯಿಂದ ಸ್ವ ಉದ್ಯೋಗ ಆಯ್ಕೆ ಮಾಡಿಕೊಂಡವರು ಶೇಕಡಾ ೪ ಆಗಿದ್ದು ಇವರು ಹಿಂದೂ ಧರ್ಮಕ್ಕೆ ಸೇರಿದವರು. ಹಣಕಾಸಿನ ನೆರವು ಸಿಗುವ ಕಾರಣದಿಂದಾಗಿ ಸ್ವ ಉದ್ಯೋಗ ಆಯ್ಕೆ ಮಾಡಿಕೊಂಡವರು ಶೇಕಡಾ ೮ ಆಗಿದ್ದು ಹಿಂದೂ ಮತ್ತು ಕ್ರೈಸ್ತ ಧರ್ಮಕ್ಕೆ ಸೇರಿದವರು. ಸೂಕ್ತ ತರಬೇತಿ ದೊರಕುವಿಕೆಯಿಂದ ಶೇಕಡಾ ೧೬ ಮತ್ತು ಇತರ ಕಾರಣಗಳಿಂದಾಗಿ ಸ್ವ ಉದ್ಯೋಗ ಆಯ್ಕೆ ಮಾಡಿಕೊಂಡವರು ಆಗಿದ್ದು ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಧರ್ಮಕ್ಕೆ ಸೇರಿದವರಾಗಿದ್ದಾರೆ. ಕೌಟುಂಬಿಕ ಕಟ್ಟುಪಾಡುಗಳು, ಸ್ವ ಉದ್ಯೋಗಕ್ಕೆ ಬೇಕಾಗುವಷ್ಟು ಬಂಡವಾಳದ ಹೂಡಲು ಸಾಕಷ್ಟು ಹಣ ಇಲ್ಲದಿರುವಿಕೆಯಿಂದ ಮುಸ್ಲಿಂಮರು ಸ್ವ ಉದ್ಯೋಗ ಮಾಡಲು ಹಿಂಜರಿಯುತ್ತಿದ್ದಾರೆ

ಎಂಬುವುದು ಸ್ವ ಉದ್ಯೋಗ ಮಾಡುವ ಮುಸ್ಲಿಂ ಮಹಿಳೆಯರ ಅಭಿಪ್ರಾಯವಾಗಿದೆ. ಶಿಕ್ಷಣ ಮತ್ತು ಸ್ವ ಉದ್ಯೋಗದ ಆಯ್ಕೆಗೆ ಇರುವ ಕಾರಣಗಳನ್ನು ಮುಂದಿನ ಕೋಷ್ಟಕ ೨.೫ ವಿವರಿಸುತ್ತದೆ.

ಕೋಷ್ಟಕ ೨.೫ ಶಿಕ್ಷಣಕ್ಕನುಗುಣವಾಗಿ ಸ್ವ ಉದ್ಯೋಗದ ಆಯ್ಕೆಗೆ ಕಾರಣ

ಶಿಕ್ಷಣ	ಸ್ವ ಉದ್ಯೋಗ ಆಯ್ಕೆಗೆ ಕಾರಣ				
	ಶೈಕ್ಷಣಿಕ ಅರ್ಹತೆ	ಕುಟುಂಬದ ಸದಸ್ಯರ ಆಯ್ಕೆ	ಹಣಕಾಸಿನ ನೆರವಿದ್ದುದರಿಂದ	ಸೂಕ್ತ ತರಬೇತಿ ದೊರಕುವಿಕೆ	ಇತರ
ಪ್ರಾಥಮಿಕ	–	–	–	–	೪(೧೦೦)
ಪೌಢ ಶಿಕ್ಷಣ	–	೨(೧೬.೭)	–	೨(೧೬.೭)	೮(೬೬.೬)
ಪದವಿ ಪೂರ್ವ	೪(೨೦)	–	೨(೧೦)	೪(೨೦)	೧೦(೫೦)
ಪದವಿ	೪(೬೬.೭)	–	೨(೩೩.೩)	–	–
ಸ್ನಾತಕೋತ್ತರ	೨(೨೫)	–	–	–	೬(೭೫)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

೨೦೧೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣವು ಶೇಕಡಾ ೬೫.೪೬ರಷ್ಟಿದೆ. ಕರ್ನಾಟಕ ರಾಜ್ಯದಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣವು ಶೇಕಡಾ ೬೮.೦೮ರಷ್ಟಿದೆ. ೨೦೧೧ರ ಜನಗಣತಿ ಅಂಕಿಅಂಶದ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೬.೬೬ ಲಕ್ಷ ಜನರು ಅಕ್ಷರಸ್ಥರಾಗಿದ್ದು, ಇದರಲ್ಲಿ ೮.೬೬ಲಕ್ಷ ಗಂಡಸರು ಹಾಗೂ ೮.೦೧ ಲಕ್ಷ ಹೆಂಗಸರಾಗಿರುತ್ತಾರೆ. ನನ್ನ ಅಧ್ಯಯನ ಕ್ಷೇತ್ರವಾದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನಲ್ಲಿ ೨.೦೬ಲಕ್ಷ ಮಹಿಳೆಯರು ಶಿಕ್ಷಣ ಪಡೆದವರಾಗಿದ್ದಾರೆ. ಪ್ರತಿಕ್ರಿಯೆದಾರರಲ್ಲಿ ಶೈಕ್ಷಣಿಕ ಅರ್ಹತೆಯಿದ್ದ ಕಾರಣ ಸ್ವ ಉದ್ಯೋಗ ಆಯ್ಕೆ ಮಾಡಿಕೊಂಡವರಲ್ಲಿ ಶೇಕಡಾ ೨೦ ರಷ್ಟು ಜನರು ಪದವಿಪೂರ್ವ, ಪದವಿ, ಸ್ನಾತಕೋತ್ತರ ಪದವಿ ಪಡೆದವರು. ಕುಟುಂಬದ ಸದಸ್ಯರ ಆಯ್ಕೆಯ ಕಾರಣದಿಂದ ಶೇಕಡಾ ೪ ರಷ್ಟು

ಜನರು ಸ್ವ ಉದ್ಯೋಗವನ್ನು ಆಯ್ಕೆ ಮಾಡಿಕೊಂಡಿದ್ದು ಅವರು ಪ್ರೌಢಶಿಕ್ಷಣ ಪಡೆದವರು. ಹಣಕಾಸಿನ ನೆರವಿರುವ ಕಾರಣದಿಂದ ಸ್ವ ಉದ್ಯೋಗ ಆಯ್ಕೆ ಮಾಡಿಕೊಂಡವರಲ್ಲಿ ಶೇಕಡಾ ೮ ರಷ್ಟು ಜನರು ಪದವಿಪೂರ್ವ ಮತ್ತು ಪದವಿ ಪಡೆದವರು. ಸೂಕ್ತ ತರಬೇತಿ ಸಿಗುವ ಕಾರಣದಿಂದ ಶೇಕಡಾ ೧೬ ರಷ್ಟು ಜನರು ಸ್ವ ಉದ್ಯೋಗವನ್ನು ಆಯ್ಕೆ ಮಾಡಿಕೊಂಡಿದ್ದು ಅವರು ಪ್ರೌಢಶಿಕ್ಷಣ ಮತ್ತು ಪದವಿಪೂರ್ವ ಶಿಕ್ಷಣ ಪಡೆದವರು. ಶೇಕಡಾ ೫೬ ರಷ್ಟು ಜನರು ಇತರ ಕಾರಣಗಳಿಂದ ಸ್ವ ಉದ್ಯೋಗ ಆಯ್ಕೆ ಮಾಡಿಕೊಂಡಿದ್ದು ಅವರು ಪ್ರಾಥಮಿಕ, ಪೌಢ ಶಿಕ್ಷಣ, ಪದವಿ ಪೂರ್ವ ಮತ್ತು ಸ್ನಾತಕೋತ್ತರ ಪದವಿ ಪಡೆದವರಾಗಿದ್ದಾರೆ. ಮುಂದಿನ ಕೋಷ್ಟಕ ೨.೬ ವೈವಾಹಿಕ ಸ್ಥಿತಿ ಮತ್ತು ಸ್ವ ಉದ್ಯೋಗದ ಆಯ್ಕೆಗೆ ಇರುವ ಕಾರಣಗಳನ್ನು ತಿಳಿಸುತ್ತದೆ.

ಕೋಷ್ಟಕ ೨.೬ ವೈವಾಹಿಕ ಸ್ಥಿತಿಗನುಗುಣವಾಗಿ ಸ್ವ ಉದ್ಯೋಗದ ಆಯ್ಕೆಗೆ ಕಾರಣ

ವೈವಾಹಿಕ ಸ್ಥಿತಿ	**ಸ್ವ ಉದ್ಯೋಗ ಆಯ್ಕೆಗೆ ಕಾರಣ**				
	ಶೈಕ್ಷಣಿಕ ಅರ್ಹತೆ	**ಕುಟುಂಬದ ಸದಸ್ಯರ ಆಯ್ಕೆ**	**ಹಣಕಾಸಿನ ನೆರವಿದ್ದುದರಿಂದ**	**ಸೂಕ್ತ ತರಬೇತಿ ದೊರಕುವಿಕೆ**	**ಇತರ**
ಅವಿವಾಹಿತೆ	೧೦(೨೭.೮)	೨(೫.೬)	೨(೫.೬)	೬(೧೬.೭)	೧೬(೪೪.೪)
ವಿವಾಹಿತೆ	–	–	೨(೨೦)	–	೮(೮೦)
ವಿಧವೆ	–	–	–	–	೨(೧೦೦)
ವಿಚ್ಛೇದಿತೆ	–	–	–	–	೨(೧೦೦)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ಪ್ರತಿಕ್ರಿಯೆದಾರರಲ್ಲಿ ಶೇಕಡಾ ೨೦ರಷ್ಟು ಜನರು ಶೈಕ್ಷಣಿಕ ಅರ್ಹತೆಯಿಂದ ಸ್ವ ಉದ್ಯೋಗ ಆಯ್ಕೆ ಮಾಡಿದ್ದು ಅವರು ಅವಿವಾಹಿತೆಯರು. ಶೇಕಡಾ ೪ರಷ್ಟು ಜನರು ಕುಟುಂಬದ ಆಯ್ಕೆಯಿಂದ ಸ್ವ ಉದ್ಯೋಗ ಆಯ್ಕೆ ಮಾಡಿದ್ದು ಅವರು ಅವಿವಾಹಿತೆಯರು. ಶೇಕಡಾ ೮ರಷ್ಟು ಜನರು ಹಣಕಾಸಿನ ನೆರವಿರುವುದರಿಂದ ಸ್ವ ಉದ್ಯೋಗ ಆಯ್ಕೆ ಮಾಡಿದ್ದು

ಅವರು ವಿವಾಹಿತೆಯರು ಮತ್ತು ಅವಿವಾಹಿತೆಯರು. ಶೇಕಡಾ ೧೨ರಷ್ಟು ಜನರು ಸೂಕ್ತ ತರಬೇತಿ ದೊರಕುವುದರಿಂದ ಸ್ವ ಉದ್ಯೋಗ ಆಯ್ಕೆ ಮಾಡಿದ್ದು ಅವರು ಅವಿವಾಹಿತೆಯರು. ಇತರ ಕಾರಣಗಳಿಂದ ಸ್ವ ಉದ್ಯೋಗ ಆಯ್ಕೆ ಮಾಡಿಕೊಂಡವರು ಶೇಕಡಾ ೫೬ ಇವರಲ್ಲಿ ಅವಿವಾಹಿತೆಯರು, ವಿವಾಹಿತೆಯರು, ವಿಧವೆಯರು ಹಾಗೂ ವಿಚ್ಛೇದಿತೆಯರು ಇರುತ್ತಾರೆ. ಉದ್ಯೋಗ ನಡೆಸಲು ಸ್ಥಳವು ಅತ್ಯಗತ್ಯವಾಗಿದೆ. ಮುಂದಿನ ಕೋಷ್ಟಕ ೨.೭ ಉದ್ಯೋಗ ನಡೆಸುವ ಸ್ಥಳದ ಬಗ್ಗೆ ತಿಳಿಸುತ್ತದೆ.

ಕೋಷ್ಟಕ ೨.೭ ಉದ್ಯೋಗ ನಡೆಸುವ ಸ್ಥಳ

ಉದ್ಯೋಗ	ಉದ್ಯೋಗ ಸ್ಥಳ			
	ಮನೆಯಲ್ಲಿ	ಸ್ವಂತ ವಾಣಿಜ್ಯ ಕಟ್ಟಡ	ಬಾಡಿಗೆ ಕಟ್ಟಡ	ನಿರ್ದಿಷ್ಟ ಜಾಗವಿಲ್ಲ
ಟ್ಯೂಟೋರಿಯಲ್ಸ್	೨ (೨೦)	–	೬(೬೦)	೨(೨೦)
ಟೈಲರಿಂಗ್	೪(೪೦)	೪(೪೦)	೨(೨೦)	–
ಬ್ಯೂಟಿಪಾರ್ಲರ್	–	–	೧೦(೧೦೦)	–
ಮಕ್ಕಳಪ್ಲೇ ಸೆಂಟರ್	೪(೪೦)	೨(೨೦)	೪(೪೦)	–
ಕಾರ್ಯಕ್ರಮ ನಿರ್ವಹಣೆ	–	–	–	೧೦(೧೦೦)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ಯಾವುದೇ ಉದ್ಯೋಗ ನಡೆಸಲು ಸ್ಥಳವು ಅತ್ಯಗತ್ಯವಾಗಿದೆ. ಸ್ಥಳಾವಕಾಶದ ಸಮಸ್ಯೆಯು ಮಹಿಳೆಯರನ್ನು ಸ್ವ ಉದ್ಯೋಗವನ್ನು ಆಯ್ಕೆ ಮಾಡಲು ಹಿಂಜರಿಯುವಂತೆ ಮಾಡಲು ಒಂದು ಕಾರಣವಾಗಿರಬಹುದು. ಕ್ಷೇತ್ರಕಾರ್ಯದಲ್ಲಿ ಮಹಿಳೆಯರು ವಿವಿಧ ಸ್ಥಳಗಳಲ್ಲಿ ಸ್ವ ಉದ್ಯೋಗವನ್ನು ನಡೆಸುತ್ತಿದ್ದಾರೆ. ಅಧ್ಯಯನದಲ್ಲಿ ೫೦ ಪ್ರತಿಕ್ರಿಯೆದಾರ ಪೈಕಿ ಮನೆಯಲ್ಲಿ ಸ್ವ ಉದ್ಯೋಗ ಮಾಡುವವರು ೧೦ ಮಂದಿ ಅಂದರೆ ಶೇಕಡಾ ೨೦, ಸ್ವಂತ ವಾಣಿಜ್ಯ ಕಟ್ಟಡದಲ್ಲಿ ೬ ಜನರು ಅಂದರೆ ಶೇಕಡಾ ೧೨, ಬಾಡಿಗೆ ಕಟ್ಟಡದಲ್ಲಿ ೨೨ ಮಂದಿ ಅಂದರೆ ಶೇಕಡಾ ೪೪, ನಿರ್ದಿಷ್ಟ ಜಾಗವಿಲ್ಲದೆ ಸ್ವ

ಉದ್ಯೋಗ ಮಾಡುವವರು ೧೨ ಜನರು ಅಂದರೆ ಶೇಕಡಾ ೨೪. ಪ್ರತಿಕ್ರಿಯೆದಾರರಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಉದ್ಯೋಗ ನಡೆಸುವ ಸ್ವ ಉದ್ಯೋಗಿಗಳು ಅಧಿಕ ಪ್ರಮಾಣದಲ್ಲಿದ್ದು ಅವರ ದುಡಿಮೆಯ ಸ್ವಲ್ಪ ಪ್ರಮಾಣವು ಬಾಡಿಗೆ ಕಟ್ಟುವುದರಲ್ಲೇ ಹೋಗಿ ಬಿಡುತ್ತದೆ ಎಂಬುದು ತಿಳಿದು ಬಂದಿದೆ. ಮನೆಯಲ್ಲಿ ಸಾಕಷ್ಟು ಸ್ಥಳಾವಕಾಶವಿಲ್ಲದಿದ್ದ ಕಾರಣ ಜನರು ಬಾಡಿಗೆ ಕಟ್ಟಡಗಳಲ್ಲಿ, ವಾಣಿಜ್ಯ ಕಟ್ಟಡಗಳಲ್ಲಿ ಸ್ವ ಉದ್ಯೋಗ ಮಾಡಿತ್ತಿರುವುದು ಕಂಡು ಬಂದಿದೆ.

೨.೩ ಉಪಸಂಹಾರ

ಮೇಲ್ಕಂಡ ವಿಶ್ಲೇಷಣೆಯಿಂದ ತಿಳಿದುಬರುವುದೇನೆಂದರೆ ದೇಶದ ಸಬಲೀಕರಣದಲ್ಲಿ ಮಹಿಳೆಯರು ವಿಶೇಷ ಪಾತ್ರವನ್ನು ವಹಿಸುತ್ತಿದ್ದಾರೆ. ಮಹಿಳೆಯರು ವಿವಿಧ ಕಾರಣಗಳಿಂದಾಗಿ ಸ್ವ ಉದ್ಯೋಗವನ್ನು ಮಾಡಲು ಹಿಂಜರಿಯುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲೂ ಹಲವಾರು ಮಹಿಳೆಯರು ಸ್ವ ಉದ್ಯೋಗ ಮಾಡುತ್ತಿರುವುದು ಕಾಣಬಹುದು. ಮಂಗಳೂರು ತಾಲೂಕಿನಲ್ಲಿ ಮಹಿಳೆಯರು ಸ್ವ ಉದ್ಯೋಗ ಮಾಡಲು ಇರುವ ಕಾರಣಗಳನ್ನು ತಿಳಿಯುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆಸ್ವ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಲು ಇರುವ ಕಾರಣಗಳನ್ನು ಕಂಡುಕೊಳ್ಳುವ ಉದ್ದೇಶದಿಂದ ಈ ಅಧ್ಯಯನವನ್ನು ನಡೆಸಲಾಗಿದೆ. ಸ್ವ ಉದ್ಯೋಗಿ ಮಹಿಳೆಯರಲ್ಲಿ ಹೆಚ್ಚಿನವರು ತಮ್ಮ ಸ್ವ ಇಚ್ಛೆಯಿಂದ ಉದ್ಯೋಗವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಸ್ವ ಉದ್ಯೋಗಿಗಳ ಅಭಿಪ್ರಾಯದಂತೆ ಮನೆಯ ಕೆಲಸವನ್ನು ಎಷ್ಟೇ ಮಾಡಿದರೂ ಹಣದ ಅಗತ್ಯ ಬಂದಾಗ ಮಹಿಳೆಯರು ಬೇರೆಯವರನ್ನು ಅವಲಂಬಿಸಬೇಕಾಗುತ್ತದೆ ಆದುದರಿಂದ ಸ್ವ ಉದ್ಯೋಗವಿದ್ದರೆ ತಾವು ಸ್ವಾವಲಂಬಿಯಾಗಬಹುದು ಎಂಬ ಉದ್ದೇಶದಿಂದ ಇದನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಬಹುತೇಕ ಮಹಿಳೆಯರ ಶೈಕ್ಷಣಿಕ ಅರ್ಹತೆಯು ಕಡಿಮೆಯಾಗಿದ್ದರೂ ಏನಾನ್ನದರೂ ಸಾಧಿಸುವ ಬಯಕೆಯಿಂದ ಸ್ವ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ. ಇನ್ನು ಕೆಲವರಿಗೆ ಕುಟುಂಬದ ಜವಾಬ್ದಾರಿ ನಿರ್ವಹಿಸುವ ಜವಾಬ್ದಾರಿ ಇರುವುದರಿಂದ ಅವರ ದುಡಿಮೆ ಅನಿವಾರ್ಯವಾಗಿದೆ. ಕೆಲವು ಮಹಿಳೆಯರು ತಮ್ಮ ಪೋಷಕರು ಅಥವಾ ತಮ್ಮ ಗಂಡ ನಡೆಸಿಕೊಂಡು ಬಂದಂತಹ ಉದ್ಯೋಗವನ್ನು ಮುಂದುವರೆಸಿಕೊಂಡು ಬಂದಿರುವುದೇ ಅವರ ಆಯ್ಕೆಗೆ ಕಾರಣವಾಗಿದೆ. ಉದ್ಯೋಗಕ್ಕೆ ಸಂಬಂಧಿಸಿದಂತೆ ಮಹಿಳೆಯರಿಗೆ ಸಿಗುವ ವಿವಿಧ ಸೌಲಭ್ಯಗಳ ಬಗ್ಗೆ ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಕೊನೆ ಟಿಪ್ಪಣಿ

1. ಪುರುಷೋತ್ತಮ ಕೆ.ವಿ, *"ಗೃಹತ್ಯಾಜ್ಯ ನಿರ್ವಹಣೆ ಪ್ರಾಮುಖ್ಯತೆ ಮತ್ತು ಸಮಸ್ಯೆಗಳು"*, ಮಂಗಳೂರು: ಪೊಂಪೈ ಕಾಲೇಜು, ೨೦೧೪, ಪುಟ ಸಂಖ್ಯೆ ೧೮-೨೧.

2. ರೈ ವಿವೇಕ ಬಿ.ಎ ಮತ್ತು ಇತರರರು, *"ಮಂಗಳೂರು ದರ್ಶನ"*, ಮಂಗಳೂರು: ಕಮೀಷನರ್ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ೨೦೧೦, ಪುಟ ಸಂಖ್ಯೆ ೧–೧೫

3. ರಾವ್ ಅಡ್ಡೂರು ಕೃಷ್ಣ ಮತ್ತು ಇತರರು, *"ಕೀರ್ತಿ ಟ್ರಾವೆಲ್ ಗೈಡ್", ಮಂಗಳೂರು: ಕೀರ್ತಿ ಪಬ್ಲಿಕೇಷನ್ಸ್, ೨೦೦೭*, ಪುಟ ಸಂಖ್ಯೆ ೫–೧೪.

4. ಮಂಗಳೂರು: ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ವರದಿ *"ದಕ್ಷಿಣ ಕನ್ನಡ ಜಲ್ಲೆಯ ಅಂಕಿ–ಅಂಶಗಳ ನೋಟ", ಪುಟ ಸಂಖ್ಯೆ ೭೩, ೨೦೦೬–೦೭.*

ಅಧ್ಯಾಯ– ೩

ಆರ್ಥಿಕ ಮತ್ತು ಸಾಮಾಜಿಕ ಸೌಲಭ್ಯಗಳ ವಿಶ್ಲೇಷಣೆ

ಹಿಂದಿನ ಅಧ್ಯಾಯದಲ್ಲಿ ಮಂಗಳೂರು ತಾಲೂಕಿನ ಪ್ರದೇಶ ಪರಿಚಯ ಹಾಗೂ ಆ ಪ್ರದೇಶದಲ್ಲಿ ಸೇವಾ ವಲಯದಲ್ಲಿ ದುಡಿಯುತ್ತಿರುವ ಸ್ವ ಉದ್ಯೋಗಿ ಮಹಿಳೆಯರ ಉದ್ಯೋಗ ಆಯ್ಕೆಯ ಬಗ್ಗೆ ವಿವರಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಮಹಿಳಾ ಸ್ವ ಉದ್ಯೋಗಕ್ಕೆ ಸಹಕಾರ ಮತ್ತು ಪ್ರೋತ್ಸಾಹ ನೀಡುವ ವಿವಿಧ ಸೌಲಭ್ಯಗಳ ಬಗ್ಗೆ ವಿವರಿಸಲಾಗಿದೆ.

ಪ್ರತಿಯೊಂದು ರಾಷ್ಟ್ರದ ಆರ್ಥಿಕ ಅಭ್ಯುದಯದಲ್ಲಿ ಮಹಿಳೆಯರದ್ದೂ ಪಾಲು ಇದೆ. ಆದುದರಿಂದ ಮಹಿಳೆಯ ದುಡಿಮೆ ಅನಿವಾರ್ಯವಾಗಿದೆ. ಸ್ವ ಉದ್ಯೋಗಸ್ಥ ಮಹಿಳೆಯರ ಒಕ್ಕೂಟ (SEWA) ಎಂಬುದು ೧೯೭೨ರಲ್ಲಿ ನೋಂದಾಯಿಸಲ್ಪಟ್ಟ ಟ್ರೇಡ್ ಯೂನಿಯನ್ ಆಗಿದೆ. ಇದು ಬಡ, ಸ್ವಯಂ ಉದ್ಯೋಗಿ ಮಹಿಳಾ ಕಾರ್ಮಿಕರ ಸಂಘಟನೆಯಾಗಿದೆ. ಇದು ಆರ್ಥಿಕವಾಗಿ ಕ್ರಿಯಾಶೀಲವಾಗಿರುವ ಬಡ, ಅನಕ್ಷರಸ್ಥ ಸ್ವ ಉದ್ಯೋಗಿ ಮಹಿಳೆಯರನ್ನು ಸಂಘಟಿಸುವ, ಅವರಿಗೆ ನೆರವಾಗುವ ಉದ್ದೇಶವನ್ನಿರಿಸಿಕೊಂಡಿದೆ. ಇವರು ತಮ್ಮ ಸ್ವಂತ ಕಾರ್ಮಿಕ ಅಥವಾ ಸಣ್ಣ ಉದ್ಯಮಗಳ ಮೂಲಕ ಜೀವನವನ್ನು ನಡೆಸುವ ಮಹಿಳೆಯರು. ೧೯೯೫ರಲ್ಲಿ "ಸೇವಾ" ೩೦,೦೦೦ ಮಹಿಳಾ ಸದಸ್ಯೆಯರನ್ನು ಹೊಂದಿತ್ತು. ಇವರಲ್ಲಿ ಸಣ್ಣಪುಟ್ಟ ವ್ಯಾಪಾರಿಗಳು, ಬೀದಿ ಬದಿ ಮಾರಾಟಗಾರರು, ಮನೆಗಳಲ್ಲೇ ದುಡಿಯುವ ವೃತ್ತಿ ಕೌಶಲ್ಯವಿರುವವರು, ಅರೆ ಕೌಶಲ್ಯದ ವೃತ್ತಿಯಲ್ಲಿ ತೊಡಗಿಸಿಕೊಂಡ ಮಹಿಳೆಯರು ವಿವಿಧ ಸೇವೆಗಳನ್ನು ಪೂರೈಸುತ್ತಿ ಇದ್ದಾರೆ. "ಸೇವಾ" ಬ್ಯಾಂಕ್ ದೇಶದಲ್ಲೇ ಪ್ರಪ್ರಥಮ ಮಹಿಳಾ ಬ್ಯಾಂಕ್ ಆಗಿದೆ. ಮಹಿಳೆಯರು ತಮ್ಮದೇ ಉಳಿತಾಯ ಖಾತೆಗಳನ್ನು ನಿರ್ವಹಿಸುತ್ತಾರೆ. ಭಾರತದಲ್ಲಿ ಮಹಿಳಾ ಕಾರ್ಮಿಕರ ಪೈಕಿ ೯೪% ಗಿಂತಲೂ ಹೆಚ್ಚಿನವರು ಅಸಂಘಟಿತ ವಲಯದಲ್ಲಿದ್ದಾರೆ. ಅವರ ಕೆಲಸ ಅದೃಶ್ಯವಾಗಿಯೂ, ಅಗೋಚರವಾಗಿಯೂ ಉಳಿದಿದೆ. ಮಹಿಳೆಯರನ್ನು ಪೂರ್ಣ ಉದ್ಯೋಗಕ್ಕಾಗಿ ಸಂಘಟಿಸುವುದು ಇದರ ಮುಖ್ಯ ಗುರಿಯಾಗಿದೆ. ಪೂರ್ಣ ಉದ್ಯೋಗ ಎಂದರೆ ಉದ್ಯೋಗಿಗಳು ಆದಾಯ ಭದ್ರತೆ, ಆಹಾರ ಭದ್ರತೆ ಮತ್ತು ಸಾಮಾಜಿಕ ಭದ್ರತೆ (ಕನಿಷ್ಟ ಆರೋಗ್ಯ, ಮಗುವಿನ ಆರೈಕೆ ಮತ್ತು ಆಶ್ರಯ) ಪಡೆಯುವುದು. ಮಹಿಳಾ ಸ್ಥಾನಮಾನಗಳ ಸುಧಾರಣೆಗಾಗಿ ಸರ್ಕಾರವು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಮಹಿಳಾ ಸಬಲೀಕರಣವಾಗಬೇಕಾದರೆ ಮಹಿಳಾ ಉದ್ಯಮಶೀಲತೆಗೆ ಉತ್ತೇಜನ ನೀಡಬೇಕು. ಇದಕ್ಕಾಗಿ ಹಲವು ಹಣಕಾಸಿನ ಸಂಘ–ಸಂಸ್ಥೆಗಳಿವೆ. ಅವುಗಳೆಂದರೆ:

೧. ಜಿಲ್ಲಾ ಕೈಗಾರಿಕಾ ಕೇಂದ್ರ

೨. ಸಣ್ಣ ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರ

೩. ಸಣ್ಣ ಕೈಗಾರಿಕಾ ಸೇವಾ ಸಂಸ್ಥೆಗಳು

೪. ಉದ್ಯಮಶೀಲತೆಯ ಪ್ರಕಟಣೆ ಮತ್ತು ಮಾಹಿತಿ ಕೇಂದ್ರ

೫. ಭಾರತೀಯ ಕೈಗಾರಿಕಾ ಹಣಕಾಸು ಸಂಸ್ಥೆ(IFCI)

೬. ಭಾರತೀಯ ಕೈಗಾರಿಕಾ ಪ್ರಗತಿ ಬ್ಯಾಂಕು(IDBI)

೭. ಭಾರತೀಯ ಕೈಗಾರಿಕಾ ಹಣಕಾಸು ಮತ್ತು ಸಾಲ ಸೌಲಭ್ಯ ಸಂಸ್ಥೆ (ICICI)

೮. ಭಾರತೀಯ ಸಣ್ಣ ಮತ್ತು ಗುಡಿಕೈಗಾರಿಕಾ ಅಭಿವೃದ್ಧಿ ಬ್ಯಾಂಕು (SIDBI)

೯. ರಾಜ್ಯ ಕೈಗಾರಿಕಾ ಬೆಳವಣಿಗೆ ಸಂಸ್ಥೆ (SIDC)

ಮಹಿಳಾ ಉದ್ಯೋಗಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಹಲವು ಯೋಜನೆಗಳನ್ನು ರಚಿಸಲಾಯಿತು. "ಸಮಾನ ಪ್ರತಿಫಲ ಕಾಯ್ದೆ"ಯನ್ನು ೧೯೭೬ರಲ್ಲಿ ರಚಿಸಲಾಯಿತು. ಇದರ ಪ್ರಮುಖ ಕಾರ್ಯವೇನೆಂದರೆ ಒಂದೇ ರೀತಿಯ ಕೆಲಸಗಳಿಗೆ ಪುರುಷರಂತೆ ಸ್ತ್ರೀಯರಿಗೆ ಸಮಾನ ವೇತನ ಒದಗಿಸುವುದು. "ಗ್ರಾಮೀಣ ಪ್ರದೇಶಗಳ ಸ್ತ್ರೀಯರ ಅಭಿವೃದ್ಧಿ ಕಾರ್ಯಕ್ರಮ"ವು ಮಹಿಳೆಯರಿಗೆ ನಿರ್ದಿಷ್ಟ ಕಾರ್ಯಚಟುವಟಿಕೆಯಲ್ಲಿ ತರಬೇತಿ ನೀಡುತ್ತದೆ. "ಮಹಿಳಾ ಸಹಕಾರ ಸಂಘ"ಗಳು ಮಹಿಳೆಯರಿಗೆ ಸಾಕಷ್ಟು ಆದಾಯದ ಮೂಲಕ ಆರ್ಥಿಕ ಸಬಲತೆಯನ್ನು ತಂದುಕೊಡಲು ಸಹಕಾರಿಯಾಗಿವೆ. "ಉದ್ಯೋಗ ತರಬೇತಿ ಕಾರ್ಯಕ್ರಮ"ವು ಗ್ರಾಮೀಣ ಮಹಿಳೆಯರಿಗೆ ವಿವಿಧ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ತರಬೇತಿ ಒದಗಿಸುತ್ತದೆ. ಇಂದಿರಾ ಮಹಿಳಾ ಕಾರ್ಯಕ್ರಮ ಮತ್ತು ಮಹಿಳಾ ಸಮೃದ್ಧಿ ಯೋಜನೆ ಈ ಎರಡು ಕಾರ್ಯಕ್ರಮಗಳು ಯಶಸ್ವಿಯಾಗದಿದ್ದುದರಿಂದ ಅವೆರಡನ್ನೂ ಸೇರಿಸಿ "ಮಹಿಳಾ ಸ್ವರ್ಣ ಯೋಜನೆ"ಯನ್ನು ಪ್ರಾರಂಭಿಸಲಾಯಿತು. ಮಹಿಳಾ ಸಾಮಾಜಿಕ–ಆರ್ಥಿಕ ಸಶಕ್ತಿಕರಣ ಇದರ ಪ್ರಮುಖ ಗುರಿಯಾಗಿದೆ. ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯವನ್ನು ತಂದುಕೊಡುವ ಉದ್ದೇಶದಿಂದ "ಮಹಿಳಾ ಸ್ಪರ್ಧಾ ಯೋಜನೆ"ಯನ್ನು ರಚಿಸಲಾಯಿತು. "ಉದ್ಯೋಗಶೀಲ ಮಹಿಳೆಯರಿಗೆ ಸಾಲ ಕಾರ್ಯಕ್ರಮ"ದಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು ಅತೀ ಕಡಿಮೆ ಬಡ್ಡಿ ದರದಲ್ಲಿ ಅಂದರೆ ಶೇ.೫ರ ದರದಲ್ಲಿ ಗರಿಷ್ಠ ಮೊತ್ತದ ಸಾಲವನ್ನು ಒದಗಿಸುತ್ತದೆ. "ಕಿಶೋರಿ ಶಕ್ತಿ ಯೋಜನೆ"ಯು ಹೆಣ್ಣು ಮಕ್ಕಳಿಗೆ ಆರೋಗ್ಯ, ಶಿಕ್ಷಣ, ವಾಣಿಜ್ಯಧಾರಿತ ತರಬೇತಿ ಮುಂತಾದ ಸೌಲಭ್ಯಗಳನ್ನು ಒದಗಿಸುವ ಗುರಿ ಹೊಂದಿದೆ. "ರಾಷ್ಟ್ರೀಯ ಮಹಿಳಾ ಕೋಶ"ವು ಕಡಿಮೆ ಆದಾಯ ಇರುವ ಮಹಿಳೆಯರಿಗೆ ಸಾಲ ಸೌಲಭ್ಯವನ್ನು ಒದಗಿಸುತ್ತಿದೆ ಜೊತೆಗೆ ಬಡ ಮಹಿಳೆಯರಿಗೆ ಅವರ ಉದ್ಯೋಗಕ್ಕೆ ಸಂಬಂಧಿಸಿದಂತೆ ಸಮಂಜಸ ಬಡ್ಡಿ ದರ ಮತ್ತು ಈ ಮೂಲಕ ವ್ಯವಹಾರದ ವೆಚ್ಚ ಕಡಿಮೆಯಾಗುವಂತೆ ಸಹಕಾರ ಕೊಡುತ್ತಿವೆ. "ಇಂದಿರಾ ಗಾಂಧಿ ಮಾತೃತ್ವ ಹಿತ ಯೋಜನೆ"ಯು ಗರ್ಭಿಣಿ ಮಹಿಳೆಯ ಹಿತಕ್ಕೋಸ್ಕರ ಇರುವುದಾಗಿದೆ. ಭಾರತ ಸರ್ಕಾರವು ಮಹಿಳಾ ಸ್ವ ಉದ್ಯೋಗಕ್ಕಾಗಿ ವಿವಿಧ ತರಬೇತಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಇಂತಹ ಕಾರ್ಯಕ್ರಮದಡಿಯಲ್ಲಿ ಮಹಿಳಾ ಉತ್ಪಾದಕತೆಯನ್ನು ಹೆಚ್ಚಿಸಲು ಬೇಕಾದ ಕಚ್ಚಾ ಸಾಮಾಗ್ರಿಗಳನ್ನು ನೀಡಿ, ಹೊಸ ತಾಂತ್ರಿಕತೆಯ ಬಗ್ಗೆ ಮಾಹಿತಿ ನೀಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಸ್ವ

ಉದ್ಯೋಗಿಗಳಿಂದ ತಯಾರಾದ ವಸ್ತುಗಳಿಗೆ ಸಂಬಂಧಿಸಿದಂತೆ ಮಾರ್ಕೆಟಿಂಗ್‌ಗೆ ಬೇಕಾದ ಸಹಾಯವನ್ನು ನೀಡಲಾಗುವುದು. "ಸ್ವರ್ಣ ಜಯಂತಿ ರೋಜ್‌ಗಾರ್ ಯೋಜನೆ"ಯು ಮಹಿಳೆಯರಿಗೆ ಉದ್ಯೋಗ ಪ್ರಾರಂಭಿಸಲು ಪ್ರೋತ್ಸಾಹ ನೀಡುತ್ತಿದೆ. "ಮಹಿಳಾ ವಿಕಾಸ ನಿಧಿ"ಯು ಮಹಿಳೆಯರಿಗೆ ಅವರ ಉದ್ಯೋಗಕ್ಕೆ ಸಂಬಂಧಿಸಿದಂತೆ ಸಾಲ ಕೊಡುವುದರ ಮೂಲಕ ಸಹಕಾರಿಯಾಗಿವೆ.

ನಬಾರ್ಡ್ ೮೦ರ ದಶಕದಲ್ಲಿ ಬಡತನ ನಿವಾರಣೆಗಾಗಿ ಸ್ವಯಂ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸುವ ಉದ್ದೇಶದಿಂದ ದೇಶದ ಗ್ರಾಮೀಣದ ಪ್ರದೇಶದಲ್ಲಿ ೩೩,೦೦೦ ವಾಣಿಜ್ಯ ಬ್ಯಾಂಕ್ ಶಾಖೆಗಳನ್ನು, ೧೪,೫೦೦ ಆರ್.ಆರ್.ಬಿ ಶಾಖೆಗಳನ್ನು, ೯೨,೦೦೦ ಪ್ರಾಥಮಿಕ ಸಹಕಾರ ಬ್ಯಾಂಕ್ ಶಾಖೆಗಳನ್ನು ಸ್ಥಾಪಿಸಲಾಯಿತು. ಆದರೆ ತಮ್ಮ ಸ್ಥಾಪಿತ ಉದ್ದೇಶವನ್ನು ಈಡೇರಿಸುವಲ್ಲಿ ಈ ಬ್ಯಾಂಕ್‌ಗಳು ವಿಫಲವಾಗಿದ್ದಲ್ಲದೆ ಗ್ರಾಮೀಣ ಬಡವರನ್ನು ತಲುಪಲಿಲ್ಲ. ಈ ಬ್ಯಾಂಕ್‌ಗಳ ಉಪಯೋಗವಾದದ್ದು ಮಾತ್ರ ಹಣದ ಲೇವಾದೇವಿಗಾರರಿಗೆ, ವ್ಯಾಪಾರಸ್ಥರಿಗೆ ಮತ್ತು ಮಧ್ಯವರ್ತಿಗಳಿಗೆ ಮಾತ್ರ. ನಬಾರ್ಡ್ ೧೯೯೨ರಲ್ಲಿ ಒಂದು ಹೊಸ ರೀತಿಯ ಬ್ಯಾಂಕ್ ಪ್ರಯೋಗವನ್ನೇ ಕೈಗೊಂಡಿತು. ಆ ಯೋಜನೆಯೇ ಸ್ವಸಹಾಯ ಸಂಘಗಳನ್ನು ಬ್ಯಾಂಕ್‌ನೊಂದಿಗೆ ಸಂಪರ್ಕಿಸುವುದು, ಈ ಸಂಪರ್ಕದ ಮುಖ್ಯ ಉದ್ದೇಶ ಉಳಿತಾಯವನ್ನು ಉತ್ತೇಜಿಸುವುದು. ಈ ಯೋಜನೆಯು ಮಹಿಳಾ ಸಬಲೀಕರಣದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ.

ಸಂಘಗಳ ಉಳಿತಾಯವನ್ನು ಆಧರಿಸಿ ಸರಕಾರವು ಸಹಾಯಧನವನ್ನು ನೀಡುತ್ತದೆ ಮತ್ತು ಬ್ಯಾಂಕ್‌ಗಳೊಂದಿಗೆ ಸಂಪರ್ಕವೇರ್ಪಡಿಸಿ ಬ್ಯಾಂಕ್‌ಗಳು ವಿವಿಧ ಚಟುವಟಿಕೆಗಳಿಗೆ ಸಬ್ಸಿಡಿಗಳೊಂದಿಗೆ ಕಡಿಮೆ ದರದಲ್ಲಿ ಸಾಲ ಸೌಲಭ್ಯವನ್ನು ಗುಂಪುಗಳ ಸದಸ್ಯರಿಗೆ ಯಾವುದೇ ಮಧ್ಯವರ್ತಿಗಳ ಸಹಾಯವಿಲ್ಲದೆ ನೇರವಾಗಿ ಒದಗಿಸುತ್ತಿದೆ. ಮಹಿಳಾ ಸ್ವಸಹಾಯ ಸಂಘದ ಸದಸ್ಯರು ತಾವೇ ಉಳಿತಾಯ ಮಾಡಿದ ಹಣವನ್ನು ತಮ್ಮಲ್ಲೇ ಅಗತ್ಯವಿರುವ ಸದಸ್ಯರಿಗೆ ಸಾಲದ ರೂಪದಲ್ಲಿ ನೀಡಿ ಅವರಿಂದ ಕಡಿಮೆ ದರದಲ್ಲಿ ಬಡ್ಡಿಯನ್ನು ವಸೂಲಿ ಮಾಡುವುದರಿಂದ ಹಣದ ಅಗತ್ಯವಿರುವವರಿಗೆ ಹಣಕಾಸಿನ ನೆರವು, ಉಳಿದ ಸದಸ್ಯರಿಗೆ ತಮ್ಮ ಉಳಿತಾಯಕ್ಕೆ ಬಡ್ಡಿರೂಪದಲ್ಲಿ ಲಾಭ ಪಡೆಯುವುದರಿಂದ ಎಲ್ಲರೂ ಸಂತೃಪ್ತರಾಗಿರುತ್ತಾರೆ. ಈ ಸ್ವಸಹಾಯ ಸಂಘಗಳು ಮಹಿಳಾ ಸ್ವ ಉದ್ಯೋಗಕ್ಕೆ ಸಹಕಾರಿಯಾಗಿವೆ. ಇತ್ತೀಚೆಗೆ "ರಚನಾ" ಎಂಬ ವಾಣಿಜ್ಯ ಮತ್ತು ಉದ್ಯಮದ ಕ್ಯಾಥೊಲಿಕ್ ಚೇಂಬರ್ ಸ್ವಯಂ ಉದ್ಯೋಗದ ಯೋಜನೆಯನ್ನು ಉದ್ಘಾಟಿಸಿತು ಹಾಗೂ ಟಾಟಾ ನ್ಯಾನೊ ಕಾರನ್ನು ಟ್ಯಾಕ್ಸಿಯಾಗಿ ಅಗತ್ಯವಿರುವ ಉದ್ಯೋಗಿಗಳಿಗೆ ಬಳಸಿಕೊಳ್ಳಲು ಹಸ್ತಾಂತರಿಸಲಾಯಿತು. ರಾಜ್ಯ ಸರ್ಕಾರವು ಮಂಗಳೂರಿನಲ್ಲಿ ಸ್ವಯಂ ಉದ್ಯೋಗಿ ಮಹಿಳೆಯರಿಗೆ ಕಟ್ಟಡ ನಿರ್ಮಿಸಲು ೬೫ಲಕ್ಷ ರೂ ಕೊಟ್ಟು ಸಹಕರಿಸಿದೆ ಮತ್ತು ಸ್ವಯಂ ಸಹಾಯ ಗುಂಪುಗಳನ್ನು ದೊಡ್ಡ ಸಂಖ್ಯೆಯಲ್ಲಿ ಸೇರಲು ಮಹಿಳೆಯರನ್ನು ಒತ್ತಾಯಿಸಿ, ಸಾರ್ವಜನಿಕರು ಅವರ ಉತ್ಪನ್ನಗಳನ್ನು ಖರೀದಿಸುವ ಮೂಲಕ ಮಹಿಳೆಯರನ್ನು ಪ್ರೋತ್ಸಾಹಿಸಬೇಕು ಎಂದು ಉಪ ಸ್ಪೀಕರ್ ಎನ್ ಯೋಗಿಶ್ ಭಟ್ ಹೇಳಿದ ಉಲ್ಲೇಖವಿದೆ. ಹೊಸ ವಿಷಯಗಳನ್ನು

ಮಹಿಳೆಯರಿಗೆ ತಿಳಿಸಿ ಮಹಿಳೆಯನ್ನು ಸ್ವ ಉದ್ಯೋಗಕ್ಕೆ ಪ್ರೋತ್ಸಾಹಿಸಲು ಮಂಗಳೂರಿನಲ್ಲಿ ಜಿಲ್ಲಾ ಸಣ್ಣ ಕೈಗಾರಿಕಾ ಸಂಘಗಳು, ಮಹಿಳಾ ಸ್ವ ಸಹಾಯ ಸಂಘಗಳು, ಮಹಿಳಾ ಮಂಡಲಗಳು, ರೋಜ್‌ಗಾರ್, ಸ್ತ್ರೀ ಶಕ್ತಿ ಮುಂತಾದ ಸಂಘಗಳಿವೆ ಇದರಿಂದ ಮಂಗಳೂರಿನ ಜನತೆಗೆ ಸ್ವ ಉದ್ಯೋಗಕ್ಕೆ ಬೇಕಾದ ಪ್ರೋತ್ಸಾಹ ದೊರಕುತ್ತಿದೆ ಎಂಬುವುದು ತಿಳಿದು ಬರುತ್ತದೆ.

೩.೧ ಸ್ವ ಉದ್ಯೋಗಿಗಳಿಗೆ ಸಿಗುವ ಸಾಮಾಜಿಕ –ಆರ್ಥಿಕ ಸೌಲಭ್ಯಗಳ ವಿಶ್ಲೇಷಣೆ

ಪ್ರಸ್ತುತ ಅಧ್ಯಾಯವು ಮಹಿಳಾ ಸ್ವ ಉದ್ಯೋಗಕ್ಕಿರುವ ಆರ್ಥಿಕ ಮತ್ತು ಸಾಮಾಜಿಕ ಸೌಲಭ್ಯಗಳ ಬಗ್ಗೆ ವಿವರಿಸುತ್ತದೆ. ಸ್ವ ಉದ್ಯೋಗ ನಡೆಸಲು ಬಹು ಮುಖ್ಯವಾದ ಅಂಶವೆಂದರೆ ಅದು ಬಂಡವಾಳ. ಬಂಡವಾಳ ಹೂಡಲು ಹಣದ ಅಭಾವ ಬಂದಲ್ಲಿ ಮಹಿಳೆಯರು ಸ್ವ ಉದ್ಯೋಗ ಮಾಡಲು ಹಿಂಜರಿಯುವ ಸಾಧ್ಯತೆಯಿದೆ. ಇಂತಹ ಸಂದರ್ಭದಲ್ಲಿ ಮಹಿಳಾ ಉದ್ಯೋಗವನ್ನು ಪ್ರೋತ್ಸಾಹಿಸಲು ವಿವಿಧ ಸಂಘ–ಸಂಸ್ಥೆಗಳು, ಸಹಕಾರಿ ಸಂಸ್ಥೆಗಳು, ಸ್ವಯಂಸೇವಾ ಸಂಸ್ಥೆಗಳು ಹಾಗೂ ವಿವಿಧ ಬ್ಯಾಂಕುಗಳು ಸಾಲ ಸೌಲಭ್ಯಗಳನ್ನು ಒದಗಿಸುತ್ತಿವೆ. ನನ್ನ ಅಧ್ಯಯನ ಕಾರ್ಯಕ್ಷೇತ್ರದಲ್ಲಿ ಸ್ವ ಉದ್ಯೋಗಕ್ಕಾಗಿ ಸಾಲ ಸೌಲಭ್ಯವನ್ನು ವಿವಿಧ ಮೂಲಗಳಿಂದ ಪಡೆದುಕೊಂಡ ಸ್ವ ಉದ್ಯೋಗಿ ಮಹಿಳೆಯರ ಬಗ್ಗೆ ಈ ಕೆಳಗಿನ ಕೋಷ್ಟಕವು ವಿವರಿಸುತ್ತದೆ

ಕೋಷ್ಟಕ ೩.೧ ವಯಸ್ಸಿಗನುಗುಣವಾಗಿ ವಿವಿಧ ಮೂಲಗಳಿಂದ ಸಾಲವನ್ನು ಪಡೆದುಕೊಂಡಿರುವ ಸ್ವ ಉದ್ಯೋಗಿಗಳು

ವಯಸ್ಸು	ಸಾಲದ ಮೂಲ			
	ಬ್ಯಾಂಕ್ ಮತು ಸಹಕಾರಿ ಸಂಘಗಳು	ಬಂಧು–ಮಿತ್ರರು	ಸ್ವಸಹಾಯ ಸಂಘಗಳು	ಸ್ವಯಂಸೇವಾ ಸಂಸ್ಥೆಗಳು
೩೦ಕ್ಕಿಂತ ಕಡಿಮೆ	೪(೬೬.೭)	೨(೩೩.೩)	–	–
೩೦ ರಿಂದ ೫೦	೮(೫೦)	೬(೩೭.೫)	೨(೧೨.೫)	–
೫೦ಕ್ಕಿಂತ ಮೇಲ್ಪಟ್ಟು	೨(೧೦೦)	–	–	–

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

೫೦ ಪ್ರತಿಕ್ರಿಯೆದಾರರಲ್ಲಿ ಒಟ್ಟು ಸಾಲ ಪಡೆದುಕೊಂಡವರು ೨೪ ಜನರು. ಪ್ರತಿಕ್ರಿಯೆದಾರರಲ್ಲಿ ೩೦–೫೦ ವರ್ಷದೊಳಗಿನ ಮಹಿಳಾ ಸ್ವ ಉದ್ಯೋಗಿಗಳು ಹೆಚ್ಚಿನ ಮೂಲಗಳಿಂದ ಸಾಲ ಪಡೆದುಕೊಂಡವರಾಗಿದ್ದಾರೆ. ಸಾಲ ಪಡೆದುಕೊಂಡವರಲ್ಲಿ ೩೦ ಕ್ಕಿಂತ ಕಡಿಮೆ ವಯಸ್ಸಿನವರು ಒಟ್ಟು ೬ ಜನರು. ಅವರಲ್ಲಿ ಬ್ಯಾಂಕ್ ಮತ್ತು ಸಹಕಾರಿ


ಸಂಘಗಳಿಂದ ಶೇಕಡಾ ೬೬.೭ ಹಾಗೂ ಬಂಧು–ಮಿತ್ರರಿಂದ ಸಾಲ ಪಡೆದುಕೊಂಡಿರುವವರು ಶೇಕಡಾ ೩೩.೩. ೩೦ ರಿಂದ ೫೦ ವಯಸ್ಸಿನೊಳಗಿನವರಲ್ಲಿ ಸಾಲ ಪಡೆದುಕೊಂಡವರು ಒಟ್ಟು ೧೬ ಜನರು .ಅವರಲ್ಲಿ ಬ್ಯಾಂಕ್ ಮತ್ತು ಸಹಕಾರಿ ಸಂಘಗಳಿಂದ ಶೇಕಡಾ ೫೦, ಬಂಧು–ಮಿತ್ರರಿಂದ ಶೇಕಡಾ ೩೭.೫ ಹಾಗೂ ಸ್ವ ಸಹಾಯ ಸಂಘಗಳಿಂದ ಶೇಕಡಾ ೧೨.೫. ೫೦ ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ೨ ಜನರು ಸಾಲ ಪಡೆದುಕೊಂಡಿದ್ದು ಅವರು ಸಹಕಾರಿ ಸಂಘಗಳಿಂದ ಸಾಲ ಪಡೆದುಕೊಂಡಿದ್ದಾರೆ. ಬಂಧು–ಮಿತ್ರರಿಂದ ಸಾಲ ಪಡೆದವರಲ್ಲಿ ಹೆಚ್ಚಿನವರು ಸಾಲದ ಬಡ್ಡಿದರದಿಂದ ಮುಕ್ತರಾಗಿದ್ದಾರೆ. ಮುಂದಿನ ಕೋಷ್ಟಕ ೩.೨ ಉದ್ಯೋಗ ಮತ್ತು ಸಾಲದ ಮೂಲಗಳ ಬಗ್ಗೆ ತಿಳಿಸುತ್ತದೆ.

ಕೋಷ್ಟಕ ೩.೨ ಉದ್ಯೋಗಕ್ಕನುಗುಣವಾಗಿ ವಿವಿಧ ಮೂಲಗಳಿಂದ ಸಾಲವನ್ನು ಪಡೆದುಕೊಂಡಿರುವ ಸ್ವ ಉದ್ಯೋಗಿಗಳು

ಉದ್ಯೋಗ	**ಸಾಲದ ಮೂಲ**			
	ಬ್ಯಾಂಕ್ ಮತು ಸಹಕಾರಿ ಸಂಘಗಳು	**ಬಂಧು–ಮಿತ್ರರು**	**ಸ್ವಸಹಾಯ ಸಂಘಗಳು**	**ಸ್ವಯಂಸೇವಾ ಸಂಸ್ಥೆಗಳು**
ಟ್ಯೂಟೋರಿಯಲ್ಸ್	–	–	–	–
ಟೈಲರಿಂಗ್	೬(೬೦)	೪(೪೦)	–	–
ಬ್ಯೂಟಿಪಾರ್ಲರ್	೬(೧೦೦)	–	–	–
ಮಕ್ಕಳ ಪ್ಲೇ ಸೆಂಟರ್	೨(೨೫)	೪(೫೦)	೨(೨೫)	–
ಕಾರ್ಯಕ್ರಮ ನಿರ್ವಾಹಕರು	–	–	–	–

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ನಕ್ಷೆ ೩.೧



ಒಟ್ಟು ೫೦ ಪ್ರತಿಕ್ರಿಯೆದಾರರಲ್ಲಿ ಟ್ಯೂಟೋರಿಯಲ್ಸ್ ಮತ್ತು ಕಾರ್ಯಕ್ರಮ ನಿರ್ವಹಣೆ ನಡೆಸುವವರು ಯಾವುದೇ ರೀತಿಯ ಸಾಲ ಪಡೆದುಕೊಂಡಿಲ್ಲ. ಕಾರ್ಯಕ್ರಮ ನಿರ್ವಹಣೆ ನಡೆಸುವವರಿಗೆ ಯಾವುದೇ ಸಲಕರಣೆಗಳ ಅಗತ್ಯವಿಲ್ಲದಿರುವುದರಿಂದ ಸಾಲದ ಅಗತ್ಯವಿಲ್ಲವೆಂಬುವುದು ತಿಳಿದು ಬಂದಿದೆ. ಟೈಲರಿಂಗ್ ಮಾಡುವವರಲ್ಲಿ ೧೦ ಜನರು ಸಾಲ ಪಡೆದುಕೊಂಡಿದ್ದು ಶೇಕಡಾ ೬೦ ರಷ್ಟು ಜನರು ಬ್ಯಾಂಕ್ ಮತು ಸಹಕಾರಿ ಸಂಘಗಳಿಂದ ಹಾಗೂ ಶೇಕಡಾ ೪೦ರಷ್ಟು ಜನರು ಬಂಧು–ಮಿತ್ರರಿಂದ ಸಾಲ ಪಡೆದಿದ್ದಾರೆ. ಬ್ಯೂಟಿಪಾರ್ಲರ್ ಸ್ವ ಉದ್ಯೋಗಿಗಳಲ್ಲಿ ಒಟ್ಟು ೬ ಜನರು ಸಾಲ ತೆಗೆದುಕೊಂಡಿದ್ದು ಅವರು ಬ್ಯಾಂಕ್ ಮತ್ತು ಸಹಕಾರಿ ಸಂಘಗಳಿಂದ ಸಾಲ ಪಡೆದಿದ್ದಾರೆ. ಮಕ್ಕಳ ಪ್ಲೇ ಸೆಂಟರ್ ನಡೆಸುವವರು ಒಟ್ಟು ೮ ಜನರು ಸಾಲ ಪಡೆದುಕೊಂಡಿದ್ದು ಶೇಕಡಾ ೨೫ರಷ್ಟು ಜನರು ಬ್ಯಾಂಕ್ ಮತು ಸಹಕಾರಿ ಸಂಘಗಳಿಂದ, ಶೇಕಡಾ ೫೦ರಷ್ಟು ಜನರು ಬಂಧು–ಮಿತ್ರರಿಂದ ಹಾಗೂ ಶೇಕಡಾ ೨೫ರಷ್ಟು ಜನರು ಸ್ವ


ಸಹಾಯ ಸಂಘಗಳಿಂದ ಸಾಲ ಪಡೆದಿರುತ್ತಾರೆ. ಉದ್ಯೋಗ ಸಂಬಂಧಿಸಿದಂತೆ ತರಬೇತಿ ಪಡೆದುಕೊಂಡ ವಿವರಗಳನ್ನು ಮುಂದಿನ ಕೋಷ್ಟಕ ೩.೩ ತಿಳಿಸುತ್ತದೆ.

ಕೋಷ್ಟಕ– ೩.೩ ಸ್ವ ಉದ್ಯೋಗಕ್ಕೆ ಸಂಬಂಧಿಸಿದಂತೆ ತರಬೇತಿ ಪಡೆದುಕೊಂಡವರು

ಉದ್ಯೋಗ	ತರಬೇತಿ	
	ದೊರಕಿದೆ	ದೊರಕಿಲ್ಲ
ಟ್ಯೂಟೋರಿಯಲ್ಸ್	–	೧೦(೧೦೦)
ಟೈಲರಿಂಗ್	೬(೬೦)	೪(೪೦)
ಬ್ಯೂಟಿಪಾರ್ಲರ್	೮(೮೦)	೨(೨೦)
ಮಕ್ಕಳ ಪ್ಲೇ ಸೆಂಟರ್	೨(೨೦)	೮(೮೦)
ಕಾರ್ಯಕ್ರಮ ನಿರ್ವಾಹಕರು	೨(೨೦)	೮(೮೦)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ನಕ್ಷೆ ೩.೨




೫೦ ಪ್ರತಿಕ್ರಿಯೆದಾರರಲ್ಲಿ ೧೮ ಜನರು ಅಂದರೆ ಶೇಕಡಾ ೩೬ರಷ್ಟು ಉದ್ಯೋಗಕ್ಕೆ ಸಂಬಂಧಿಸಿದಂತೆ ತರಬೇತಿ ಪಡೆದುಕೊಂಡಿದ್ದಾರೆ. ೩೨ ಜನರು ಅಂದರೆ ಶೇಕಡಾ ೬೪ರಷ್ಟು ಜನರಿಗೆ ಉದ್ಯೋಗಕ್ಕೆ ಸಂಬಂಧಿಸಿದಂತೆ ತರಬೇತಿ ದೊರಕಿಲ್ಲ ಎಂಬುವುದನ್ನು ಕೋಷ್ಟಕ ೩.೩ ತಿಳಿಸುತ್ತದೆ. ಮುಂದಿನ ಕೋಷ್ಟಕ ೩.೪ ಉದ್ಯೋಗ ಮಾಡುವವರು ಯಾವುದೆಲ್ಲ ಮೂಲಗಳಿಂದ ತರಬೇತಿ ಪಡೆದುಕೊಂಡಿದ್ದಾರೆಂಬುವುದನ್ನು ವಿವರಿಸುತ್ತದೆ.

ಕೋಷ್ಟಕ ೩.೪ ಉದ್ಯೋಗಕ್ಕನುಗುಣವಾಗಿ ವಿವಿಧ ಮೂಲಗಳಿಂದ ತರಬೇತಿ ಪಡೆದುಕೊಂಡವರು

ಉದ್ಯೋಗ	ತರಬೇತಿಯ ಮೂಲಗಳು			
	ಸರಕಾರ	ಸರಕಾರೇತರ	ಸಂಘ-ಸಂಸ್ಥೆಗಳು	ಶಿಕ್ಷಣ ಸಂಸ್ಥೆಗಳು
ಟ್ಯೂಟೋರಿಯಲ್ಸ್	–	–	–	–
ಟೈಲರಿಂಗ್	–	೨(೩೩)	೪(೬೭)	–
ಬ್ಯೂಟಿಪಾರ್ಲರ್	–	೨(೨೫)	೬(೭೫)	–
ಮಕ್ಕಳಪ್ಲೇ ಸೆಂಟರ್	–	–	೨(೧೦೦)	–
ಕಾರ್ಯಕ್ರಮ ನಿರ್ವಾಹಕರು	–	೨(೧೦೦)	–	–

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ನಕ್ಷೆ ೩.೩



ತರಬೇತಿ ದೊರಕಿದ ೧೮ ಪ್ರತಿಕ್ರಿಯೆದಾರರಲ್ಲಿ ಶೇಕಡಾ ೩೩.೩ರಷ್ಟು ಅಂದರೆ ೬ ಜನರು ಸರಕಾರೇತರದಿಂದ ಉದ್ಯೋಗಕ್ಕೆ ಸಂಬಂಧಿಸಿದಂತೆ ತರಬೇತಿಯನ್ನು ಪಡೆದುಕೊಂಡಿದ್ದಾರೆ. ಶೇಕಡಾ ೬೬.೭ರಷ್ಟು ಅಂದರೆ ೧೨ ಜನರು ಸಂಘ–ಸಂಸ್ಥೆಗಳಿಂದ ತರಬೇತಿಯನ್ನು ಪಡೆದುಕೊಂಡಿದ್ದಾರೆ. ಟೈಲರಿಂಗ್ ನಡೆಸುವವರಿಗೆ ಇತರ ಟೈಲರ್‌ಗಳಿಂದಲೂ, ಬ್ಯೂಟಿಪಾರ್ಲರ್‌ಗಳಲ್ಲಿರುವವರಿಗೆ ವಿಚಾರಗೋಷ್ಠಿಗಳಿಂದ, ಕಾರ್ಯಕ್ರಮ ನಿರ್ವಹಣೆ ಮಾಡುವರಿಗೆ ಇತರ ಕಾರ್ಯಕ್ರಮ ನಿರ್ವಹಣೆ ಮಾಡುವವರಿಂದ ತರಬೇತಿ ದೊರಕುತ್ತಿದೆ ಎಂಬುವುದು ತಿಳಿದು ಬಂದಿದೆ. ಮಕ್ಕಳ ಪ್ಲೇ ಸೆಂಟರ್ ನಡೆಸುವ ಕೆಲವರಿಗೆ ಪ್ಲೇ ಸೆಂಟರ್ ಪ್ರಾರಂಭಿಸುವ ಮೊದಲು ತರಬೇತಿಯ ಅಗತ್ಯವಿರುವುದರಿಂದ ಪ್ರಾರಂಭಿಸಿದ ನಂತರ ತರಬೇತಿಯ ಅಗತ್ಯ ಕಡಿಮೆ ಎಂಬುದು ಅವರ ಅಭಿಪ್ರಾಯವಾಗಿದೆ. ಟ್ಯೂಟೋರಿಯಲ್ಸ್ ನಡೆಸುವವರು ತಮ್ಮ ಶೈಕ್ಷಣಿಕ ಅರ್ಹತೆಯಿಂದ ಉದ್ಯೋಗ ಮಾಡುತ್ತಿದ್ದು ಸ್ವ ಉದ್ಯೋಗಕ್ಕಾಗಿ ಹೆಚ್ಚಿನ ತರಬೇತಿಯನ್ನು ಪಡೆಯದಿರುವುದು ಕಂಡು ಬಂದಿದೆ. ಮುಂದಿನ ಕೋಷ್ಟಕ ೩.೫ ಶಿಕ್ಷಣ ಮತ್ತು ತರಬೇತಿ ದೊರಕುವಿಕೆಯ ಬಗ್ಗೆ ವಿವರಿಸುತ್ತದೆ

ಕೋಷ್ಟಕ ೩.೫ ಶಿಕ್ಷಣಕ್ಕನುಗುಣವಾಗಿ ವಿವಿಧ ಮೂಲಗಳಿಂದ ತರಬೇತಿ ಪಡೆದುಕೊಂಡವರು

ಶಿಕ್ಷಣ	ತರಬೇತಿಯ ಮೂಲಗಳು			
	ಸರಕಾರ	ಸರಕಾರೇತರ	ಸಂಘ–ಸಂಸ್ಥೆಗಳು	ಶಿಕ್ಷಣ ಸಂಸ್ಥೆಗಳು
ಪ್ರಾಥಮಿಕ	–	–	೨(೧೦೦)	–
ಪ್ರೌಢ	–	೪(೫೦)	೪(೫೦)	–
ಪದವಿಪೂರ್ವ	–	೨(೩೩)	೪(೬೭)	–
ಪದವಿ	–	೨(೧೦೦)	–	–
ಸ್ನಾತಕೋತ್ತರ	–	–	–	–

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ತರಬೇತಿಯನ್ನು ಪಡೆದ ೧೮ ಜನರಲ್ಲಿ ಪ್ರಾಥಮಿಕ ಶಿಕ್ಷಣ ಪಡೆದವರು ೨ ಜನರು ಅಂದರೆ ಶೇಕಡಾ ೧೧.೧ರಷ್ಟು ಮಂದಿ ಸಂಘ-ಸಂಸ್ಥೆಯಿಂದ ತರಬೇತಿ ಪಡೆದವರು. ಪ್ರೌಢ ಶಿಕ್ಷಣ ಪಡೆದವರು ಒಟ್ಟು ೮ ಜನರು ಅಂದರೆ ಶೇಕಡಾ ೪೪.೫ರಷ್ಟು ಮಂದಿ ಸರಕಾರೇತರ ಮತ್ತು ಸಂಘ-ಸಂಸ್ಥೆಗಳಿಂದ ತರಬೇತಿ ಪಡೆದವರು. ಪದವಿಪೂರ್ವ ಶಿಕ್ಷಣ ಪಡೆದವರು ೬ ಜನರಿದ್ದು ಶೇಕಡಾ ೩೩.೩ರಷ್ಟು ಜನರು ಸರಕಾರೇತರ ಮತ್ತು ಸಂಘ-ಸಂಸ್ಥೆಗಳಿಂದ ತರಬೇತಿ ಪಡೆದವರು. ಪದವಿ ಶಿಕ್ಷಣ ಪಡೆದ ೨ ಜನರು ಅಂದರೆ ಶೇಕಡಾ ೧೧.೧ರಷ್ಟು ಜನರು ಸರಕಾರೇತರ ಸಂಸ್ಥೆಗಳಿಂದ ತರಬೇತಿಯನ್ನು ಪಡೆದಿರುತ್ತಾರೆ. ಸ್ನಾತಕೋತ್ತರ ಪದವಿ ಪಡೆದವರು ಯಾವುದೇ ರೀತಿಯ ತರಬೇತಿಯನ್ನು ಪಡೆದುಕೊಂಡಿಲ್ಲ.

ಕೋಷ್ಟಕ ೩.೬ ಸ್ವ ಉದ್ಯೋಗಕ್ಕೆ ತರಬೇತಿಯನ್ನು ಬಯಸುವವರು

ಉದ್ಯೋಗ	**ತರಬೇತಿ**	
	ಬಯಸುವವರು	**ಬಯಸದವರು**
ಟ್ಯೂಟೋರಿಯಲ್ಸ್	೨(೨೦)	೮(೮೦)
ಟೈಲರಿಂಗ್	೮(೮೦)	೨(೨೦)
ಬ್ಯೂಟಿಪಾರ್ಲರ್	೮(೮೦)	೨(೨೦)
ಮಕ್ಕಳ ಪ್ಲೇ ಸೆಂಟರ್	೪(೪೦)	೬(೬೦)
ಕಾರ್ಯಕ್ರಮ ನಿರ್ವಾಹಕರು	೬(೬೦)	೪(೪೦)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ಹಲವಾರು ಜನರು ತರಬೇತಿ ಇಲ್ಲದೆ ಉದ್ಯೋಗವನ್ನು ಮಾಡುತ್ತಿದ್ದಾರೆ. ಆದರೆ ಉದ್ಯೋಗಕ್ಕೆ ಸಂಬಂಧಿಸಿದಂತೆ ಹೊಸ ಹೊಸ ಮಾಹಿತಿಗಳು ಮತ್ತು ವಿಷಯಗಳ ಅಗತ್ಯವೆನಿಸಿದಾಗ ಉದ್ಯೋಗಿಗಳಿಗೆ ತರಬೇತಿ ಬೇಕೆನಿಸಬಹುದು. ಇತ್ತೀಚಿನ ದಿನಗಳಲ್ಲಿ ಸ್ವ ಉದ್ಯೋಗಕ್ಕೆ ಸಂಬಂಧಿಸಿದಂತೆ ವಿವಿಧ ಸಹಕಾರಿ ಸಂಸ್ಥೆಗಳು, ಸ್ವಯಂಸೇವಾ ಸಂಘಗಳು, ಶಿಕ್ಷಣ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು ತರಬೇತಿ ಶಿಬಿರಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಈ ಮೇಲಿನ ಕೋಷ್ಟಕವು ತರಬೇತಿ ಬಯಸುವವರು ಹಾಗೂ ತರಬೇತಿ ಬೇಕಾಗಿಲ್ಲ ಎನ್ನುವ ಸ್ವ ಉದ್ಯೋಗಿಗಳ ಬಗ್ಗೆ ವಿವರಿಸುತ್ತದೆ. ಸ್ವ ಉದ್ಯೋಗಕ್ಕೆ ೫೦ ಪ್ರತಿಕ್ರಿಯೆದಾರರಲ್ಲಿ ಉದ್ಯೋಗಕ್ಕೆ ಸಂಬಂಧಿಸಿದಂತೆ ತರಬೇತಿ ಬಯಸುವವರು ಒಟ್ಟು ೨೮ ಮಹಿಳೆಯರು ಅಂದರೆ ಶೇಕಡಾ ೫೬. ಟ್ಯೂಟೋರಿಯಲ್ಸ್ ನಡೆಸುವವರಿಗೆ ಕಲಿಕಾ ವಿಧಾನಗಳ ಬಗ್ಗೆ ತರಬೇತಿಯ ಅಗತ್ಯವಿದೆ. ಬ್ಯೂಟಿಪಾರ್ಲರ್ ನಡೆಸುವವರಿಗೆ ಸೌಂದರ್ಯವರ್ಧಕಗಳ ಬಗ್ಗೆ ಮಾಹಿತಿ, ಟೈಲರಿಂಗ್ ನಡೆಸುವವರಿಗೆ


ಹೊಸ ಹೊಲಿಕೆಯ ನಮೂನೆಗಳ ಬಗ್ಗೆ ತರಬೇತಿ, ಮಕ್ಕಳ ಪ್ಲೇ ಸೆಂಟರ್ ನಡೆಸುವವರಿಗೆ ಹೊಸ ಚಟುವಟಿಕೆಗಳ ಆಯೋಜನೆಗಳ ಬಗ್ಗೆ, ಕಾರ್ಯಕ್ರಮ ನಿರ್ವಹಣೆಗೆ ಸಂಬಂಧಿಸಿದಂತೆ ಕೌಶಲ್ಯ ಅಭಿವೃದ್ಧಿ ತರಬೇತಿಯ ಅಗತ್ಯವಿದೆ. ಉದ್ಯೋಗಕ್ಕೆ ಸಂಬಂಧಿಸಿದಂತೆ ತರಬೇತಿ ಬಯಸದವರು ಒಟ್ಟು ೨೨ ಜನರು ಅಂದರೆ ಶೇಕಡಾ ೪೪. ತರಬೇತಿಯನ್ನು ಈಗಾಗಲೇ ಪಡೆದಿರುವ ಕಾರಣ ಹೆಚ್ಚಿನ ಅಗತ್ಯವಿಲ್ಲವೆಂಬುವುದು ಪ್ರತಿಕ್ರಿಯೆದಾರರ ಅಭಿಪ್ರಾಯವಾಗಿದೆ.

ಕೋಷ್ಟಕ ೩.೭ ಸ್ವ ಉದ್ಯೋಗಕ್ಕೆ ಸಹಾಯ ಪಡೆದುಕೊಂಡವರು

ಉದ್ಯೋಗ	ಸಹಾಯ	
	ಪಡೆದುಕೊಂಡವರು	ಪಡೆಯದವರು
ಟ್ಯೂಟೋರಿಯಲ್ಸ್	–	೧೦(೧೦೦)
ಟೈಲರಿಂಗ್	೬(೬೦)	೪(೪೦)
ಬ್ಯೂಟಿಪಾರ್ಲರ್	೪(೪೦)	೬(೬೦)
ಮಕ್ಕಳಪ್ಲೇ ಸೆಂಟರ್	೬(೬೦)	೪(೪೦)
ಕಾರ್ಯಕ್ರಮ ನಿರ್ವಾಹಕರು	೮(೮೦)	೨(೨೦)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ನಕ್ಷೆ ೩.೪



ಉದ್ಯೋಗ ಮಾಡಲು ಆರ್ಥಿಕ ಸಹಾಯ, ಉದ್ಯೋಗ ಮಾಡಲು ಪ್ರೋತ್ಸಾಹ, ಸ್ವ ಉದ್ಯೋಗ ಪ್ರಾರಂಭ ಮಾಡುವ ಮೊದಲು ಹಾಗೂ ನಂತರ ಸರಕಾರದ ಯೋಜನೆಗಳ ಬಗ್ಗೆ ತಿಳುವಳಿಕೆಗಳನ್ನು ನೀಡುವಿಕೆ, ಸಾಲ ಸೌಲಭ್ಯ ಯೋಜನೆಗಳ ಮಾಹಿತಿ ಇಂತಹ ಅನೇಕ ವಿಚಾರಗಳ ಬಗ್ಗೆ ಜನರಿಗೆ ಅರಿವು ಮೂಡಿಸಿ ಸಹಾಯ ಮಾಡುವವರನ್ನು ಕಾಣಬಹುದು. ಮಂಗಳೂರು ತಾಲೂಕಿನ ಸ್ವ ಉದ್ಯೋಗಿಗಳಿಗೆ ಮುಖ್ಯವಾಗಿ ಉದ್ಯೋಗ ಪ್ರಾರಂಭಿಸಲು ನೆರವಾದವರ ಬಗ್ಗೆ ಮೇಲಿನ ಕೋಷ್ಟಕವು ತಿಳಿಸುತ್ತದೆ. ಟ್ಯೂಟೋರಿಯಲ್ಸ್ ಹೊರತುಪಡಿಸಿ ಶೇಕಡಾ ೪೮ರಷ್ಟು ಸ್ವ ಉದ್ಯೋಗಿಗಳು ಅವರ ಉದ್ಯೋಗಕ್ಕೆ ಸಂಬಂಧಿಸಿದಂತೆ ಸಹಾಯ ತೆಗೆದುಕೊಂಡಿದ್ದಾರೆ. ಶೇಕಡಾ ೫೨ ರಷ್ಟು ಜನರು ಯಾವುದೇ ರೀತಿಯ ಸಹಾಯವಿಲ್ಲದೆ ಸ್ವ ಉದ್ಯೋಗ ಮಾಡುತ್ತಿದ್ದಾರೆ. ಮಹಿಳಾ ಸ್ವ ಉದ್ಯೋಗಿಗಳಿಗೆ ಅವರ ಉದ್ಯೋಗಕ್ಕೆ ಪ್ರೋತ್ಸಾಹ ಕೊಡಲು ನಿರಾಕರಿಸಿದವರು ಹೆಚ್ಚಾಗಿದ್ದುದರಿಂದ ಅವರಿಗೆ ಸಹಾಯ ಮಾಡಿದವರು ಕಡಿಮೆ ಎಂದು ಹೇಳಬಹುದು. ಮುಂದಿನ ಕೋಷ್ಟಕ ೩.೮ ವಿವಿಧ ಮೂಲಗಳಿಂದ ಉದ್ಯೋಗಕ್ಕೆ ಸಾಲ ಪಡೆದುಕೊಂಡವರ ಬಗ್ಗೆ ತಿಳಿಸುತ್ತದೆ.

ಕೋಷ್ಟಕ ೩.೮ ಸ್ವ ಉದ್ಯೋಗಕ್ಕೆ ವಿವಿಧ ಮೂಲಗಳಿಂದ ಸಹಾಯ ಪಡೆದುಕೊಂಡವರು

ಉದ್ಯೋಗ	**ಸಹಾಯದ ಮೂಲಗಳು**				
	ಪೋಷಕರು	**ಗಂಡ**	**ಸಂಬಂಧಿಕರು**	**ಮಕ್ಕಳು**	**ಇತರ**
ಟ್ಯೂಟೋರಿಯಲ್ಸ್	–	–	–	–	–
ಟೈಲರಿಂಗ್	–	–	೬(೧೦೦)	–	–
ಬ್ಯೂಟಿಪಾರ್ಲರ್	–	–	೨(೫೦)	–	೨(೫೦)
ಮಕ್ಕಳ ಪ್ಲೇ ಸೆಂಟರ್	೪(೪೦)	೪(೪೦)	೨(೨೦)	–	–
ಕಾರ್ಯಕ್ರಮ ನಿರ್ವಾಹಕರು	೨(೫೦)	೨(೫೦)	–	–	–

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

೫೦ ಪ್ರತಿಕ್ರಿಯೆದಾರರಲ್ಲಿ ಉದ್ಯೋಗಕ್ಕೆ ಸಹಾಯ ಪಡೆದುಕೊಂಡವರು ಒಟ್ಟು ೨೪ ಜನರು. ಟ್ಯೂಟೋರಿಯಲ್ಸ್ ನಡೆಸುವವರು ತಮ್ಮದೇ ಸ್ವ ಪ್ರಯತ್ನದಿಂದ ಉದ್ಯೋಗ ಮಾಡುತ್ತಿದ್ದು ಯಾವುದೇ ರೀತಿಯಲ್ಲಿ ಉದ್ಯೋಗಕ್ಕೆ ಸಹಾಯ ಪಡೆದುಕೊಂಡಿಲ್ಲ. ಟೈಲರಿಂಗ್ ಉದ್ಯೋಗ ಮಾಡುವ ೬ ಪ್ರತಿಕ್ರಿಯೆದಾರರು ಸಂಬಂಧಿಕರಿಂದ ಸಹಾಯ

ಪಡೆದುಕೊಂಡಿದ್ದಾರೆ. ಬ್ಯೂಟಿಪಾರ್ಲರ್ ಸ್ವ ಉದ್ಯೋಗಿಗಳಲ್ಲಿ ೨ ಜನರು ಸಂಬಂಧಿಕರಿಂದ ಹಾಗೂ ಉಳಿದ ೨ ಜನರು ಇತರಿಂದ ಅಂದರೆ ಸ್ವ ಸಹಾಯ ಸಂಘಗಳ ಸಹಾಯ ಪಡೆದಿರುತ್ತಾರೆ. ಮಕ್ಕಳ ಪ್ಲೇ ಸೆಂಟರ್ ನಡೆಸುವವರಲ್ಲಿ ೪ ಜನರು ಪೋಷಕರಿಂದ, ೪ ಜನರು ತಮ್ಮ ಗಂಡ ಹಾಗೂ ಉಳಿದ ೨ ಜನರು ಸಂಬಂಧಿಕರಿಂದ ಸಹಾಯ ಪಡೆದಿರುತ್ತಾರೆ. ಕಾರ್ಯಕ್ರಮ ನಿರ್ವಹಣೆ ನಡೆಸುವ ೨ ಜನರು ಪೋಷಕರಿಂದ ಹಾಗೂ ಉಳಿದ ೨ ಜನರು ತಮ್ಮ ಗಂಡನ ಸಹಾಯವನ್ನು ಪಡೆದಿರುತ್ತಾರೆ.

ಕೋಷ್ಟಕ ೩.೯ ವಯಸ್ಸಿಗನುಗುಣವಾಗಿ ವಿವಿಧ ಮೂಲಗಳಿಂದ ಸಹಾಯ ಪಡೆದುಕೊಂಡವರು

ವಯಸ್ಸು	**ಸಹಾಯದ ಮೂಲಗಳು**				
	ಪೋಷಕರು	**ಗಂಡ**	**ಸಂಬಂಧಿಕರು**	**ಮಕ್ಕಳು**	**ಇತರ**
೩೦ಕ್ಕಿಂತ ಕಡಿಮೆ	–	–	೨(೧೦೦)	–	–
೩೦–೫೦	೬(೩೦)	೪(೨೦)	೮(೪೦)	–	೨(೧೦)
೫೦ಕ್ಕಿಂತ ಮೇಲ್ಪಟ್ಟು	–	೨(೧೦೦)	–	–	–

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ


ಪ್ರತಿಕ್ರಿಯೆದಾರರಲ್ಲಿ ೨೪ ಜನರು ಸ್ವ ಉದ್ಯೋಗಕ್ಕೆ ಸಹಾಯ ಪಡೆದುಕೊಂಡಿದ್ದಾರೆ. ೩೦ ವರ್ಷದೊಳಗಿನವರಲ್ಲಿ ಶೇಕಡಾ ೮.೩ ಅಂದರೆ ೨ ಜನರು ಸಂಬಂಧಿಕರಿಂದ ಸಹಾಯ ಪಡೆದಿದ್ದಾರೆ. ೩೦ ರಿಂದ ೫೦ ವರ್ಷದೊಳಗಿನವರಲ್ಲಿ ಶೇಕಡಾ ೮೩.೪ ಅಂದರೆ ೨೦ ಜನರು ಪೋಷಕರಿಂದ, ಗಂಡ, ಸಂಬಂಧಿಕರು ಮತ್ತು ಇತರ ಮೂಲಗಳಿಂದ ಸಹಾಯ ಪಡೆದಿದ್ದಾರೆ. ೫೦ ವರ್ಷ ಮೇಲ್ಪಟ್ಟವರಲ್ಲಿ ಶೇಕಡಾ ೮.೩ ಅಂದರೆ ೨ ಜನರು ತಮ್ಮ ಗಂಡನ ಸಹಾಯ ಪಡೆದಿದ್ದಾರೆ. ಮುಂದಿನ ಕೋಷ್ಟಕ ೩.೧೦ ಸ್ವ ಉದ್ಯೋಗವನ್ನು ನೋಂದಾವಣೆಯ ಬಗ್ಗೆ ತಿಳಿಸುತ್ತದೆ.

ಕೋಷ್ಟಕ ೩.೧೦ ನೋಂದಾಯಿತ ಮಹಿಳಾ ಸ್ವ ಉದ್ಯೋಗಿಗಳು

ಉದ್ಯೋಗ	ನೋಂದಾವಣೆ	
	ಮಾಡಿಕೊಂಡವರು	ಮಾಡದಿರುವವರು
ಟ್ಯೂಟೋರಿಯಲ್ಸ್	–	೧೦(೧೦೦)
ಟೈಲರಿಂಗ್	೮(೮೦)	೨(೨೦)
ಬ್ಯೂಟಿಪಾರ್ಲರ್	೧೦(೧೦೦)	–
ಮಕ್ಕಳಪ್ಲೇ ಸೆಂಟರ್	೧೦(೧೦೦)	–
ಕಾರ್ಯಕ್ರಮ ನಿರ್ವಾಹಕರು	–	೧೦(೧೦೦)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ನಕ್ಷೆ ೩.೫



ಯಾವುದೇ ಉದ್ಯೋಗವಾದರೂ ಅದನ್ನು ನೋಂದಾಯಿಸುವುದು ಅಗತ್ಯವಾಗಿದೆ. ಉದ್ಯೋಗಕ್ಕಾಗಿ ಸ್ಥಳೀಯ ಸರಕಾರದಿಂದ ಅನುಮತಿ ಪಡೆಯುವ ಮೂಲಕ ಉದ್ಯೋಗವನ್ನು ನೋಂದಾಯಿಸುವುದಾಗಿದೆ. ವ್ಯವಹಾರಕ್ಕನುಗುಣವಾಗಿ ತೆರಿಗೆ ಪಾವತಿ ಮಾಡುವುದು ಅಗತ್ಯವಾದುದರಿಂದ ನೋಂದಾವಣೆಯು ಮುಖ್ಯವಾಗಿದೆ. ೫೦ ಪ್ರತಿಕ್ರಿಯೆದಾರರಲ್ಲಿ ಶೇಕಡಾ ೫೬ರಷ್ಟು ಅಂದರೆ ೨೮ ಜನರು ತಮ್ಮ ಉದ್ಯೋಗವನ್ನು ನೋಂದಾವಣೆ ಮಾಡಿದ್ದಾರೆ. ಶೇಕಡಾ ೪೪ರಷ್ಟು ಅಂದರೆ ೨೨ ಜನರು ತಮ್ಮ ಉದ್ಯೋಗವನ್ನು ನೋಂದಾಯಿಸಿಕೊಂಡಿಲ್ಲ. ಕಾರ್ಯಕ್ರಮ ನಿರ್ವಹಣೆ ಮಾಡುವವರ ಅಭಿಪ್ರಾಯದಂತೆ ಅವರ ಉದ್ಯೋಗ ನೋಂದಾವಣೆ ಅಗತ್ಯವಿಲ್ಲವೆಂಬುವುದು ತಿಳಿದು ಬಂದಿದೆ. ನೋಂದಾವಣೆಯ ಅಗತ್ಯವಿಲ್ಲವೆಂಬುವುದು ಬಹುತೇಕ ಪ್ರತಿಕ್ರಿಯೆದಾರರ ಅಭಿಪ್ರಾಯವಾಗಿದೆ. ಕೋಷ್ಟಕ ೩.೧೧ ನೋಂದಾವಣೆ ಮಾಡುವ ಸಂದರ್ಭದಲ್ಲಿ ಸ್ಥಳೀಯ ಸರಕಾರದ ಪ್ರತಿಕ್ರಿಯೆಯ ಬಗ್ಗೆ ತಿಳಿಸುತ್ತದೆ.

ಕೋಷ್ಟಕ ೩.೧೧ ಸ್ಥಳೀಯ ಸರಕಾರದಿಂದ ಉದ್ಯೋಗ ನೋಂದಾವಣೆಗೆ ಪ್ರತಿಕ್ರಿಯೆ

ಉದ್ಯೋಗ	ನೋಂದಾವಣೆಗೆ ಪ್ರತಿಕ್ರಿಯೆ		
	ತೊಂದರೆಯಾಗಿಲ್ಲ	ಸ್ವಲ್ಪ ತೊಂದರೆಯಾಗಿದೆ	ಹೆಚ್ಚಿನ ತೊಂದರೆಯಾಗಿದೆ
ಟ್ಯುಟೋರಿಯಲ್ಸ್	–	–	–
ಟೈಲರಿಂಗ್	೬(೭೫)	–	೨(೨೫)
ಬ್ಯೂಟಿಪಾರ್ಲರ್	೮(೮೦)	೨(೨೦)	–
ಮಕ್ಕಳಪ್ಲೇ ಸೆಂಟರ್	೬(೬೦)	೪(೪೦)	–
ಕಾರ್ಯಕ್ರಮ ನಿರ್ವಾಹಕರು	–	–	–

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ನೋಂದಾವಣೆ ಮಾಡಿದ ಒಟ್ಟು ೨೮ ಪ್ರತಿಕ್ರಿಯೆದಾರರಲ್ಲಿ ಶೇಕಡಾ ೭೧.೪ ಜನರಿಗೆ ಸ್ಥಳೀಯ ಸರಕಾರದಿಂದ ಉದ್ಯೋಗ ನೋಂದಾವಣೆಗೆ ಯಾವುದೇ ರೀತಿಯ ತೊಂದರೆಯಾಗಿಲ್ಲ. ಶೇಕಡಾ ೨೧.೪ ಜನರಿಗೆ ನೋಂದಾವಣೆಗೆ ಸಂಬಂಧಪಟ್ಟಂತೆ ಸ್ವಲ್ಪ ತೊಂದರೆಯಾಗಿದೆ ಹಾಗೂ ಶೇಕಡಾ ೭.೨ ರಷ್ಟು ಜನರಿಗೆ ಉದ್ಯೋಗ ಸಂಬಂಧಪಟ್ಟಂತೆ ಹೆಚ್ಚಿನ ತೊಂದರೆಯಾಗಿದೆ. ನೋಂದಾವಣೆಯ ಶುಲ್ಕ ಏರಿಕೆ, ನೋಂದಾವಣೆಗೆ ತಕರಾರು, ನೋಂದಾವಣೆಗೆ ಅನುಮತಿ ನೀಡದಿರುವುದು ಮುಂತಾದ ಸಮಸ್ಯೆಗಳು ಎದುರಾಗಿವೆ. ಸ್ವ ಉದ್ಯೋಗ ನೋಂದಾವಣೆಯ

ಸಂದರ್ಭದಲ್ಲಿ ಸ್ಥಳೀಯ ಸರಕಾರವು ಆ ಪ್ರದೇಶದಲ್ಲಿ ಒಟ್ಟು ಎಷ್ಟು ಜನರು ಅದೇ ತರಹದ ಸ್ವ ಉದ್ಯೋಗವನ್ನು ಮಾಡುತ್ತಿದ್ದಾರೆ ಎಂಬುವುದನ್ನು ಪರಿಶೀಲಿಸಿ, ನಂತರ ಒಂದು ವೇಳೆ ಆ ಪ್ರದೇಶದಲ್ಲಿ ಸ್ವ ಉದ್ಯೋಗ ಮಾಡುವವರ ಸಂಖ್ಯೆ ಹೆಚ್ಚಾಗಿದ್ದರೆ ನೋಂದಾವಣೆಗೆ ತೊಂದರೆ ಮಾಡಿದ್ದಾರೆಂಬುವುದು ಸ್ವ ಉದ್ಯೋಗಿಗಳಿಂದ ತಿಳಿದು ಬಂದಿದೆ.

ಕೋಷ್ಟಕ ೩.೧೨ ಸ್ವ ಉದ್ಯೋಗಕ್ಕೆ ದೊರಕುವ ಸರಕಾರದ ಸವಲತ್ತುಗಳನ್ನು ಪಡೆದುಕೊಂಡವರು

ಉದ್ಯೋಗ	ಸವಲತ್ತು	
	ಪಡೆದುಕೊಂಡವರು	ಪಡೆಯದವರು
ಟ್ಯೂಟೋರಿಯಲ್ಸ್	–	೧೦(೧೦೦)
ಟೈಲರಿಂಗ್	೪(೪೦)	೬(೬೦)
ಬ್ಯೂಟಿಪಾರ್ಲರ್	–	೧೦(೧೦೦)
ಮಕ್ಕಳಪ್ಲೇ ಸೆಂಟರ್	–	೧೦(೧೦೦)
ಕಾರ್ಯಕ್ರಮ ನಿರ್ವಾಹಕರು	–	೧೦(೧೦೦)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ಒಟ್ಟು ೫೦ ಪ್ರತಿಕ್ರಿಯೆದಾರರಲ್ಲಿ ಶೇಕಡಾ ೮ರಷ್ಟು ಅಂದರೆ ೪ ಜನರಿಗೆ ಮಾತ್ರ ಸರಕಾರದ ಸವಲತ್ತುಗಳು ದೊರಕಿವೆ. ಅವರಿಗೆ ದೊರೆತ ಸವಲತ್ತೆಂದರೆ ಉದ್ಯೋಗಕ್ಕೆ ಸಂಬಂಧಿಸಿದಂತೆ ತರಬೇತಿ. ಶೇಕಡಾ ೯೨ರಷ್ಟು ಅಂದರೆ ೯೨ ಜನರಿಗೆ ಯಾವುದೇ ಸೌಲಭ್ಯಗಳು ಲಭಿಸಿಲ್ಲ. ಸವಲತ್ತುಗಳ ಬಗ್ಗೆ ಮಾಹಿತಿ ಇಲ್ಲದಿರುವುದು ಕಂಡು ಬಂದಿದೆ.

೩.೨ ಉಪಸಂಹಾರ

ಮಹಿಳಾ ಉದ್ಯೋಗವನ್ನು ಪ್ರೋತ್ಸಾಹಿಸಲು ವಿವಿಧ ಯೋಜನೆಗಳು, ವಿವಿಧ ಸೌಲಭ್ಯಗಳು ಹಾಗೂ ವಿವಿಧ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಯೋಜನೆಗಳ ಬಗ್ಗೆ ವಿವಿಧ ಸಂಘಟನೆಗಳು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಿ ಮಹಿಳೆಯರಿಗೆ ವಿಶೇಷ ಅವಕಾಶಗಳನ್ನು ಕಲ್ಪಿಸಿಕೊಡುತ್ತಿವೆ. ಆದರೆ ಬಹುತೇಕ ಮಹಿಳೆಯರು ಅದರ ಸದುಪಯೋಗ ಮಾಡದಿರುವುದನ್ನು ನಾವು ಕಾಣಬಹುದು. ಇದಕ್ಕೆ ಕಾರಣಗಳನ್ನು ಹುಡುಕುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. ಮಂಗಳೂರು ತಾಲೂಕಿನ ಸ್ವ ಉದ್ಯೋಗಿ ಮಹಿಳೆಯರಲ್ಲಿ ಒಟ್ಟು ಎಷ್ಟು ಮಹಿಳೆಯರು ಅವರ ಉದ್ಯೋಗಕ್ಕೆ ಸಂಬಂಧಿಸಿದಂತೆ ಸಿಗುವ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ ಹಾಗೂ ಎಷ್ಟು ಮಹಿಳೆಯರಿಗೆ ಇದರ ಬಗ್ಗೆ ಮಾಹಿತಿ ದೊರೆತಿಲ್ಲ ಮತ್ತು ಅದಕ್ಕೆ ಕಾರಣಗಳನ್ನು ಈ ಅಧ್ಯಯನವು ತಿಳಿಸುತ್ತದೆ.

ಮುಂದಿನ ಅಧ್ಯಾಯದಲ್ಲಿ ಮಹಿಳಾ ಸ್ವ ಉದ್ಯೋಗಿಗಳ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಮತ್ತು ಸವಾಲುಗಳನ್ನು ವಿಶ್ಲೇಷಿಸಲಾಗಿದೆ.

ಕೊನೆ ಟಿಪ್ಪಣಿ

1. ಭವ್ಯ ಹೆಚ್.ಪಿ, *ಮಹಿಳಾ ಸ್ವ ಸಹಾಯ ಸಂಘಗಳು ಮತ್ತು ಆರ್ಥಿಕ ಸಬಲೀಕರಣ*, ಮೈಸೂರು: ತಾರಾ ಪ್ರಿಂಟಿಂಗ್ ಆ್ಯಂಡ್ ಪಬ್ಲಿಷಿಂಗ್ ಹೌಸ್, ೨೦೧೩, ಪುಟ ಸಂಖ್ಯೆ ೨೫–೩೮.

ಅಧ್ಯಾಯ–೪

ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆ ಮತ್ತು ಸವಾಲುಗಳ ವಿಶ್ಲೇಷಣೆ

ಹಿಂದಿನ ಅಧ್ಯಾಯದಲ್ಲಿ ಮಹಿಳಾ ಉದ್ಯೋಗಕ್ಕೆ ಸಿಗುವ ಸೌಲಭ್ಯಗಳ ಸದುಪಯೋಗ ಮಾಡಿಕೊಂಡವರು ಹಾಗೂ ಸೌಲಭ್ಯಗಳ ಬಗ್ಗೆ ಜನರಿಗೆ ಎಷ್ಟರ ಮಟ್ಟಿಗೆ ಅರಿವು ಇದೆ ಎಂಬುವುದನ್ನು ವಿಶ್ಲೇಷಿಸಲಾಗಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಮುಖ್ಯ ಉದ್ದೇಶವಾದ ಮಂಗಳೂರು ತಾಲೂಕಿನ ಮಹಿಳಾ ಸ್ವ ಉದ್ಯೋಗಿಗಳ ಸಮಸ್ಯೆಗಳು ಮತ್ತು ಸವಾಲುಗಳನ್ನು ವಿಶ್ಲೇಷಿಸಲಾಗಿದೆ.

ಭಾರತ ದೇಶದಲ್ಲಿ ಮಹಿಳೆಯರನ್ನು ಪರರ ಸ್ವತ್ತು ಎಂದು ಭಾವಿಸಲಾಗುತ್ತದೆ. ಆದರೂ ಮಹಿಳೆಯರು ತಮ್ಮ ಜೀವನದಲ್ಲಿ ಏನಾನ್ನದರೂ ಸಾಧಿಸುವ ಕನಸುಗಳು, ಆಸೆಗಳು ಮತ್ತು ಆಕಾಂಕ್ಷೆಗಳನ್ನು ಹೊಂದಿರುತ್ತಾರೆ. ತಾಯಿಯು ಒಂದು ಮಗುವಿನ ಜೀವನದಲ್ಲಿ ಅದು ಆಡಿ ಬೆಳೆಯಲು ಪ್ರಮುಖ ಪಾತ್ರವನ್ನು ಹೊಂದಿದ್ದರೂ, ಮಗುವಿನ ಭವಿಷ್ಯದ ಬಗ್ಗೆ ಮಾತ್ರ ಕುಟುಂಬದಲ್ಲಿನ ಪುರುಷರು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಮಹಿಳೆಯನ್ನು ಅವಳ ನಡುವಳಿಕೆಯಿಂದ ಅಳೆಯಲಾಗುತ್ತಿದೆ. ಕುಟುಂಬದ ಸದಸ್ಯರ ಇಷ್ಟದಂತೆ ಅವಳ ನಡುವಳಿಕೆಯನ್ನು ಬದಲಾಯಿಸುವ ಅನಿವಾರ್ಯತೆ ಮಹಿಳೆಯದ್ದಾಗಿರುತ್ತದೆ. ಭಾರತದಲ್ಲಿ ಬಹುತೇಕ ಮಹಿಳೆಯರು ವಿವಿಧ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಹಿಳೆಗೆ ವಿವಿಧ ರೀತಿಯ ಸಾರ್ವಜನಿಕ ದೌರ್ಜನ್ಯಗಳಾಗುತ್ತಿವೆ. ಉದಾಹರಣೆಗೆ ಬಸ್ಸಿನಲ್ಲಿ ಪ್ರಯಾಣಿಸುವಾಗ ಕಿರುಕುಳ, ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ ಹೀನಾಯ ಮಾತುಗಳಿಂದ ಮಾನಸಿಕ ಹಿಂಸೆ, ಉದ್ಯೋಗ ನಡೆಸುವ ಸ್ಥಳದಲ್ಲಿ ಸಹ ಕೆಲಸಗಾರರಿಂದ ಕಿರುಕುಳ ಇನ್ನೂ ಹಲವು ರೀತಿಯ ಸಮಸ್ಯೆಗಳಿವೆ. ಹೆಣ್ಣು ಶಿಶುಹತ್ಯೆ, ಲೈಂಗಿಕ ದೌರ್ಜನ್ಯ, ಅತ್ಯಾಚಾರ, ವರದಕ್ಷಿಣೆ, ಮಹಿಳೆಯರನ್ನು ಜೀವಂತ ಸುಡುವಿಕೆ, ಶಿಕ್ಷಣ ಅಸಮಾನತೆ, ಲಿಂಗ ಅಸಮಾನತೆ, ಬಾಲ್ಯವಿವಾಹ, ಅಸಮರ್ಪಕ ಪೌಷ್ಟಕಾಂಶ, ಕೌಟುಂಬಿಕ ಹಿಂಸಾಚಾರ, ಗರ್ಭಪಾತ, ವಿಧವಾ ಆಚರಣೆ ಪ್ರಕಾರ ಬಲವಂತವಾಗಿ ಬಿಳಿ ಉಡುಪಿನ ಧರಿಸುವಿಕೆ ಮುಂತಾದವು ಮಹಿಳೆಗಿರುವ ಇತರ ಸಮಸ್ಯೆಗಳು. ಮಹಿಳಾ ಕ್ಯಾಲೋರಿ ಅಂಶವು ಸುಮಾರು ೧೦೦ ಕ್ಯಾಲೋರಿಗಳಷ್ಟು (ದಿನಕ್ಕೆ ಪ್ರತಿ ಮಹಿಳೆಯರಿಗೆ) ಆದರೆ ಪುರುಷರು ೮೦೦ ಕ್ಯಾಲೋರಿ ಹೆಚ್ಚುವರಿ ಸೇವನೆಯನ್ನು ಮಾಡುತ್ತಾರೆ. ಮಹಿಳೆಯರು ಮನೆಯ ಒಳಗೆ ಮತ್ತು ಹೊರಗೆ ಕೆಲಸ ಮಾಡುವ ಕಾರಣ ಶಕ್ತಿಯು ದೊಡ್ಡ ಪ್ರಮಾಣದ್ದಾಗಿರುತ್ತದೆ. ಆದರೆ ಅವರು ಸಾಕಷ್ಟು ಪ್ರಮಾಣದಲ್ಲಿ ಆಹಾರವನ್ನು ತಿನ್ನುವುದಿಲ್ಲ ಇದಕ್ಕೆ ಕಾರಣ ಕುಟುಂಬದ ಪುರುಷರು ಮತ್ತು ಇತರ ಸದಸ್ಯರು ತಿಂದ ನಂತರ ಉಳಿದ ಆಹಾರವನ್ನು ಮಹಿಳೆಯರು ಸಾಮಾನ್ಯವಾಗಿ ತಿನ್ನುತ್ತಾರೆ. ಈ ರೀತಿ ಮಹಿಳೆಯರು ತಿನ್ನುವ ಪ್ರಮಾಣ ಕಡಿಮೆ ಆಗಿ ಪ್ರಸವಪೂರ್ವ ಅವಧಿಯಲ್ಲಿ ಜ್ಞಾನ ಮತ್ತು ಆರೈಕೆಯ ಕೊರತೆ, ಆಗಾಗ ಗರ್ಭಧಾರಣೆಗಳು, ಭ್ರೂಣದ ಹಾನಿ ಯುವ ಮಹಿಳೆಯರ ಸಾವುಗಳಿಗೆ ಕಾರಣವಾಗುತ್ತವೆ. ರಾಜಕೀಯ ಕ್ಷೇತ್ರದಲ್ಲಿ ಮಹಿಳಾ

ಭಾಗವಹಿಸುವಿಕೆಯು ಕಡಿಮೆ ಇರುತ್ತದೆ. ಶಿಕ್ಷಣ ಪಡೆಯಲು ಅವಕಾಶ ನೀಡಿದರೂ ಉದ್ಯೋಗ ಮಾಡಲು ಅವಕಾಶ ನೀಡದ ಅನೇಕ ಕುಟುಂಬಗಳಿವೆ. ಉದ್ಯೋಗ ಮಾಡಲು ಅವಕಾಶ ನೀಡಿದರೂ ಉದ್ಯೋಗ ಸ್ಥಳದಲ್ಲಿ ನಡೆಯುವ ಕಿರುಕುಳ, ಲೈಂಗಿಕ ದೌರ್ಜನ್ಯದಿಂದಾಗಿ ಮಹಿಳೆಯರು ಉದ್ಯೋಗ ಮಾಡುವ ಕನಸನ್ನು ಬದಿಗಿಟ್ಟಿದ್ದಾರೆ. ಅನೇಕ ಮಹಿಳೆಯರು ಈ ಮೇಲಿನ ಕಾರಣಗಳಿಂದಾಗಿ ಸ್ವ ಉದ್ಯೋಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಸ್ವ ಉದ್ಯೋಗ ಸ್ಥಳದಲ್ಲಿ ಉದ್ಯೋಗದಾತನ ಕಿರುಕುಳವಿರುವುದಿಲ್ಲ ಮತ್ತು ಸಹ ಕೆಲಸಗಾರರಿಂದ ಯಾವುದೇ ಸಮಸ್ಯೆಗಳಿರುವುದಿಲ್ಲ. ಆದರೆ ಸ್ವ ಉದ್ಯೋಗದಲ್ಲಿ ಇತರ ಸಮಸ್ಯೆಗಳನ್ನು ಮಹಿಳೆಯರು ಅನುಭವಿಸುತ್ತಿರಬಹುದು. ಸಾಮಾನ್ಯವಾಗಿ ಮಹಿಳೆಯರಿಗೆ ಉದ್ಯೋಗ ಜಗತ್ತನ್ನು ಪ್ರವೇಶಿಸಲು ಅಡ್ಡಿಯಾಗುವ ಅಂಶಗಳೆಂದರೆ:

೧. ಬಂಡವಾಳದ ಸಮಸ್ಯೆ

೨. ಶಿಕ್ಷಣದ ಕೊರತೆ

೩. ಉದ್ಯಮ ಕೌಶಲ್ಯದ ಕೊರತೆ

೪. ಮಾರುಕಟ್ಟೆಯ ಸಮಸ್ಯೆ

೫. ತೀವ್ರ ಪೈಪೋಟಿ

೬. ಕೌಟುಂಬಿಕ ಮತ್ತು ಸಾಮಾಜಿಕ ಕಟ್ಟುಪಾಡುಗಳು

೭. ಮಾರ್ಗದರ್ಶನ ಮತ್ತು ತರಬೇತಿಯ ಕೊರತೆ

೮. ಸಾಂಪ್ರದಾಯಿಕ ತಪ್ಪು ಕಲ್ಪನೆಗಳು ಮತ್ತು ಧಾರ್ಮಿಕ ಆಚರಣೆಗಳು

೪.೧ ಸ್ವ ಉದ್ಯೋಗಿ ಮಹಿಳೆಯರ ಸಾಮಾಜಿಕ–ಆರ್ಥಿಕ ಸಮಸ್ಯೆಗಳು

ಮಂಗಳೂರು ತಾಲೂಕಿನಲ್ಲಿ ಸೇವಾ ಕ್ಷೇತ್ರದಲ್ಲಿ ದುಡಿಯುತ್ತಿರುವ ಸ್ವ ಉದ್ಯೋಗಿ ಮಹಿಳೆಯರು ಸ್ವ ಉದ್ಯೋಗ ಆಯ್ಕೆ ಮಾಡುವ ಸಂದರ್ಭದಲ್ಲಿ ಹಾಗೂ ಸ್ವ ಉದ್ಯೋಗ ಮಾಡುತ್ತಿರುವಾಗ ಅನೇಕ ರೀತಿಯ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಕುಟುಂಬ ನಿರ್ವಹಣೆಯ ಜೊತೆಗೆ ಉದ್ಯೋಗದ ಜವಾಬ್ದಾರಿಯನ್ನು ನಡೆಸುತ್ತಿದ್ದಾರೆ. ಸ್ವ ಉದ್ಯೋಗ ಅನಿವಾರ್ಯತೆಯು ಮಹಿಳೆಯರಿಗೆ ಒಂದು ಸಮಸ್ಯೆಯಾಗಿದೆ. ಕುಟುಂಬ ನಡೆಸಲು ಕುಟುಂಬದ ಇತರ ಸದಸ್ಯರ ಆದಾಯವು ಸಾಲದಿದ್ದಾಗ ಮಹಿಳೆಯರು ಸ್ವ ಉದ್ಯೋಗ ಮಾಡುತ್ತಿದ್ದಾರೆ. ಮಹಿಳೆಯರಿಗೆ ಸ್ವ ಉದ್ಯೋಗ ನಡೆಸಲು ಇರುವ ಸಮಸ್ಯೆಗಳೆಂದರೆ ಯಾವ ದುಡಿಮೆ ಮಾಡುವುದು ಎಂದು ನಿರ್ಧರಿಸುವುದು ನಂತರ ಸ್ವ ಉದ್ಯೋಗ ಮಾಡಲು ಮನೆಯ ಸದಸ್ಯರಿಂದ ಅನುಮತಿ ಪಡೆಯುವುದು. ಮಹಿಳೆಯರಿಗೆ ಅವರ ಜಾತಿಯಿಂದಾಗಿ ಸ್ವ ಉದ್ಯೋಗಕ್ಕೆ ಕುಟುಂಬದ ವಿರೋಧ, ಪುರುಷರು ಹೇಳುವ ಸ್ವ ಉದ್ಯೋಗಕ್ಕೆ ಮಾತ್ರ ಅವಕಾಶ, ಪುರುಷರು ಬೇರೆಯವರ ಕೈಕೆಳಗೆ ದುಡಿಯುತ್ತಿದ್ದು ಮಹಿಳಾ ಸ್ವ ದುಡಿಮೆಯು ತಮಗೆ ಅವಮಾನ ಎಂಬ ಭಾವನೆಯಿಂದಾಗಿ ಮಹಿಳೆಯರಿಗೆ ಅನುಮತಿ ಸಿಗಲು ಸಮಸ್ಯೆಯಾಗಿದೆ. ಪ್ರತಿಕ್ರಿಯೆದಾರರಲ್ಲಿ ಶೇಕಡಾ ೩೬ರಷ್ಟು ಮಹಿಳೆಯರಿಗೆ ಅವರ

ಉದ್ಯೋಗಕ್ಕೆ ಸಂಬಂಧಿಸಿದಂತೆ ಅವರ ಪೋಷಕರು, ಗಂಡ ಮತ್ತು ಸಂಬಂಧಿಕರು ವಿರೋಧ ವ್ಯಕ್ತಪಡಿಸಿರುವುದರಿಂದ ಕೌಟುಂಬಿಕ ಸಮಸ್ಯೆಗಳು ಎದುರಾಗಿವೆ. ಸ್ಥಳೀಯ ಸರಕಾರದಿಂದ ಉದ್ಯೋಗಕ್ಕೆ ಅನುಮತಿ ದೊರೆತ ನಂತರ ಸ್ವ ಉದ್ಯೋಗಕ್ಕೆ ಬೇಕಾದ ಬಂಡವಾಳ ಒಟ್ಟುಗೂಡಿಸುವುದು ಸಹ ಒಂದು ಸಮಸ್ಯೆಯಾಗಿದೆ. ಬಂಡವಾಳವು ಹೆಚ್ಚಿನದ್ದು ಆಗಿದ್ದಾಗ ಸಾಲ ತೆಗೆದುಕೊಳ್ಳುವ ಅನಿವಾರ್ಯತೆ ಎದುರಾಗುತ್ತದೆ. ವಿವಿಧ ಸಂಸ್ಥೆಗಳಲ್ಲಿ ಸಾಲದ ಬಡ್ಡಿದರದಲ್ಲಿ ಬದಲಾವಣೆಗಳಿವೆ. ಸಾಲ ಪಡೆದುಕೊಳ್ಳುವ ಮೂಲವನ್ನು ನಿರ್ಧಾರ ಮಾಡುವುದು ಕಷ್ಟಕರವಾಗಿದೆ. ಸಾಲದ ಬಡ್ಡಿದರವು ಹೆಚ್ಚಾಗಿದ್ದಾಗ ಸಾಲದ ಮರುಪಾವತಿಯು ಸಮಸ್ಯೆಯಾಗಿದೆ. ದುಡಿಮೆ ಪ್ರಾರಂಭಿಸಿದ ನಂತರ ಅದಕ್ಕೆ ಹೂಡಿದ ಬಂಡವಾಳದಷ್ಟು ಅಥವಾ ಅದಕ್ಕಿಂತ ಹೆಚ್ಚಿನ ಬರುವ ಆದಾಯ ದೊರೆಕಬೇಕು ಇಲ್ಲವಾದಲ್ಲಿ ನಷ್ಟ ಎದುರಿಸುವ ಸಂದರ್ಭಗಳು ಬರುತ್ತವೆ ಬಂಡವಾಳದ ವ್ಯವಸ್ಥೆ ಮಾಡಿದ ನಂತರ ಉದ್ಯೋಗ ನಡೆಸುವ ಸ್ಥಳವು ಮುಖ್ಯವಾಗಿರುತ್ತದೆ. ಆಯಾ ಉದ್ಯೋಗಕ್ಕೆ ಸಂಬಂಧಿಸಿದಂತೆ ಎಷ್ಟು ಸ್ಥಳಾವಕಾಶ ಬೇಕು ಅಷ್ಟು ಸ್ಥಳವಿರಬೇಕು. ಮನೆಯಲ್ಲಿ ಬೇಕಾಗುವಷ್ಟು ಸ್ಥಳಾವಕಾಶ ಇಲ್ಲದಿದ್ದಾಗ ಬಾಡಿಗೆ ಕಟ್ಟಡದಲ್ಲಿ ದುಡಿಮೆ ಮಾಡುವ ಸ್ವ ಉದ್ಯೋಗಿಗಳಿಗೆ ಬಾಡಿಗೆ ಕಟ್ಟುವ ಸಮಸ್ಯೆ ಎದುರಾಗಿದೆ. ಪ್ರತಿಕ್ರಿಯೆದಾರರಲ್ಲಿ ಶೇಕಡಾ ೨೦ರಷ್ಟು ಜನರಿಗೆ ಅವರ ಉದ್ಯೋಗ ನಡೆಸುವಲ್ಲಿ ಸ್ಥಳಾವಕಾಶದ ಸಮಸ್ಯೆ ಎದುರಾಗಿದೆ. ಟೈಲರಿಂಗ್ ನಡೆಸುವ ಸ್ವ ಉದ್ಯೋಗಿಗಳಿಗೆ ಕಚ್ಚಾವಸ್ತುಗಳು ಸರಿಯಾದ ಸಮಯಕ್ಕೆ ದೊರಕದಿದ್ದಾಗ ಗ್ರಾಹಕರಿಗೆ ಸರಿಯಾದ ಸಮಯಕ್ಕೆ ಬಟ್ಟೆಗಳನ್ನು ಹೊಲಿದು ಕೊಡಲು ಕಷ್ಟವಾಗುತ್ತದೆ. ಸ್ವ ಉದ್ಯೋಗವನ್ನು ಆರಂಭಿಸುವ ಮೊದಲು ಬೇರೆ ಸ್ಥಳದಲ್ಲಿ ಉದ್ಯೋಗ ಮಾಡುವಾಗ ಮಹಿಳೆಯರಿಗೆ ಆ ಸ್ಥಳದಲ್ಲಿ ಕಿರುಕುಳವೆನಿಸಿದಾಗ ಸ್ವ ಉದ್ಯೋಗವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಆದರೆ ಸ್ವ ಉದ್ಯೋಗದಲ್ಲಿ ಸಿಗುವ ಆದಾಯ ಕಡಿಮೆಯಾದಾಗ ಈ ಮೇಲಿನ ಕಾರಣಗಳಿಂದಾಗಿ ಬೇರೆ ಉದ್ಯೋಗದಲ್ಲಿ ಕೆಲಸ ಮಾಡಲು ಧೈರ್ಯ ಬರದಿರುವ ಸಮಸ್ಯೆಯು ಕಂಡು ಬಂದಿದೆ. ಸ್ವ ಉದ್ಯೋಗಿಗಳಿಂದ ಸೇವೆ ಪಡೆದ ನಂತರ ಗ್ರಾಹಕರು ಸ್ವ ಉದ್ಯೋಗಿಗಳು ಮಾಡಿದ ಸೇವೆಯು ಅವರಿಗೆ ತೃಪ್ತಿ ನೀಡಿಲ್ಲವೆಂಬ ಕಾರಣಗಳನ್ನು ನೀಡಿ ಹಣ ಪಾವತಿಸಲು ನಿರಾಕರಿಸಿರುವುದರಿಂದ ಹಣಕಾಸಿನ ಸಮಸ್ಯೆಯು ಎದುರಾಗುವ ಸಾಧ್ಯತೆಯಿರುತ್ತದೆ. ಸ್ವ ಉದ್ಯೋಗಿ ಸಂಘಗಳ ಬಗ್ಗೆ ಹೆಚ್ಚಿನ ಮಾಹಿತಿ ಇರದಿರುವುದರಿಂದ ಅನೇಕ ತರಬೇತಿ, ಉದ್ಯೋಗಕ್ಕೆ ಸಂಬಂಧಿಸಿದ ವಿಚಾರಗೋಷ್ಠಿಗಳ ಸದುಪಯೋಗ ಮಾಡಲು ಅಸಾಧ್ಯವಾಗುತ್ತದೆ. ಸ್ವ ಉದ್ಯೋಗಿಗಳಿಗೆ ಸ್ಥಳೀಯ ಮಟ್ಟದ ಸ್ಪರ್ಧೆಯಿರುವುದರಿಂದ ಆದಾಯ ಕಡಿಮೆಯಾಗಿ ಕುಟುಂಬ ನಿರ್ವಹಣೆಗೆ ಸಮಸ್ಯೆಯಾಗುತ್ತದೆ.

೪.೨ ಸಾಮಾಜಿಕ-ಆರ್ಥಿಕ ಸಮಸ್ಯೆಗಳು ಮತ್ತು ಸವಾಲುಗಳ ವಿಶ್ಲೇಷಣೆ

ಪ್ರಸ್ತುತ ಅಧ್ಯಯನವು ಸ್ವ ಉದ್ಯೋಗಿ ಮಹಿಳೆಯರು ಯಾವ ರೀತಿಯ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ ಎಂಬುವುದನ್ನು ತಿಳಿಯುವ ಉದ್ದೇಶವನ್ನು ಹೊಂದಿದೆ. ಸ್ವ ಉದ್ಯೋಗಿ ಮಹಿಳೆಯರಿಗೆ ಸ್ವ ಉದ್ಯೋಗಕ್ಕೆ


ಸಂಬಂಧಿಸಿದಂತೆ ಇರುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ಬಗ್ಗೆ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಜಾತಿ, ಉದ್ಯೋಗ ಮಾಡಲು ಸಹಕಾರ ನೀಡದಿರುವಿಕೆ, ಮನೆಯ ತೀರ್ಮಾನಗಳಲ್ಲಿ ಮಹಿಳೆಯರನ್ನು ಭಾಗವಹಿಸದೇ ಇರುವಂತೆ ಮಾಡುವುದು, ಬೇರೆ ಉದ್ಯೋಗಿಯಾಗಿ ದುಡಿಯಲು ಬೆಂಬಲ ಕೊಡದೆ ಕೇವಲ ಸ್ವ ಉದ್ಯೋಗಿಯಾಗಿರಲು ಒತ್ತಾಯಗಳು, ಉದ್ಯೋಗ ನಡೆಸುವಲ್ಲಿ ಸಾರ್ವಜನಿಕರಿಂದ ವಿವಿಧ ಕಾರಣಕ್ಕೆ ನಡೆಯುವ ದೌರ್ಜನ್ಯಗಳು, ಗ್ರಾಹಕರಿಂದ ವಿವಿಧ ಕಿರುಕುಳಗಳು, ಉದ್ಯೋಗಕ್ಕಿರುವ ವಿವಿಧ ಸ್ಪರ್ಧೆಗಳು, ಜಾಹೀರಾತಿನ ಸಮಸ್ಯೆಗಳು, ಮಾರುಕಟ್ಟೆಯ ಸಮಸ್ಯೆಗಳು, ಉದ್ಯೋಗ ಮತ್ತು ಅವರ ಆರ್ಥಿಕ ಸುಧಾರಣೆಗಳಲ್ಲಿ ಆಗುವ ಸಮಸ್ಯೆಗಳು ಮುಂತಾದ ಅನೇಕ ಸಮಸ್ಯೆಗಳ ಬಗ್ಗೆ ವಿವರಿಸಲಾಗಿದೆ.

ಕೋಷ್ಟಕ ೪.೧ ಜಾತಿ ಮತ್ತು ಸ್ವ ಉದ್ಯೋಗ

ಜಾತಿ	ಅಡ್ಡ ಬಂದಿದೆ	ಅಡ್ಡ ಬಂದಿಲ್ಲ
ಹಿಂದೂ	–	೩೦(೬೦)
ಕ್ರಿಶ್ಚಿಯನ್	–	೧೮(೩೬)
ಮುಸ್ಲಿಂ	೦೨(೪)	–

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ನಕ್ಷೆ ೪.೧



ಕೋಷ್ಟಕ ೪.೧ ಸ್ವ ಉದ್ಯೋಗ ಮಾಡಲು ಅವರ ಜಾತಿ ಅವರಿಗೆ ಅಡ್ಡಿ ಬಂದಿದೆಯೋ ಇಲ್ಲವೋ ಎಂಬುವುದನ್ನು ವಿವರಿಸುತ್ತದೆ. ೫೦ ಪ್ರತಿಕ್ರಿಯೆದಾರರಲ್ಲಿ ೩೦ ಜನರು ಹಿಂದೂ ಜಾತಿಗೆ ಸೇರಿದ್ದು ಅವರ ಸ್ವ ಉದ್ಯೋಗಕ್ಕೆ ಜಾತಿಯು ಯಾವುದೇ ರೀತಿಯಲ್ಲಿ ಅಡ್ಡ ಬಂದಿಲ್ಲ. ಕ್ರಿಶ್ಚಿಯನ್ ಜಾತಿಗೆ ೧೮ ಜನರು ಸೇರಿದ್ದು ಅವರ ಸ್ವ ಉದ್ಯೋಗಕ್ಕೆ ಜಾತಿಯು ಯಾವುದೇ ರೀತಿಯಲ್ಲಿ ಅಡ್ಡ ಬಂದಿಲ್ಲ. ಮುಸ್ಲಿಂ ಜಾತಿಯವರು ೨ ಜನ ಇದ್ದು ಅವರಿಗೆ ಸ್ವ ಉದ್ಯೋಗಕ್ಕೆ ಅವರ ಜಾತಿ ಅಡ್ಡ ಬಂದಿದೆ ಯಾಕೆಂದರೆ ಅವರ ಜಾತಿಯಲ್ಲಿ ಬಹುತೇಕ ಮಹಿಳೆಯರಿಗೆ ಮನೆಯಿಂದ ಹೊರಗೆ ಹೋಗಿ ದುಡಿಯಲು ಅಡೆತಡೆಗಳಿದ್ದುದರಿಂದ ಬಾಡಿಗೆ ಕಟ್ಟಡದಲ್ಲಿ ಸ್ವ ಉದ್ಯೋಗ ಮಾಡಲು ಅವರಿಗೆ ಅಡ್ಡಿಯಾಗಿದೆ ಎಂಬುವುದು ಅವರ ಅಭಿಪ್ರಾಯವಾಗಿದೆ. ಮನೆಯಲ್ಲಿ ಸ್ಥಳಾವಕಾಶದ ಸಮಸ್ಯೆಗಳಿದ್ದಾಗ ಹೊರಗೆ ಹೋಗಿ ದುಡಿಯಲೇ ಬೇಕು. ಅನಿವಾರ್ಯ ಪರಿಸ್ಥಿತಿ ಅಲ್ಲದಿದ್ದರೂ ಏನಾನ್ನದರೂ ಸಾಧಿಸಬೇಕು ಎನ್ನುವ ಛಲವಿದ್ದಾಗ ಮುಸ್ಲಿಂ ಎಂಬ ಕಾರಣಕ್ಕೆ ಪ್ರೋತ್ಸಾಹ ಸಿಗದಿರುವುದು ಪ್ರತಿಕ್ರಿಯೆದಾರರ ಅಭಿಪ್ರಾಯವಾಗಿದೆ. ಸ್ವ ಉದ್ಯೋಗ ಮಾಡಲು ಅನೇಕ ರೀತಿಯ ವಿರೋಧಗಳಿದ್ದರೂ ಸ್ವ ಉದ್ಯೋಗ ಮಾಡುವ ಅನೇಕ ಮಹಿಳೆಯರಿದ್ದಾರೆ. ಸ್ವ ಉದ್ಯೋಗಕ್ಕೆ ಇರುವ ವಿರೋಧವು ಮಹಿಳಾ ಸಮಸ್ಯೆಯಾಗಿದೆ. ಈ ಸಮಸ್ಯೆಗಳ ಬಗ್ಗೆ ಮುಂದಿನ ಕೋಷ್ಟಕ ೪.೨ ತಿಳಿಸುತ್ತದೆ.

ಕೋಷ್ಟಕ ೪.೨ ಸ್ವ ಉದ್ಯೋಗಕ್ಕಿರುವ ಬೆಂಬಲ

ಉದ್ಯೋಗ	**ಬೆಂಬಲ**	
	ಇದೆ	**ಇಲ್ಲ**
ಟ್ಯೂಟೋರಿಯಲ್ಸ್	–	೧೦(೧೦೦)
ಟೈಲರಿಂಗ್	೬(೬೦)	೪(೪೦)
ಬ್ಯೂಟಿಪಾರ್ಲರ್	೬(೬೦)	೪(೪೦)
ಮಕ್ಕಳ ಪ್ಲೇ ಸೆಂಟರ್	–	೧೦(೧೦೦)
ಕಾರ್ಯಕ್ರಮ ನಿರ್ವಾಹಕರು	೬(೬೦)	೪(೪೦)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ


ಸ್ವ ಉದ್ಯೋಗ ನಡೆಸುವ ೫೦ ಪ್ರತಿಕ್ರಿಯೆದಾರರಲ್ಲಿ ಶೇಕಡಾ ೩೬ರಷ್ಟು ಜನರಿಗೆ ಅವರು ನಡೆಸಲಿಚ್ಚಿಸುವ ಸ್ವ ಉದ್ಯೋಗಕ್ಕೆ ವಿರೋಧದ ಸಮಸ್ಯೆ ಎದುರಾಗಿದೆ. ಶೇಕಡಾ ೬೪ರಷ್ಟು ಜನರಿಗೆ ಸ್ವ ಉದ್ಯೋಗಕ್ಕೆ ಯಾವುದೇ ರೀತಿಯ ವಿರೋಧ ಬಂದಿಲ್ಲ. ಸ್ವ ಉದ್ಯೋಗಕ್ಕೆ ವಿರೋಧ ಮಾಡಿದವರು ಮತ್ತು ಅದಕ್ಕಿರುವ ಕಾರಣಗಳನ್ನು ಮುಂದಿನ ಕೋಷ್ಟಕ ೪.೩ ತಿಳಿಸುತ್ತದೆ.

ಕೋಷ್ಟಕ ೪.೩ ಸ್ವ ಉದ್ಯೋಗಕ್ಕೆ ಸಂಬಂಧಿಸಿದಂತೆ ವಿರೋಧ ಮಾಡಿದವರು

ಉದ್ಯೋಗ	ವಿರೋಧ ಮಾಡಿದವರು				
	ಪೋಷಕರು	ಗಂಡ	ಸಂಬಂಧಿಕರು	ಮಕ್ಕಳು	ಇತರರು
ಟ್ಯೂಟೋರಿಯಲ್ಸ್	–	–	–	–	–
ಟೈಲರಿಂಗ್	೦೪(೬೬.೬)	೦೨(೩೩.೩)	–	–	–
ಬ್ಯೂಟಿಪಾರ್ಲರ್	–	–	೦೪(೬೬.೬)	–	೦೨(೩೩.೩)
ಮಕ್ಕಳ ಪ್ಲೇ ಸೆಂಟರ್	–	–	–	–	–
ಕಾರ್ಯಕ್ರಮ ನಿರ್ವಾಹಕರು	೦೨(೩೩.೩)	೦೨(೩೩.೩)	೦೨(೩೩.೪)	–	–

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ನಕ್ಷೆ ೪.೨



ಮಹಿಳಾ ಸ್ವ ಉದ್ಯೋಗಿಗಳು ಅವರ ಸ್ವ ಉದ್ಯೋಗವನ್ನು ಕೈಗೆತ್ತಿಕೊಂಡ ನಂತರ ವಿರೋಧ ವ್ಯಕ್ತವಾಗಿರುವುದು ಹೆಚ್ಚಾಗಿ ಕಂಡು ಬಂದಿದೆ. ೫೦ ಪ್ರತಿಕ್ರಿಯೆದಾರರಲ್ಲಿ ಟ್ಯೂಟೋರಿಯಲ್ಸ್ ಮತ್ತು ಕಾರ್ಯಕ್ರಮ ನಿರ್ವಾಹಕರಿಗೆ ಅವರು ಸ್ವ ಉದ್ಯೋಗ ಮಾಡುವುದನ್ನು ಯಾರು ವಿರೋಧ ಮಾಡಿರುವುದಿಲ್ಲ. ಆದರೆ ಟೈಲರಿಂಗ್ ನಡೆಸುವ ಶೇಕಡಾ ೩೩.೩ರಷ್ಟು ಜನರಿಗೆ ಅವರ ಪೋಷಕರು ಮತ್ತು ಗಂಡ ಸ್ವ ಉದ್ಯೋಗವನ್ನು ಮಾಡುವುದಕ್ಕೆ ವಿರೋಧ ವ್ಯಕ್ತ ಪಡಿಸಿದ್ದಾರೆ ಇದಕ್ಕೆ ಮುಖ್ಯವಾದ ಕಾರಣವೇನೆಂದರೆ ಟೈಲರಿಂಗ್ ಉದ್ಯೋಗಕ್ಕೆ ಆರೋಗ್ಯವು ಮುಖ್ಯವಾಗಿರುವುದರಿಂದ ಇಲ್ಲಿ ಕೈ–ಕಾಲುಗಳು ಮತ್ತು ಕಣ್ಣಿಗೆ ಹೆಚ್ಚಾಗಿ ಒತ್ತಡ ಬೀಳುವುದರಿಂದ ಸ್ವ ಉದ್ಯೋಗ ಮಾಡಬಾರದು ಎಂಬುವುದು ಪೋಷಕರ ವಿರೋಧವಾದರೆ, ತಾನು ದುಡಿಯುತ್ತಿದ್ದು ತನ್ನ ಪತ್ನಿಯ ದುಡಿಮೆ ಅನಿವಾರ್ಯವಲ್ಲ ಎಂದು ಕೆಲವು ಪುರುಷರು ವಿರೋಧ ವ್ಯಕ್ತಪಡಿಸಿದ್ದಾರೆ. ಬ್ಯೂಟಿಪಾರ್ಲರ್ ನಡೆಸುವವರಲ್ಲಿ ಶೇಕಡಾ ೩೩.೩ರಷ್ಟು ಜನರು ಅವರ ಉದ್ಯೋಗಕ್ಕೆ ಸಂಬಂಧಿಸಿದಂತೆ ಸಂಬಂಧಿಕರು ಹಾಗೂ ಇನ್ನಿತರರಿಂದ ವಿರೋಧವನ್ನು ಅನುಭವಿಸುತ್ತಿದ್ದಾರೆ. ಇದಕ್ಕೆ ಕಾರಣಗಳು ಪ್ರಾಥಮಿಕ ಶಿಕ್ಷಣ ಪಡೆದವರು ಸ್ವ ಉದ್ಯೋಗ ಮಾಡುತ್ತಿರುವುದು ಕಂಡು ಬಂದಿದ್ದು ಅವರ ಕುಟುಂಬದಲ್ಲಿ ಹೆಚ್ಚಿನ ಸ್ವ ಉದ್ಯೋಗ ಮಾಡುವವರು ಉನ್ನತ ಶಿಕ್ಷಣ ಪಡೆದಿರುತ್ತಾರೆ. ಆದುದರಿಂದ ಉನ್ನತ ಶಿಕ್ಷಣ ಪಡೆದವರು ಪ್ರಾಥಮಿಕ ಶಿಕ್ಷಣ ಪಡೆದವರ ಸ್ವ ಉದ್ಯೋಗಕ್ಕೆ ನಿರುತ್ಸಾಹವನ್ನು ತುಂಬಿ ವಿರೋಧ ವ್ಯಕ್ತಪಡಿಸಿದ್ದಾರೆ. ಪುರುಷರಲ್ಲಿ ಕಾರ್ಯಕ್ರಮ ನಿರ್ವಹಣೆ ಮಾಡುವವರು ಅಧಿಕ ಸಂಖ್ಯೆಯಲ್ಲಿದ್ದು ಮಹಿಳಾ ಕಾರ್ಯಕ್ರಮ ನಿರ್ವಹಣೆ ಮಾಡುವವರು ಕಡಿಮೆ ಇದ್ದಾರೆ. ಕಾರ್ಯಕ್ರಮ ನಿರ್ವಾಹಕರಲ್ಲಿ ಕೆಲವರಿಗೆ ಪೋಷಕರು, ಅವರ ಗಂಡ, ಮತ್ತು ಸಂಬಂಧಿಕರು ಬೆಂಬಲ ಕೊಡುತ್ತಿಲ್ಲ. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ ಕಾರ್ಯಕ್ರಮ ನಿರ್ವಹಣೆ ದುಡಿಮೆಯು ಸಂದರ್ಭನುಸಾರವಾಗಿರುವುದರಿಂದ ಆದಾಯ ಇಂತಿಷ್ಟೇ ಎಂದು ಹೇಳಲು ಕಷ್ಟಕರ. ಕಾರ್ಯಕ್ರಮ ನಿರ್ವಹಣೆಯು ಪ್ರತಿಷ್ಠಿತ ಕೆಲಸವಲ್ಲ ಎಂಬುವುದು ಕೆಲವರ ಅಭಿಪ್ರಾಯವಾಗಿದೆ. ಕಾರ್ಯಕ್ರಮ ನಿರ್ವಹಣೆಯ ಜೊತೆಗೆ ಬೇರೆ ಉದ್ಯೋಗ ನಡೆಸದಿದ್ದರೆ ಆರ್ಥಿಕ ಸಮಸ್ಯೆ ಎದುರಾಗಬಹುದು ಎಂಬ ಕಾರಣಕ್ಕೆ ಸ್ವ ಉದ್ಯೋಗ ಮಾಡುವ ಕೆಲವು ಮಹಿಳೆಯರು ಬೇರೆ ಉದ್ಯೋಗದಲ್ಲಿ ತಮ್ಮನ್ನು ತಾವು ತೊಡಗಿಸಿ ಸಮಯ ಸಿಕ್ಕಾಗ ಅಂದರೆ ರಜಾದಿನಗಳಲ್ಲಿ ಕಾರ್ಯಕ್ರಮ ನಿರ್ವಹಣೆ ಮಾಡುತ್ತಾರೆ. ಇಂತಹ ಸಂದರ್ಭದಲ್ಲಿ ಕೆಲವು ಸ್ವ ಉದ್ಯೋಗಿಗಳ ಮನೆಯವರು ತಮ್ಮ ಕುಟುಂಬಕ್ಕೆ ಅವರು ಸರಿಯಾಗಿ ಸಮಯ ಕೊಡುತ್ತಿಲ್ಲ ಎಂದು ವಿರೋಧ ವ್ಯಕ್ತಪಡಿಸಿದ್ದಾರೆ.

ಕೋಷ್ಟಕ ೪.೪ ಉದ್ಯೋಗ ಸ್ಥಳದಲ್ಲಿ ಸಾರ್ವಜನಿಕ ದೌರ್ಜನ್ಯ

ಉದ್ಯೋಗ	ಸಾರ್ವಜನಿಕ ದೌರ್ಜನ್ಯ			
	ಕೆಲವೊಂದು ಸಲ	ಯಾವಾಗಲೂ	ಹೆಚ್ಚಾಗಿ	ಇಲ್ಲ
ಟ್ಯೂಟೋರಿಯಲ್ಸ್	–	–	–	೧೦(೧೦೦)
ಟೈಲರಿಂಗ್	–	–	–	೧೦(೧೦೦)
ಬ್ಯೂಟಿಪಾರ್ಲರ್	೦೪(೪೦)	–	–	೦೬(೬೦)
ಮಕ್ಕಳ ಪ್ಲೇ ಸೆಂಟರ್	–	–	–	೧೦(೧೦೦)
ಕಾರ್ಯಕ್ರಮ ನಿರ್ವಾಹಕರು	–	–	–	೧೦(೧೦೦)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ಶೇ ೮ ರಷ್ಟು ಸ್ವ ಉದ್ಯೋಗಿಗಳು ಮಾತ್ರ ಸಾರ್ವಜನಿಕ ದೌರ್ಜನ್ಯವನ್ನು ಅನುಭವಿಸುತ್ತಿದ್ದಾರೆ. ಸಾರ್ವಜನಿಕರಿಂದ ದೌರ್ಜನ್ಯ ಹೆಚ್ಚಾಗಿ ಆಗದಿರಲು ಮುಖ್ಯ ಕಾರಣವೇನೆಂದರೆ ಮಹಿಳೆಯರು ಹೆಚ್ಚಾಗಿ ಯಾವುದೇ ರೀತಿಯ ಗಲಾಟೆಗಳನ್ನು ಮಾಡಲು ಹೋಗುವುದಿಲ್ಲ. ಸಣ್ಣ ಪುಟ್ಟ ಚರ್ಚೆಗಳು ನಡೆದರೂ ಅದನ್ನು ಸುಧಾರಿಸಿಕೊಂಡು ಹೋಗಿದ್ದಾರೆ ಎಂಬುವುದು ಪ್ರತಿಕ್ರಿಯೆದಾರರ ಅಭಿಪ್ರಾಯವಾಗಿದೆ.

ಕೋಷ್ಟಕ ೪.೫ ಸೇವೆಯ ಬಗ್ಗೆ ಗ್ರಾಹಕರ ಪ್ರತಿಕ್ರಿಯೆ

ಉದ್ಯೋಗ	ಗ್ರಾಹಕರ ಪ್ರತಿಕ್ರಿಯೆ			
	ಕಿರುಕುಳ	ಸಂಪೂರ್ಣ ಸಹಕಾರ	ಸಾರ್ವಜನಿಕ ಸಂಪರ್ಕ	ಕೃತಜ್ಞತಾ ಭಾವನೆ
ಟ್ಯೂಟೋರಿಯಲ್ಸ್	–	೦೨(೨೦)	೦೨(೨೦)	೦೬(೬೦)
ಟೈಲರಿಂಗ್	–	೦೨(೨೦)	೦೨(೨೦)	೦೬(೬೦)
ಬ್ಯೂಟಿಪಾರ್ಲರ್	೦೨(೨೦)	–	೦೮(೮೦)	–
ಮಕ್ಕಳ ಪ್ಲೇ ಸೆಂಟರ್	–	೦೬(೬೦)	೦೨(೨೦)	೦೨(೨೦)
ಕಾರ್ಯಕ್ರಮ ನಿರ್ವಾಹಕರು			೦೬(೬೦)	೦೪(೪೦)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ಶೇಕಡಾ ೯೬ ರಷ್ಟು ಜನರಿಗೆ ತಾವು ಸಲ್ಲಿಸುವ ಸೇವೆಗೆ ಅವರ ಗ್ರಾಹಕರಿಂದ ಯಾವುದೇ ರೀತಿಯ ತೊಂದರೆ ಎದುರಾಗಿಲ್ಲ. ಸ್ವ ಉದ್ಯೋಗಿಗಳು ಸಲ್ಲಿಸುವ ಸೇವೆಯು ಗ್ರಾಹಕರಿಗೆ ತೃಪ್ತಿ ನೀಡಿದ್ದು ಅವರು ಸಂಪೂರ್ಣ ಸಹಕಾರವನ್ನು ನೀಡುತ್ತಿದ್ದಾರೆ. ಸೇವೆಯು ಉತ್ತಮವಾಗಿರುವುದರಿಂದ ಜನರು ಸಾರ್ವಜನಿಕ ಸಂಪರ್ಕಕ್ಕೆ ಸಹಾಯ ಮಾಡುವುದು ಕಂಡು ಬಂದಿದೆ. ಸೇವೆ ಪಡೆದ ನಂತರ ಜನರಿಗೆ ಸ್ವ ಉದ್ಯೋಗಿಗಳ ಮೇಲೆ ಕೃತಜ್ಞತಾ ಭಾವನೆಯಿದೆ. ಶೇಕಡಾ ೨ ರಷ್ಟು ಬ್ಯೂಟಿಪಾರ್ಲರ್ ನಡೆಸುವ ಸ್ವ ಉದ್ಯೋಗಿಗಳಿಗೆ ಗ್ರಾಹಕರಿಂದ ಕಿರುಕುಳ ಆಗಿದೆ. ಕೆಲವು ಗ್ರಾಹಕರು ಸ್ವ ಉದ್ಯೋಗಿಗಳಿಂದ ಸೇವೆ ಪಡೆದ ನಂತರ ಮಾಡಿದ ಸೇವೆಯು ಅವರಿಗೆ ತೃಪ್ತಿ ನೀಡಿಲ್ಲವೆಂಬ ಕಾರಣಗಳನ್ನು ನೀಡಿ ಹಣ ಪಾವತಿಸಲು ನಿರಾಕರಿಸಿದ್ದಾರೆ.

ಕೋಷ್ಟಕ ೪.೬ ಉದ್ಯೋಗಕ್ಕಿರುವ ಸ್ಪರ್ಧೆ

ಉದ್ಯೋಗ	ಸ್ಪರ್ಧೆ			
	ಸ್ಥಳೀಯ	ರಾಷ್ಟ್ರ	ಅಂತರಾಷ್ಟ್ರೀಯ	ಇತರ
ಟ್ಯೂಟೋರಿಯಲ್ಸ್	೬(೬೦)	–	–	೪(೪೦)
ಟೈಲರಿಂಗ್	೬(೬೦)	–	–	೪(೪೦)
ಬ್ಯೂಟಿಪಾರ್ಲರ್	೧೦(೧೦೦)	–	–	–
ಮಕ್ಕಳ ಪ್ಲೇ ಸೆಂಟರ್	೧೦(೧೦೦)	–	–	–
ಕಾರ್ಯಕ್ರಮ ನಿರ್ವಾಹಕರು	೧೦(೧೦೦)	–	–	–

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ಉದ್ಯೋಗ ರಂಗದಲ್ಲಿ ನಾನಾ ಪ್ರಕಾರದ ಸ್ಪರ್ಧೆಗಳಿವೆ. ನನ್ನ ಕಾರ್ಯಕ್ಷೇತ್ರದಲ್ಲಿ ಎಲ್ಲಾ ಪ್ರತಿಕ್ರಿಯೆದಾರರಿಗೆ ಸ್ಥಳೀಯ ಮಟ್ಟದ ಸ್ಪರ್ಧೆಯಿರುವುದು ಕಂಡು ಬಂದಿದೆ. ಪ್ರತಿಕ್ರಿಯೆದಾರರ ಪ್ರಕಾರ ಸ್ಥಳೀಯ ಸ್ಪರ್ಧೆಯೆಂದರೆ ಅದೇ ತರಹದ ಉದ್ಯೋಗ ಮಾಡುತ್ತಿರುವಂತಹ ಇತರ ಉದ್ಯೋಗಿಗಳಿಂದ ಅವರ ಉದ್ಯೋಗಕ್ಕೆ ಸ್ಪರ್ಧೆ ಇದೆ. ಹೊಸತಾಗಿ ಸ್ವ ಉದ್ಯೋಗ ಪ್ರಾರಂಭಿಸುವವರಿಗೆ ಇದು ಸಮಸ್ಯೆಯಾಗಬಹುದು. ಶೇಕಡಾ ೧೬ ರಷ್ಟು ಸ್ವ ಉದ್ಯೋಗಿಗಳು ಇತರ ಉದ್ಯೋಗಿಗಳ ಬಗ್ಗೆ ಯೋಚಿಸದೆ ಕೆಲಸ ಮಾಡುವುದರಿಂದ ಅವರಿಗೆ ಯಾವುದೇ ಸ್ಪರ್ಧೆಯಿದೆಯೆಂದು ಅನಿಸುವುದಿಲ್ಲ.

ಕೋಷ್ಟಕ ೪.೭ ಮಾರುಕಟ್ಟೆಯ ಸಮಸ್ಯೆ

ಉದ್ಯೋಗ	**ಸಮಸ್ಯೆ**	
	ಇದೆ	**ಇಲ್ಲ**
ಟ್ಯೂಟೋರಿಯಲ್ಸ್	–	೧೦(೧೦೦)
ಟೈಲರಿಂಗ್	೮(೮೦)	೨(೨೦)
ಬ್ಯೂಟಿಪಾರ್ಲರ್	೨(೨೦)	೮(೮೦)
ಮಕ್ಕಳ ಪ್ಲೇ ಸೆಂಟರ್	೪(೪೦)	೬(೬೦)
ಕಾರ್ಯಕ್ರಮ ನಿರ್ವಾಹಕರು	–	೧೦(೧೦೦)

ಸೂಚನೆ: ಆವರಣದಲ್ಲಿರುವುದು ಶೇಕಡಾವಾರು ಪ್ರಮಾಣ

ಉದ್ಯೋಗ ಮತ್ತು ಮಾರುಕಟ್ಟೆಗೆ ನೇರವಾದ ಸಂಬಂಧವಿದೆ. ಮಾರುಕಟ್ಟೆಗೆ ಸಂಬಂಧಿಸಿದಂತೆ ಸಮಸ್ಯೆಗಳೆಂದರೆ ಕಚ್ಚಾ ವಸ್ತುಗಳ ದೊರಕುವಿಕೆ ಸಮಸ್ಯೆ, ಮುಂತಾದ ಅನೇಕ ಸಮಸ್ಯೆಗಳಿವೆ. ಗ್ರಾಮೀಣ ಪ್ರದೇಶಗಳಲ್ಲಿ ಮಾರುಕಟ್ಟೆಯ ಸಮಸ್ಯೆ ಹೆಚ್ಚಾಗಿರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಸಿಗದ ಅದೆಷ್ಟೋ ವಸ್ತುಗಳನ್ನು ಕೊಂಡುಕೊಳ್ಳಲು ಜನರು ನಗರಕ್ಕೆ ಹೋಗುತ್ತಿದ್ದಾರೆ. ನನ್ನ ಅಧ್ಯಯನದಲ್ಲಿ ಶೇಕಡಾ ೭೨ ರಷ್ಟು ಪ್ರತಿಕ್ರಿಯೆದಾರರಿಗೆ ಮಾರುಕಟ್ಟೆಯ ಸಮಸ್ಯೆ ಇರುವುದಿಲ್ಲ. ಉಳಿದ ಪ್ರತಿಕ್ರಿಯೆದಾರರಿಗೆ ಉದ್ಯೋಗಕ್ಕೆ ಬೇಕಾದ ಕಚ್ಚಾ ವಸ್ತುಗಳಿಗಾಗಿ ಇನ್ನೊಂದು ಪ್ರದೇಶಕ್ಕೆ ಹೋಗುವ ಪರಿಸ್ಥಿತಿಯಿದೆ. ಇದರಿಂದ ಅವರಿಗೆ ಆಗುವ ಖರ್ಚು ಜಾಸ್ತಿಯಾಗುತ್ತಿದೆ. ಈ ಕಾರಣದಿಂದಾಗಿ ಗ್ರಾಹಕರಿಂದ ಹೆಚ್ಚು ಹಣವನ್ನು ಪಡೆದುಕೊಂಡಲ್ಲಿ ಗ್ರಾಹಕರ ಸಂಖ್ಯೆ ಕಡಿಮೆ ಆಗುವ ಸಾಧ್ಯತೆ ಇರುವುದು ಪ್ರತಿಕ್ರಿಯೆದಾರರ ಅಭಿಪ್ರಾಯವಾಗಿದೆ.

೪.೪ ಉಪಸಂಹಾರ

ಸ್ವ ಉದ್ಯೋಗಿಗಳ ಸಮಸ್ಯೆಗಳನ್ನು ತಿಳಿಯುವ ಉದ್ದೇಶದಿಂದ ಈ ಅಧ್ಯಯನವನ್ನು ನಡೆಸಲಾಗಿದೆ. ಯಾವುದೇ ಸಮಸ್ಯೆಗೂ ಸಹ ಪರಿಹಾರ ಇದ್ದೇ ಇರುತ್ತದೆ. ಮಹಿಳಾ ಸ್ವ ಉದ್ಯೋಗಿಗಳ ಸಮಸ್ಯೆಗಳು ಮೇಲ್ನೋಟಕ್ಕೆ ಕಾಣಲು ಸಿಗದಿದ್ದರೂ ಮಹಿಳೆಯರು ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಹಿಳಾ ಸಮಸ್ಯೆಗಳಿಗೆ ಪರಿಹಾರ ನೀಡುವ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಗತ್ಯವಾಗಿದೆ.

ಅಧ್ಯಾಯ –೫

ಅಧ್ಯಯನದ ಫಲಿತಗಳು ಮತ್ತು ಸಲಹೆ ಸೂಚನೆಗಳು

೫.೧ ಸಾರಾಂಶ

ಮಹಿಳೆಯ ದುಡಿಮೆಯಲ್ಲಿ ಅವಳ ಸ್ವಂತ ಆಸಕ್ತಿ ಮತ್ತು ಶೈಕ್ಷಣಿಕ ಅರ್ಹತೆಯು ಪ್ರಮುಖ ಪಾತ್ರವಹಿಸುತ್ತವೆ. ಮಹಿಳೆಯರಿಗೂ ತಾನು ದುಡಿಯಬೇಕು ಎಂಬ ಆಸೆ ಇದ್ದೇ ಇರುತ್ತದೆ. ಹಣಕಾಸಿನ ಅಗತ್ಯ ಬಂದಾಗ ಇನ್ನೊಬ್ಬರನ್ನು ಅವಲಂಬಿಸುವುದು ಮಹಿಳೆಯರಿಗೆ ಬೇಡವೆನಿಸಿದೆ. ಆದುದರಿಂದ ಮಹಿಳೆಯರು ಸ್ವಾವಲಂಬಿಯಾಗುವ ಉದ್ದೇಶದಿಂದ ಉದ್ಯೋಗದಾತನ ಕೈಕೆಳಗೂ ದುಡಿಯದೆ ಮಹಿಳೆಯರು ಸ್ವ ಉದ್ಯೋಗವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಮಹಿಳೆಯರಿಗೆ ಉದ್ಯೋಗಕ್ಕೆ ಬೇಕಾದ ತರಬೇತಿಯನ್ನು ನೀಡಿ ಪ್ರೋತ್ಸಾಹ ನೀಡಲಾಗುತ್ತಿದೆ. ಇದರ ಸದುಪಯೋಗ ಮಾಡಿಕೊಂಡವರು ಹಲವರು. ಆದರೂ ಹೆಚ್ಚಿನ ಮಹಿಳೆಯರು ಅವರ ಉದ್ಯೋಗಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಕ್ಷೇತ್ರಕಾರ್ಯದಲ್ಲಿ ಪ್ರಾಥಮಿಕ ಮೂಲಗಳಿಂದ ದೊರೆತ ಮಾಹಿತಿಗಳು, ಬೇರೆ ಬೇರೆ ಪ್ರತಿಕೆಗಳಿಂದ, ನಿಯತಕಾಲಿಕೆಗಳಿಂದ, ಅಂತರ್ಜಾಲ ತಾಣಗಳಿಂದ ಹಾಗೂ ಗ್ರಂಥಗಳಿಂದ ದೊರೆತ ವಿಷಯಗಳನ್ನು ಕ್ರೋಡೀಕರಿಸಿ, ಮಂಗಳೂರು ತಾಲೂಕಿನಲ್ಲಿರುವ ಮಹಿಳಾ ಸ್ವ ಉದ್ಯೋಗಿಗಳ ಸಮಸ್ಯೆಗಳು ಮತ್ತು ಸವಾಲುಗಳನ್ನು ಅಧ್ಯಯನ ಮಾಡಿ ಕೆಲವು ನಿರ್ಧಾರಗಳಿಗೆ ಬರಲಾಗಿದೆ ಹಾಗೂ ಸಲಹೆ ಸೂಚನೆಗಳನ್ನು ಕೊಡಲಾಗಿದೆ.

೫.೨ ಅಧ್ಯಯನದ ಫಲಿತಗಳು:

ಮಹಿಳಾ ಸ್ವ ಉದ್ಯೋಗಿಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕು ವ್ಯಾಪ್ತಿಯಲ್ಲಿ ಕೈಗೊಂಡ ಅಧ್ಯಯನದಲ್ಲಿ ಒಟ್ಟು ೫೦ ಜನರನ್ನು ಸಂದರ್ಶಿಸಿ ಅಧ್ಯಯನದ ಉದ್ದೇಶಗಳಿಗನುಗುಣವಾಗಿ ವಿಶ್ಲೇಷಣೆ ಮಾಡಲಾಯಿತು. ಅಧ್ಯಯನದಲ್ಲಿ ಕಂಡು ಬಂದ ಅಂಶಗಳು ಈ ಕೆಳಗಿನಂತಿವೆ.

೧. ಸ್ವ ಉದ್ಯೋಗ ಆಯ್ಕೆ ಮಾಡಲು ಮಹಿಳೆಯರು ಹಿಂಜರಿಯಲು ಪ್ರಮುಖ ಕಾರಣಗಳೆಂದರೆ ಉದ್ಯೋಗ ಪ್ರಾರಂಭಿಸಲು ಧೈರ್ಯ ಇಲ್ಲದಿರುವಿಕೆ, ಬಂಡವಾಳ ಹೂಡಲು ಹಣದ ಸಮಸ್ಯೆ, ಕಚ್ಚಾ ವಸ್ತುಗಳ ದೊರಕುವಿಕೆಯ ಬಗ್ಗೆ ಅರಿವು ಇಲ್ಲದಿರುವಿಕೆ, ಸಾಲ ತೆಗೆದುಕೊಳ್ಳುವ ಸಾಮಾರ್ಥ್ಯ ಇಲ್ಲದಿರುವಿಕೆ, ಕೌಟುಂಬಿಕ ಕಟ್ಟುಪಾಡುಗಳು ಎಂಬುವುದು ಈ ಅಧ್ಯಯನದಲ್ಲಿ ಕಂಡು ಬಂದಿದೆ.

೨. ಶೇಕಡಾ ೭೨ರಷ್ಟು ಜನರು ಕೇವಲ ಸ್ವ ಉದ್ಯೋಗವನ್ನು ಮಾಡಿಕೊಂಡಿದ್ದು ಬೇರೆ ಯಾವುದೇ ಉದ್ಯೋಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದಿಲ್ಲ. ಕಾರ್ಯಕ್ರಮ ನಿರ್ವಹಣೆ ಮಾಡುವವರು ಸಂದರ್ಭಕ್ಕನುಸಾರ ಕೆಲಸ ಮಾಡುತ್ತಿರುವುದರಿಂದ ಬೇರೆ ಉದ್ಯೋಗದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

೩. ಹೆಚ್ಚಿನ ಸ್ವ ಉದ್ಯೋಗಿಗಳು ಕುಟುಂಬದ ಜವಬ್ದಾರಿಯನ್ನು ತಾವು ಮಾತ್ರ ನಿರ್ವಹಿಸುತ್ತಿಲ್ಲ. ಕುಟುಂಬದ ನಿರ್ವಹಣೆಯನ್ನು ಕುಟುಂಬದ ಇತರ ಸದಸ್ಯರು ಸೇರಿ ನಿರ್ವಹಿಸುತ್ತಿದ್ದಾರೆ.

೪. ಹೆಚ್ಚಿನ ಸ್ವ ಉದ್ಯೋಗಿಗಳಿಗೆ ಉದ್ಯೋಗಕ್ಕೆ ಪ್ರೋತ್ಸಾಹ ದೊರೆತರೂ ಅವರ ಪೋಷಕರು ಮತ್ತು ಗಂಡ ವಿರೋಧ ವ್ಯಕ್ತಪಡಿಸಿದ್ದಾರೆ.

೫. ಶೇ.೯೮ ರಷ್ಟು ಸ್ವ ಉದ್ಯೋಗಿಗಳ ಬಳಿ ಮನೆಯ ಸದಸ್ಯರು ಮನೆಯಲ್ಲಿ ತೆಗೆದುಕೊಳ್ಳುವ ಮಹತ್ವದ ತೀರ್ಮಾನಗಳಿಗೆ ಹೆಚ್ಚಿನ ಸಂದರ್ಭಗಳಲ್ಲಿ ಸಲಹೆಗಳನ್ನು ಕೇಳುತ್ತಾರೆ.

೬. ಹೆಚ್ಚಿನ ಸ್ವ ಉದ್ಯೋಗಿಗಳಿಗೆ ಅವರು ಉದ್ಯೋಗ ನಡೆಸುವ ಸ್ಥಳದಲ್ಲಿ ಯಾವುದೇ ರೀತಿಯ ಸಾರ್ವಜನಿಕ ದೌರ್ಜನ್ಯವಾಗುತ್ತಿಲ್ಲ ಆದರೆ ಕೆಲವೊಂದು ಸಂದರ್ಭಗಳಲ್ಲಿ ಸಣ್ಣ ಪುಟ್ಟ ವಿಷಯಗಳಿಗೆ ಪಕ್ಕದ ಅಂಗಡಿಗಳಿಂದ ಉದ್ಯೋಗಕ್ಕೆ ಅಡ್ಡಿಗಳು ಎದುರಾಗಿವೆ.

೭. ಶೇಕಡಾ ೩೨ರಷ್ಟು ಜನರು ಮಹಿಳಾ ಸಂಘ-ಸಂಸ್ಥೆಗಳಲ್ಲಿದ್ದು ಅವರಲ್ಲಿ ಉಪಾಧ್ಯಕ್ಷೆ ಮತ್ತು ಸದಸ್ಯತ್ವದ ಹುದ್ದೆಗಳನ್ನು ಹೊಂದಿದವರಾಗಿದ್ದಾರೆ.

೮. ಸ್ವ ಉದ್ಯೋಗಿಗಳ ಶಿಕ್ಷಣಕ್ಕೂ ಅವರ ಉದ್ಯೋಗಕ್ಕೂ ನೇರ ಸಂಬಂಧವಿಲ್ಲದಿರುವುದು ಪ್ರತಿಕ್ರಿಯೆದಾರರು ವ್ಯಕ್ತಪಡಿಸಿದ್ದಾರೆ. ಸ್ವ ಉದ್ಯೋಗ ನಡೆಸಲು ಇಂತಹುದೇ ಶಿಕ್ಷಣ ಅಗತ್ಯವಿಲ್ಲ. ತರಬೇತಿ ಪಡೆಯುವ ಮೂಲಕ ಸ್ವ ಉದ್ಯೋಗವನ್ನು ಮಾಡಬಹುದಾಗಿದೆ.

೯. ಶೇಕಡಾ ೮೦ರಷ್ಟು ಜನರು ಸ್ವ ಉದ್ಯೋಗಕ್ಕೆ ಬೇಕಾಗುವಷ್ಟು ಸ್ಥಳಾವಕಾಶ ಹೊಂದಿದ್ದಾರೆ. ಟ್ಯೂಟೋರಿಯಲ್ಸ್ ನಡೆಸುವವರಿಗೆ ಮಕ್ಕಳ ಸಂಖ್ಯೆ ಹೆಚ್ಚಿದಂತೆ ಹಾಗೂ ಬ್ಯೂಟಿಪಾರ್ಲರ್ ಸ್ವ ಉದ್ಯೋಗಿಗಳಿಗೆ ಗ್ರಾಹಕರು ಒಂದೇ ಸಮಯಕ್ಕೆ ಒಟ್ಟಿಗೆ ಬಂದಾಗ ಸ್ಥಳಾವಕಾಶದ ಸಮಸ್ಯೆಯಾಗಿದೆ.

೧೦. ಕೆಲಸ ಮಾಡುವ ಸ್ಥಳದಲ್ಲಿ ಸ್ವ ಉದ್ಯೋಗಿಗಳಿಗೆ ಅವರ ಗ್ರಾಹಕರಿಂದ ಸಂಪೂರ್ಣ ಸಹಕಾರ ದೊರಕಿದೆ. ಹೆಚ್ಚಿನ ಸ್ವ ಉದ್ಯೋಗಿಗಳಿಗೆ ಸಾರ್ವಜನಿಕ ಸಂಪರ್ಕಕ್ಕೆ ಗ್ರಾಹಕರು ಸಹಾಯ ಮಾಡಿದ್ದು ಗ್ರಾಹಕರಿಗೆ ಸ್ವ ಉದ್ಯೋಗಿಗಳ ಮೇಲೆ ಕೃತಜ್ಞತಾ ಭಾವನೆಯಿದೆ. ಕೆಲವು ಗ್ರಾಹಕರು ಮಾತ್ರ ಸ್ವ ಉದ್ಯೋಗಿಗಳಿಂದ ಸೇವೆ ಪಡೆದ ನಂತರ ಮಾಡಿದ ಸೇವೆಯು ಅವರಿಗೆ ತೃಪ್ತಿ ನೀಡಿಲ್ಲವೆಂಬ ಕಾರಣಗಳನ್ನು ನೀಡಿ ಹಣ ಪಾವತಿಸಲು ನಿರಾಕರಿಸಿದ್ದಾರೆ.

೧೧. ಹೆಚ್ಚಿನ ಸ್ವ ಉದ್ಯೋಗಗಳಿಗೆ ತಾವು ಸೇವೆ ಸಲ್ಲಿಸುವ ಕ್ಷೇತ್ರದಲ್ಲಿ ಸಮಾಧಾನವಿದ್ದು ಶೇ. ೩೬ ಜನರಿಗೆ ಉನ್ನತ ಮಟ್ಟದಲ್ಲಿ ಹಾಗೂ ಸ್ವಲ್ಪ ಮಟ್ಟಿಗೆ ಸಮಾಧಾನ ನೀಡಿದೆ. ಇನ್ನು ಕೆಲವರಿಗೆ ಆರೋಗ್ಯ ಸರಿಯಾಗಿ ಇಲ್ಲದಿರುವುದರಿಂದ ತಾವು ಸಲ್ಲಿಸುವ ಕ್ಷೇತ್ರದಿಂದ ಯಾವುದೇ ರೀತಿಯ ಸಮಾಧಾನವಿರುವುದಿಲ್ಲ ಆದರೆ ಅನಿವಾರ್ಯತೆಯಿಂದ ಅವರು ದುಡಿಯುತ್ತಿರುವುದು ಕಂಡು ಬಂದಿದೆ.

೧೨. ಸ್ವ ಉದ್ಯೋಗಿಗಳು ಅವರ ಉದ್ಯೋಗಕ್ಕೆ ಸಂಬಂಧಿಸಿದಂತೆ ಸ್ಥಳೀಯ ಮಟ್ಟದ ಸ್ಪರ್ಧೆಯನ್ನು ಎದುರಿಸುತ್ತಿದ್ದಾರೆ. ಸ್ವ ಉದ್ಯೋಗಿಗಳು ಸೇವೆ ಸಲ್ಲಿಸುವ ಪ್ರದೇಶದಲ್ಲಿ ಅದೇ ತರಹದ ಸೇವೆ ಸಲ್ಲಿಸುವ ಇತರ ಉದ್ಯೋಗಿಗಳಿಂದ ಸ್ಪರ್ಧೆ ಇರುವುದು ಕಂಡು ಬಂದಿದೆ.

೧೩. ಶೇ.೮೮ ಜನರು ತಾವು ಸೇವೆ ಸಲ್ಲಿಸುವ ಸ್ವ ಉದ್ಯೋಗವನ್ನು ದೀರ್ಘಾವಧಿಗೆ ಮುಂದುವರೆಸಲು ಬಯಸುತ್ತಿದ್ದು ಇನ್ನು ಉಳಿದ ಸ್ವ ಉದ್ಯೋಗಿಗಳು ಕಡಿಮೆ ಲಾಭ, ಆರೋಗ್ಯದ ಸಮಸ್ಯೆ, ಬೇರೆ ಕೆಲಸದ ಕಡೆ ಆಸಕ್ತಿ ಇರುವಿಕೆಯಿಂದ ಪ್ರಸ್ತುತ ಉದ್ಯೋಗವನ್ನು ಮುಂದುವರೆಸಲು ಇಷ್ಟವಿಲ್ಲದಿರುವುದು ಕಂಡು ಬಂದಿದೆ.

೧೪. ಶೇ.೫೬ರಷ್ಟು ಜನರು ಸ್ವಂತ ಮನೆಯನ್ನು ಹೊಂದಿರುತ್ತಾರೆ ಮತ್ತು ಎಲ್ಲಾ ಸ್ವ ಉದ್ಯೋಗಿಗಳ ಮನೆಯಲ್ಲಿ ಶೌಚಾಲಯದ ಮತ್ತು ವಿದ್ಯುಚ್ಛಕ್ತಿ ಸಂಪರ್ಕ ಇರುವುದು ಕಂಡು ಬಂದಿದೆ.

೧೫. ಹೆಚ್ಚಿನ ಸ್ವ ಉದ್ಯೋಗಿಗಳು ತಾವು ನಡೆಸುವ ಕೆಲಸದಿಂದ ಶೇ.೨೫ ಕ್ಕಿಂತ ಕಡಿಮೆ ಲಾಭಾಂಶವನ್ನು ಪಡೆಯುತ್ತಿದ್ದು ಇನ್ನು ಕೆಲವರಿಗೆ ಆದಾಯ ಮತ್ತು ವೆಚ್ಚದ ಪ್ರಮಾಣ ತಿಳಿಯದಿರುವುದರಿಂದ ಲಾಭಾಂಶದ ಅಂದಾಜು ಸಿಗದಿರುವುದು ಕಂಡು ಬಂದಿದೆ.

೧೬. ಸಾರ್ವಜನಿಕ ಸಂಪರ್ಕ ಮತ್ತು ಗ್ರಾಹಕರ ಉತ್ತಮ ಸಹಕಾರ ಇರುವುದರಿಂದ ಹೆಚ್ಚಿನ ಜನರಿಗೆ ಜಾಹೀರಾತಿನ ಅಗತ್ಯವಿರುವುದಿಲ್ಲ.

೧೭. ಟೈಲರಿಂಗ್ ಮತ್ತು ಬ್ಯೂಟಿಪಾರ್ಲರ್‌ನಲ್ಲಿ ಸೇವೆ ಸಲ್ಲಿಸುವ ಕೆಲವು ಸ್ವ ಉದ್ಯೋಗಿಗಳಿಗೆ ಕಚ್ಚಾ ಸಾಮಾಗ್ರಿಗಳ ದೊರಕುವಿಕೆಯಲ್ಲಿ ವಿಳಂಬದ ಸಮಸ್ಯೆ ಎದುರಾಗಿದೆ.

೧೮. ಸ್ವ ಉದ್ಯೋಗಿಗಳಲ್ಲಿ ಕೆಲವರು ಕೃಷಿ ಮತ್ತು ಸರಕಾರದ ವಿವಿಧ ಯೋಜನೆಗಳಿಂದ ಆದಾಯವನ್ನು ಪಡೆಯುತ್ತಿರುವುದು ಕಂಡು ಬಂದಿದೆ.

೧೯. ಉದ್ಯೋಗ ನೋಂದಾವಣೆಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ಇರುವಿಕೆಯ ಬಗ್ಗೆ ಪ್ರತಿಕ್ರಿಯೆದಾರರು ವ್ಯಕ್ತಪಡಿಸಿದ್ದಾರೆ.

೫.೩ ಸಲಹೆ ಸೂಚನೆಗಳು

ಮಹಿಳಾ ಸ್ವ ಉದ್ಯೋಗಕ್ಕೆ ಸಂಬಂಧಿಸಿದಂತೆ ಮಂಗಳೂರು ತಾಲೂಕು ವ್ಯಾಪ್ತಿಯಲ್ಲಿ ನಡೆಸಿದ ಅಧ್ಯಯನದಲ್ಲಿ ಕಂಡುಬಂದ ಬೇರೆ ಬೇರೆ ಸಮಸ್ಯೆಗಳಿಗೆ ಕೆಲವು ಪರಿಹಾರ ಸೂತ್ರಗಳನ್ನು ಹುಡುಕುವ ಪ್ರಯತ್ನ ಮಾಡಲಾಗಿದೆ. ಸ್ವ ಉದ್ಯೋಗ ಸಂಬಂಧಿ ಮಾಹಿತಿಯು ಇನ್ನಷ್ಟು ಜನರಿಗೆ ಪ್ರೇರಣೆಯಾಗಬೇಕಾಗಿದೆ.

೧. ಜನರಿಗೆ ಸ್ವ ಉದ್ಯೋಗದ ಬಗ್ಗೆ ಮಾಹಿತಿ ಶಿಬಿರಗಳನ್ನು ಏರ್ಪಡಿಸಿ ಸ್ವ ಉದ್ಯೋಗದ ಪ್ರಾಮುಖ್ಯತೆಯನ್ನು ತಿಳಿಸಿ ಸ್ವ ಉದ್ಯೋಗಕ್ಕೆ ಪ್ರೋತ್ಸಾಹ ನೀಡಬೇಕು.

೨. ಸ್ವ ಉದ್ಯೋಗಕ್ಕೆ ಸಂಬಂಧಿಸಿದಂತೆ ಆರ್ಥಿಕ ಸಮಸ್ಯೆಯಿರುವವರಿಗೆ ವಿವಿಧ ಸಾಲ ಯೋಜನೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು.

೩. ಸ್ವ ಉದ್ಯೋಗಕ್ಕೆ ಸರಕಾರದಿಂದ ಸಿಗುವ ಸವಲತ್ತುಗಳ ಬಗ್ಗೆ ಜಾಗೃತಿ ಮೂಡಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

೪. ಸ್ವ ಉದ್ಯೋಗಿಗಳಿಗೆ ಸ್ವ ಉದ್ಯೋಗ ಸಂಘಗಳ ಬಗ್ಗೆ ಅರಿವು ಮೂಡಿಸಿ, ಸ್ವ ಉದ್ಯೋಗ ಸಂಘದ ಸದಸ್ಯರಾಗಲು ಪ್ರೋತ್ಸಾಹ ಮತ್ತು ಸಂಘದಿಂದ ದೊರಕುವ ಮಾಹಿತಿ ಮತ್ತು ಲಾಭಗಳನ್ನು ತಿಳಿಯುವಂತೆ ಮಾಡಬೇಕು.

೫. ಸ್ವ ಉದ್ಯೋಗ ನಡೆಸುವ ಆಯಾ ಪ್ರದೇಶದಲ್ಲಿ ಉದ್ಯೋಗಕ್ಕೆ ಬೇಕಾದ ಕಚ್ಚಾವಸ್ತುಗಳ ದೊರಕುವಿಕೆಗೆ ಬೇಕಾದ ವ್ಯವಸ್ಥೆಯನ್ನು ಮಾಡಬೇಕು. ಕ್ಲಪ್ತ ಸಮಯಕ್ಕೆ ಕಚ್ಚಾವಸ್ತುಗಳು ದೊರೆತರೆ ಕೆಲಸವು ಸರಿಯಾದ ಸಮಯಕ್ಕೆ ಆಗುತ್ತದೆ.

೬. ಕಡಿಮೆ ಶಿಕ್ಷಣ ಪಡೆದವರಿಗೆ ಸರಕುಗಳ ಬಗ್ಗೆ ಹಾಗೂ ಅದರ ಮೇಲೆ ಬರೆದ ಮಾಹಿತಿಯನ್ನು ತಿಳಿಸವ ತರಬೇತಿಯನ್ನು ಹಮ್ಮಿಕೊಳ್ಳಬೇಕು.

೭. ಉದ್ಯೋಗದ ಅಭಿವೃದ್ಧಿಗೋಸ್ಕರ ಹೆಚ್ಚಿನ ಕೌಶಲ್ಯಭರಿತ ತರಬೇತಿಗೆ ಬೇಕಾದ ವ್ಯವಸ್ಥೆಯನ್ನು ಮಾಡಬೇಕು.

೮. ಉದ್ಯೋಗ ನಡೆಸಲು ಅನುಮತಿಯು ಅಗತ್ಯವಾದುದರಿಂದ ಉದ್ಯೋಗ ನೋಂದಾವಣೆಯ ಬಗ್ಗೆ ಸ್ವ ಉದ್ಯೋಗಿಗಳಿಗೆ ಮಾಹಿತಿ ನೀಡಬೇಕು.

೯. ಗ್ರಾಹಕರ ಸಂಖ್ಯೆಯು ಹೆಚ್ಚಾಗಬೇಕಾದರೆ ಅವರಿಗೆ ಕೊಡುವ ಸೇವೆಯು ಉತ್ತಮವಾಗಿರಬೇಕು ಹಾಗೂ ಅವರು ಬಯಸುವ ಸೇವೆಯು ಅವರಿಗೆ ಲಭಿಸುವಂತೆ ನೋಡಿಕೊಳ್ಳಬೇಕು.

೧೦. ಜಾತಿ ಸಂಬಂಧಿ ಕಟ್ಟುಪಾಡುಗಳಿದ್ದಾಗ ಸ್ವ ಉದ್ಯೋಗವು ಹೆಚ್ಚು ಸಹಾಯಕಾರಿ. ಬೇರೆ ಉದ್ಯೋಗಗಳಲ್ಲಿ ಉದ್ಯೋಗದಾತನಿಂದ ಕಿರುಕುಳ, ಲೈಂಗಿಕ ದೌರ್ಜನ್ಯವಾಗಬಹುದು ಆದರೆ ಸ್ವ ಉದ್ಯೋಗದಲ್ಲಿ ಅಂತಹ

ಸಂದರ್ಭಗಳು ಕಡಿಮೆಯಾದುದರಿಂದ ಸ್ವ ಉದ್ಯೋಗಕ್ಕೆ ಮಹಿಳೆಯರಿಗೆ ಅನುಮತಿ, ಸಹಾಯ ಮತ್ತು ಪ್ರೋತ್ಸಾಹ ನೀಡಬೇಕು.

೧೧. ಮಹಿಳಾ ಉದ್ಯೋಗದಿಂದ ಕುಟುಂಬಕ್ಕೆ ಆರ್ಥಿಕ ಸಹಾಯವಾಗುವುದರಿಂದ ಕುಟುಂಬದ ನಿರ್ಧಾರಗಳಲ್ಲಿ ಅವಳನ್ನು ಪಾಲ್ಗೊಳ್ಳುವಂತೆ ಮಾಡಬೇಕು.

ಸ್ವ ಉದ್ಯೋಗದಿಂದ ಬರುವ ಲಾಭಾಂಶವನ್ನು ಹೆಚ್ಚು ಮಾಡಲು ಬೇಕಾದ ಮಾಹಿತಿಯನ್ನು ನೀಡಬೇಕು.

ಅನುಬಂಧ–೧

ಗ್ರಂಥ ಪರಾಮರ್ಶನ

೧. ಗ್ರಂಥಗಳು

೧. ಆಂಜನಪ್ಪ ಬಿ.ಹೆಚ್, ಮಹಿಳೆ ಮತ್ತು ದುಡಿಮೆ, ಬೆಂಗಳೂರು: ಸೃಷ್ಟಿ ಪಬ್ಲಿಕೇಷನ್ಸ್, ೨೦೦೬.

೨. ಭಟ್ ಮನೋರಮಾ ಎಂ, *ಹೆಣ್ಣಿಗೇಕೆ ಈ ಶಿಕ್ಷೆ?*, ನಾಗರಿಕ ಸೇವಾ ಟ್ರಸ್ಟ್ ಮತ್ತು ಕರಾವಳಿ ಮಹಿಳಾ ಜಾಗೃತಿ ವೇದಿಕೆ, ೨೦೦೪.

೩. ಭವ್ಯ ಹೆಚ್.ಪಿ, *ಮಹಿಳಾ ಸ್ವ ಸಹಾಯ ಸಂಘಗಳು ಮತ್ತು ಆರ್ಥಿಕ ಸಬಲೀಕರಣ*, ಮೈಸೂರು: ತಾರಾ ಪ್ರಿಂಟಿಂಗ್ ಆ್ಯಂಡ್ ಪಬ್ಲಿಷಿಂಗ್ ಹೌಸ್, ೨೦೧೩.

೪. ಹೆಗ್ಗಡೆ ಒಡೆಯರ್ ಡಿ., *ಮಹಿಳಾ ಅಧ್ಯಯನಗಳು*, ಬೆಂಗಳೂರು: ಸಿ.ಪಿ. ಇನ್ನೋವೇಷನ್ಸ್, ೨೦೧೧.

೫. ಜಯಶೀಲ, ಮೇಗಲಮನಿ ಶೌಕತ್ ಆಲಿ ಎಂ ಮತ್ತು ಎಸ್. ಸುಧಾಕರ, *ಮಹಿಳೆ ಮತ್ತು ಅಭಿವೃದ್ಧಿ*, ಕಿಸಾನ್ ಪಬ್ಲಿಕೇಷನ್ಸ್, ೨೦೦೭.

೬. ಕಾಂಬಳೆ ಉತ್ತಮ ಅ, *ಗ್ರಾಮೀಣ ಮಹಿಳೆಯರ ಸಾಮಾಜಿಕ ಆರ್ಥಿಕ ಹಿನ್ನೆಲೆ*, ಬೆಂಗಳೂರು: ಸಚಿನ್ ಪಬ್ಲಿಷರ್ಸ್, ೨೦೧೧.

೭. ನೇಮಿಚಂದ್ರ, *ಹೋರಾಟದ ಹಾದಿಯಲ್ಲಿ ಧೀಮಂತ ಮಹಿಳೆಯರು*, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ೨೦೧೫.

೮. ನೇಮಿಚಂದ್ರ, *ಮಹಿಳಾ ಅಧ್ಯಯನ*, ಬೆಂಗಳೂರು: ಅಂಕಿತ ಪುಸ್ತಕ, ೨೦೦೧.

೯. ಪೂಜಾರಿ ಚಂದ್ರ ಎಂ, *ಸಂಶೋಧನೆ ಏನು? ಏಕೆ? ಹೇಗೆ?*, ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೦೯.

೧೦. ಪೂಜಾರಿ ಚಂದ್ರ ಎಂ, *ಸಂಶೋಧಕರು ಮತ್ತು ಕ್ಷೇತ್ರಕಾರ್ಯ*, ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೦೫.

೧೧. ಪೂಜಾರಿ ಚಂದ್ರ ಎಂ, *ಸಮಾಜ ಸಂಶೋಧನೆ*, ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೦೫.

೧೨. ಪೂಜಾರಿ ಚಂದ್ರ ಎಂ, *ಸಂಶೋಧನಾ ಪ್ರಸ್ತಾವ*, ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೦೮.

೧೩. ಪೂಜಾರಿ ಚಂದ್ರ ಎಂ, *ಸಂಶೋಧನಾ ಜವಾಬ್ದಾರಿ*, ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೦೮.

೧೪. ಪುರುಷೋತ್ತಮ ಕೆ.ವಿ, *ಗೃಹತ್ಯಾಜ್ಯ ನಿರ್ವಹಣೆ ಪ್ರಾಮುಖ್ಯತೆ ಮತ್ತು ಸಮಸ್ಯೆಗಳು*, ಮಂಗಳೂರು: ಪೊಂಪೈ ಕಾಲೇಜು, ೨೦೧೪.

೧೫. ರಾಜಪ್ಪಾಜಿ ಎಂ ಮತ್ತು ನಾಗರಾಜು ಎಸ್, *ಮಹಿಳಾ ಸಬಲೀಕರಣದ ವಿವಿಧ ಹೆಜ್ಜೆಗಳು*, ಕೊಳ್ಳೇಗಾಲ: ಸಂದೀಪ್ ಪ್ರಕಾಶನ, ೨೦೧೦.

೧೬. ರಾಚಪ್ಪಾಜಿ ಎಂ, *ಮಹಿಳಾ ಸಬಲೀಕರಣ ಮತ್ತು ರಾಜಕೀಯ ಪ್ರಾತಿನಿಧಿತ್ವ*, ಮೈಸೂರು: ವಾಣಿ ಪ್ರಕಾಶನ, ೨೦೧೧.

೧೭. ರೈ ವಿವೇಕ ಬಿ.ಎ ಮತ್ತು ಇತರರರು, *ಮಂಗಳೂರು ದರ್ಶನ*, ಮಂಗಳೂರು: ಕಮೀಷನರ್ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ೨೦೧೦.

೧೮. ರಾವ್ ಅಡ್ಡೂರು ಕೃಷ್ಣ ಮತ್ತು ಇತರರು, *ಕೀರ್ತಿ ಟ್ರಾವೆಲ್ ಗೈಡ್, ಮಂಗಳೂರು: ಕೀರ್ತಿ ಪಬ್ಲಿಕೇಷನ್ಸ್, ೨೦೦೭*

೧೯. ರತ್ನಮ್ಮ ಕೆ. ಎಸ್. ಮತ್ತು ಸ.ನ ಗಾಯತ್ರಿ , *ಮಹಿಳಾ ಮೀಸಲಾತಿ*, ಮೈಸೂರು: ಈಶ್ವರಿ ಪ್ರಕಾಶನ, ೨೦೦೫. ಶಿವಚಿತ್ತಪ್ಪ ಕೆ, ಮಹಿಳಾಭಿವೃದ್ಧಿಯ ಆಯಾಮಗಳು, ಮೈಸೂರು: ಜ್ಞಾನೋದಯ ಪಬ್ಲಿಕೇಷನ್ಸ್, ೨೦೧೧.

೨೦. ಶ್ರೀಮತಿ ಎಚ್. ಎಸ್, *ಆಧುನಿಕ ಭಾರತದಲ್ಲಿ ಮಹಿಳೆ*, ಹಂಪಿ: ಪ್ರಸಾರಾಂಗ ಪ್ರಕಟಣ ವಿಭಾಗ, ೨೦೦೧.

೨೧. ಶ್ರೀಮತಿ ಎಚ್ ಎಸ್, ಶಿವಾನಂದ ಎಸ್. ಮತ್ತು ಕೃಷ್ಣ ಜೆ, *ಮಹಿಳಾ ಆರ್ಥಿಕತೆ*, ಹಂಪಿ: ಶ್ರೀಮತಿ ಎಚ್ ಎಸ್ ಪ್ರಕಾಶನ, ೨೦೦೭.

೨೨. ವೆಂಕೋಬರಾವ್ ಡಿ, *ನ್ಯಾಯಕ್ಕಾಗಿ ಮಹಿಳೆಯರ ಹೋರಾಟ*, ಬೆಂಗಳೂರು: ದಿವ್ಯಚಂದ್ರ ಪ್ರಕಾಶನ, ೨೦೦೦.

೨೩. ವೆಂಕಟೇಶ್ ಸಿ.ಡಿ, *ಮಹಿಳಾ ಅಧ್ಯಯನದ ನೆಲೆಗಳು*, ಬೆಂಗಳೂರು: ಶ್ರೀ ಶಿರಡಿ ಸಾಯಿ ಎಂಟರ್ ಪ್ರೈಸಸ್, ೨೦೧೦.

೨. ನಿಯತಕಾಲಿಕೆಗಳು

೧. ಅಪ್ಪರಾಯ ಶೇಖರ, "ವುಮೆನ್ ಆ್ಯಂಡ್ ಸೆಲ್ಫ್ ಎಂಪ್ಲೊಯ್ಮೆಂಟ್: ಒಪೊರ್ಚುನಿಟಿಸ್ ಆ್ಯಂಡ್ ಚಾಲೆಂಜಸ್", *ಸಮಾಜಶಾಸ್ತ್ರ*, ಸಂಪುಟ ೪, ಸಂಚಿಕೆ ೫. ಮೇ ೨೦೧೫

೨. ಪಾಲನೀಸ್ವರಿ ಟಿ, "ಎಂಪವರ್‌ಮೆಂಟ್ ಆಫ್ ರೂರಲ್ ವುಮೆನ್ ತ್ರೂ ಸೆಲ್ಫ್ ಎಂಪ್ಲೊಯ್ಮೆಂಟ್", ಸಂಪುಟ ೨, ಸಂಚಿಕೆ ೬, ೨೦೧೨.

೩. ಪಾಂಡ ಪ್ರದೀಪ್ ಕುಮಾರ್, "ಪಾವರ್ಟಿ ಆ್ಯಂಡ್ ಯಂಗ್ ವುಮೆನ್ಸ್ ಎಂಪ್ಲೊಯ್‌ಮೆಂಟ್", ಇಕನೋಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ಸಂಪುಟ ೩೮, ಸಂಖ್ಯೆ ೩೮ ೨೦ ಸಪ್ಟೆಂಬರ್ ೨೦೦೩.

೪. ಸರವನನ್ ವೆಲಯುಧಮ್ "ವುಮೆನ್ಸ್ ಎಂಪ್ಲೊಯ್‌ಮೆಂಟ್ ಆ್ಯಂಡ್ ರಿಡಕ್ಷನ್ ಆಫ್ ಚೈಲ್ಡ್ ಲೇಬರ್", ಇಕನೋಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ಸಂಪುಟ ೩೭, ಸಂಖ್ಯೆ ೫೨, ೨೮ ಡಿಸೆಂಬರ್ ೨೦೦೨.

೫. ಶ್ರೀವಾಸ್ತವ ಎನ್ ಮತ್ತು ಶ್ರೀವಾಸ್ತವ ಆರ್, "ವುಮೆನ್ಸ್, ವರ್ಕ್ ಆ್ಯಂಡ್ ಎಂಪ್ಲೊಯ್ಮೆಂಟ್ ಔಟ್ಕಂಮ್ಸ್ ಇನ್ ರೂರಲ್ ಇಂಡಿಯಾ", ಇಕನೋಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ೪೫, ಸಂಖ್ಯೆ ೨೮, ೧೦ ಜುಲೈ ೨೦೧೦.

೩.ವರದಿಗಳು

೧. ಜಾರ್ಜೆಲ್ಲಿಸ್ ಯನ್ನಿಸ್ ಮತ್ತು ಹೋವರ್ಡ್, *"ಜೆಂಡರ್ ಡಿಫರೆನ್ಸಸ್ ಇನ್ ಸೆಲ್ಫ್ ಎಂಪ್ಲೊಯ್‌ಮೆಂಟ್"*, ೨೦೦೪.

೨. ಮಂಗಳೂರು: ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ವರದಿ "ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ", ಪುಟ ಸಂಖ್ಯೆ ೭೩, ೨೦೦೬-೦೭

೩. ರುಸ್ತಗಿ ಪ್ರೀತ್ *"ಎಂಪ್ಲೊಯ್‌ಮೆಂಟ್ ಟ್ರೆಂಡ್ಸ್ ಫೊರ್ ವುಮೆನ್ಸ್ ಇನ್ ಇಂಡಿಯಾ"*, ೨೦೧೦.

೪.ಅಂತರ್ಜಾಲ ತಾಣಗಳು

೧. http://shodhganga.inflibnet.ac.in/bitstream/10603/7286/7/08_chapter 2.pdf

೨. http://www.mangaloretoday.com/main/women-rsquo-s-self-help-groups-launch-exhibition-in-city.html

೩. http://www.quora.com/why-did-India-have-a-near-12-literacy-rate-at-the-time-of-independence

೪. http://www.sewa.org/about-us.asp

೫. http://kn.wikipedia.org/wiki/ಮಂಗಳೂರು

೬. www.dk.nic.in

೭. http://en.m.wikipedia.org/wiki/welfare_schemes_for_women_in_india

೮. http://www.wcd.nic.in

୯. http://www.sociologyguide.com
୧୦. http://indiacelebrating.com

ಸ್ವ ಉದ್ಯೋಗಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳು: ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ವ್ಯಾಪ್ತಿಯಲ್ಲಿ ಒಂದು ಅಧ್ಯಯನ

ಪ್ರಶ್ನಾವಳಿ

ಭಾಗ ೧: ವೈಯಕ್ತಿಕ ಮತ್ತು ಕೌಟುಂಬಿಕ ವಿವರಗಳು

೧.೧ ಹೆಸರು:

೧.೨ ಉದ್ಯೋಗ:

೧.೩ ಉದ್ಯೋಗ ಸ್ಥಳ:

೧.೪ ವಯಸ್ಸು: ಅ)೩೦ಕ್ಕಿಂತಕಡಿಮೆ ಆ) ೩೦ ರಿಂದ ೫೦ ಇ)೫೦ಕ್ಕಿಂತ ಮೇಲ್ಪಟ್ಟು

೧.೫ ವೈವಾಹಿಕ ಸ್ಥಿತಿ: ಅವಿವಾಹಿತೆ/ ವಿವಾಹಿತೆ/ ವಿಧವೆ/ ವಿಚ್ಛೇದಿತೆ

೧.೬ ಮಕ್ಕಳ ಸಂಖ್ಯೆ: ಅ) ೧ ಮಗು ಆ) ೨ ಮಕ್ಕಳು ಇ) ೩ ಮಕ್ಕಳು ಈ) ೪ ಮಕ್ಕಳಿಗಿಂತ ಮೇಲ್ಪಟ್ಟು

೧.೭ ಧರ್ಮ: ಹಿಂದೂ/ ಮುಸ್ಲಿಂ/ ಕ್ರಿಶ್ಚಿಯನ್/ ಇತರ

೧.೮ ಶಿಕ್ಷಣ: ಅನಕ್ಷರಸ್ಥೆ/ ಪ್ರಾಥಮಿಕ/ ಪ್ರೌಢಶಿಕ್ಷಣ/ ಪದವಿಪೂರ್ವ/ ಪದವಿ/ಸ್ನಾತಕೋತ್ತರ

೧.೯ ವಿಶೇಷ ಪರಿಣತಿ ಕ್ಷೇತ್ರ:

೧.೧೦ ಕುಟುಂಬದ ವಾರ್ಷಿಕ ಆದಾಯ:

ಅ) ೧ ಲಕ್ಷಕ್ಕಿಂತ ಕಡಿಮೆ ಆ) ೧–೩ ಲಕ್ಷ ಇ) ೩–೫ಲಕ್ಷದವರೆಗೆ ಈ) ೫ ಲಕ್ಷಕ್ಕಿಂತ ಮೇಲ್ಪಟ್ಟು

ಭಾಗ ೨: ಸ್ವ ಉದ್ಯೋಗಿಗಳ ಪ್ರತಿಕ್ರಿಯೆ

ಸಾಮಾಜಿಕ ಅಂಶಗಳು

೨.೧. ಸ್ವ ಉದ್ಯೋಗವನ್ನು ಆಯ್ಕೆ ಮಾಡಲು ಕಾರಣ?

ಅ) ಶೈಕ್ಷಣಿಕ ಅರ್ಹತೆಯಿದ್ದ ಕಾರಣ ಆ) ಕುಟುಂಬದ ಸದಸ್ಯರ ಆಯ್ಕೆ ಇ) ಹಣಕಾಸಿನ ನೆರವಿದ್ದ ಕಾರಣ

ಈ) ಸೂಕ್ತ ತರಬೇತಿ ದೊರಕುವ ಕಾರಣ ಉ) ಇತರೆ

೨.೨. ಸ್ವ ಉದ್ಯೋಗವನ್ನು ನೀವು ಎಲ್ಲಿ ಮಾಡುತ್ತಿದ್ದೀರಿ?

ಅ)ಮನೆಯಲ್ಲಿ ಆ)ಸ್ವಂತ ವಾಣಿಜ್ಯ ಕಟ್ಟಡ ಇ)ಬಾಡಿಗೆ ಕಟ್ಟಡ ಈ)ನಿರ್ದಿಷ್ಟ ಜಾಗವಿಲ್ಲ

೨.೩. ನಿಮ್ಮ ಮನೆಗೆ ರಸ್ತೆ ಸಂಪರ್ಕ ಇದೆಯೇ? ಹೌದು ☐ ಇಲ್ಲ ☐

೨.೪. ನಿಮ್ಮ ವಾಸಸ್ಥಳಕ್ಕೆ ಮತ್ತು ಸ್ವ ಉದ್ಯೋಗ ನಡೆಸುವ ಸ್ಥಳಕ್ಕೂ ಇರುವ ದೂರ ಎಷ್ಟು?

ಅ) ೧ ಕಿ.ಮೀ ಆ) ೧–೫ಕಿ.ಮೀ ಇ) ೫–೧೦ಕಿ.ಮೀ ಈ) ೧೦ ಕಿ.ಮೀಗಿಂತ ಜಾಸ್ತಿ

೨.೫. ನೀವು ಉದ್ಯೋಗ ಮಾಡುತ್ತಿರುವ ಸ್ಥಳ ಯಾವ ವ್ಯಾಪ್ತಿಯಲ್ಲಿದೆ?

ಅ)ಗ್ರಾಮೀಣ ಆ)ನಗರ

೨.೬. ಸ್ವ ಉದ್ಯೋಗವನ್ನು ಮಾಡಲು ನಿಮಗೆ ಯಾರಾದರೂ ಸಹಾಯ ಮಾಡಿದ್ದಾರೆಯೇ? ಹೌದು ☐ ಇಲ್ಲ ☐

೨.೭. ಹೌದಾದರೆ ಯಾರು?

ಅ)ಪೋಷಕರು ಆ)ಗಂಡ ಇ)ಸಂಬಂಧಿಕರು ಈ)ಮಕ್ಕಳು ಉ)ಇತರರು

೨.೮. ನೀವು ಎಷ್ಟು ವರ್ಷದಿಂದ ಈ ವಲಯದಲ್ಲಿ ದುಡಿಯುತ್ತಿದ್ದೀರಿ?

ಅ) ಒಂದಕ್ಕಿಂತ ಕಡಿಮೆ ಆ) ೧–೩ ವರ್ಷ ಇ) ೩–೫ ವರ್ಷ ಈ) ೫ಕ್ಕಿಂತ ಹೆಚ್ಚು

೨.೯. ನಿಮ್ಮ ಕೆಲಸದ ಅವಧಿ?

ಅ) ಪೂರ್ಣಕಾಲಿಕ ಆ) ತಮ್ಮ ಬಿಡುವಿನ ಸಮಯ ಇ) ರಾತ್ರಿ ಸಮಯ ಈ) ಹಗಲು

೨.೧೦. ನೀವು ಸ್ವ ಉದ್ಯೋಗಿಗಳಾಗಲು ನಿಮ್ಮ ಜಾತಿ ನಿಮಗೆ ಅಡ್ಡ ಬಂದಿದೆಯೇ? ಹೌದು ☐ ಇಲ್ಲ ☐

೨.೧೧. ನೀವು ದುಡಿಮೆಗಾರರಾಗುವುದನ್ನು ಯಾರಾದರೂ ವಿರೋಧಿಸಿದ್ದಾರೆಯೇ? ಹೌದು ☐ ಇಲ್ಲ ☐

೨.೧೨. ಹೌದಾದರೆ ಯಾರು?

ಅ)ಪೋಷಕರು ಆ)ಗಂಡ ಇ)ಸಂಬಂಧಿಕರು ಈ)ಮಕ್ಕಳು ಉ)ಇತರರು

೨.೧೩. ನಿಮ್ಮ ಕುಟುಂಬದ ಜವಾಬ್ದಾರಿಯನ್ನು ನೀವೇ ನಿರ್ವಹಿಸುತ್ತಿದ್ದೀರಾ? ಹೌದು ☐ ಇಲ್ಲ ☐

೨.೧೪. ಮನೆಯಲ್ಲಿ ಮಹತ್ವದ ತೀರ್ಮಾನ ತೆಗೆದುಕೊಳ್ಳಬೇಕಾದರೆ ನಿಮ್ಮ ಕುಟುಂಬದ ಸದಸ್ಯರು ನಿಮ್ಮ ಸಲಹೆಯನ್ನು ಕೇಳುತ್ತಾರೆಯೇ?

ಅ)ಇಲ್ಲ ಆ)ಕೆಲವು ಸಂದರ್ಭಗಳಲ್ಲಿ ಇ)ಯಾವಾಗಲೂ ಈ) ಹೆಚ್ಚಿನ ಸಂದರ್ಭಗಳಲ್ಲಿ

೨.೧೫. ನೀವು ಇನ್ನೊಂದು ವ್ಯವಹಾರದ ಉದ್ಯೋಗಿಯಾಗಿ ಕೆಲಸ ಮಾಡಿಕೊಂಡಿರುವಾಗಲೇ ಸ್ವ ಉದ್ಯೋಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದೀರಾ? ಹೌದು ☐ ಇಲ್ಲ ☐

೨.೧೬. ನೀವು ಸ್ವ ಉದ್ಯೋಗ ನಡೆಸುವ ಸ್ಥಳದಲ್ಲಿ ನಿಮಗೆ ಯಾವುದೇ ರೀತಿಯ ಸಾರ್ವಜನಿಕ ದೌರ್ಜನ್ಯವಾಗುತ್ತಿದೆಯೇ?

ಅ)ಕೆಲವೊಂದು ಸಲ ಆ) ಯಾವಾಗಲೂ ಇ) ಹೆಚ್ಚಾಗಿ ಈ)ಇಲ್ಲ

೨.೧೭. ಕೆಲಸ ಮಾಡುವಲ್ಲಿ ಗ್ರಾಹಕರಿಂದ ನಿಮಗೆ ಸಿಗುವ ಪ್ರತಿಕ್ರಿಯೆ ಯಾವ ತರಹದ್ದು?

ಅ) ಕಿರುಕುಳ ಆ) ಸಂಪೂರ್ಣ ಸಹಕಾರ ಇ) ಸಾರ್ವಜನಿಕ ಸಂಪರ್ಕ ಈ) ಕೃತಜ್ಞತಾ ಭಾವನೆ

೨.೧೮. ನೀವು ಮಹಿಳಾ ಸ್ವ ಉದ್ಯೋಗಿ ಸಂಘ ಸಂಸ್ಥೆಯಲ್ಲಿದ್ದೀರಾ? ಹೌದು ☐ ಇಲ್ಲ ☐

೨.೧೯. ಇದ್ದಲ್ಲಿ ನೀವು ಸಂಘದಲ್ಲಿ ಹೊಂದಿರುವ ಹುದ್ದೆ ಯಾವುದು?

ಅ) ಅಧ್ಯಕ್ಷೆ ಆ) ಉಪಾಧ್ಯಕ್ಷೆ ಇ) ಕಾರ್ಯದರ್ಶಿ ಈ) ಸದಸ್ಯೆ ಉ) ಇತರ

೨.೨೦. ಉದ್ಯೋಗ ನಡೆಸಲು ಬೇಕಾಗುವಷ್ಟು ಸ್ಥಳಾವಕಾಶವಿದೆಯೇ? ಹೌದು ☐ ಇಲ್ಲ ☐

೨.೨೧. ನೀವು ಸೇವೆ ಸಲ್ಲಿಸುವ ಕ್ಷೇತ್ರ ನಿಮಗೆ ತೃಪ್ತಿ ನೀಡಿದೆಯೇ?

ಅ) ಉನ್ನತ ಮಟ್ಟದಲ್ಲಿ ಆ) ಸ್ವಲ್ಪ ಮಟ್ಟಿಗೆ ಇ) ಸಮಾಧಾನವಿದೆ ಈ) ಸಮಾಧಾನವಿಲ್ಲ

೨.೨೨. ನಿಮ್ಮ ಉದ್ಯೋಗಕ್ಕೆ ಸ್ಪರ್ಧೆಯಿದ್ದರೆ ಅದು ಯಾರಿಂದ?

ಅ) ಸ್ಥಳೀಯ ಮಟ್ಟದಿಂದ ಆ) ರಾಷ್ಟ್ರ ಮಟ್ಟದಿಂದ ಇ) ಅಂತರಾಷ್ಟ್ರೀಯ ಮಟ್ಟದಿಂದ ಈ) ಇತರ

೨.೨೩. ನಿಮಗೆ ಉದ್ಯೋಗಕ್ಕೆ ಬೇಕಾದ ತರಬೇತಿ ದೊರಕುತ್ತಿದೆಯೇ? ಹೌದು ☐ ಇಲ್ಲ ☐

೨.೨೪. ಹೌದಾದರೆ ಯಾರಿಂದ?

ಅ)ಸರಕಾರದಿಂದ ಆ) ಸರಕಾರೇತರ ಇ)ಸಂಘ ಸಂಸ್ಥೆಗಳಿಂದ ಈ) ಶಿಕ್ಷಣ ಸಂಸ್ಥೆಗಳಿಂದ

೨.೨೫. ನಿಮ್ಮ ಉದ್ಯೋಗದ ಅಭಿವೃದ್ಧಿಗೋಸ್ಕರ ಹೆಚ್ಚಿನ ಕೌಶಲ್ಯಭರಿತ ತರಬೇತಿಯನ್ನು ಬಯಸುತ್ತೀರಾ ?

ಹೌದು ☐ ಇಲ್ಲ ☐

೨.೨೬. ದೀರ್ಘಾವಧಿಗೆ ಸ್ವ ಉದ್ಯೋಗವನ್ನು ಮುಂದುವರಿಸಲು ನೀವು ಸಿದ್ಧರಿದ್ದೀರಾ? ಹೌದು ☐ ಇಲ್ಲ ☐

ರಾಜಕೀಯ ಅಂಶಗಳು

೨.೨೭. ಸರಕು ಮತ್ತು ಸೇವಾ ತೆರಿಗೆ(GST) ನಿಮ್ಮ ಉದ್ಯೋಗಕ್ಕೆ ಪರಿಣಾಮ ಬೀರಿದ್ದರೆ ಅದು ಯಾವ ರೀತಿ?

ಅ) ಅನುಕೂಲವಾಗಿದೆ ಆ) ಅನಾನುಕೂಲವಾಗಿದೆ ಇ) ಸ್ವಲ್ಪ ಅನುಕೂಲವಾಗಿದೆ ಈ)ಪರಿಣಾಮ ಬೀರಿಲ್ಲ

೨.೨೮. ನೀವು ನಿಮ್ಮ ಉದ್ಯೋಗವನ್ನು ನೋಂದಾಯಿಸಿಕೊಂಡಿದ್ದೀರಾ? ಹೌದು ☐ ಇಲ್ಲ ☐

೨.೨೯. ಸ್ಥಳೀಯ ಸರಕಾರದಿಂದ ನಿಮ್ಮ ಉದ್ಯೋಗ ನೋಂದಾವಣೆಗೆ ತೊಂದರೆಯಾಗಿದೆಯೇ?

ಅ) ತೊಂದರೆಯಾಗಿಲ್ಲ ಆ) ಸ್ವಲ್ಪ ತೊಂದರೆಯಾಗಿದೆ ಇ) ಹೆಚ್ಚಿನ ತೊಂದರೆಯಾಗಿದೆ

೨.೩೦. ನಿಮ್ಮ ಉದ್ಯಮಕ್ಕೆ ಸರಕಾರದಿಂದ ಯಾವುದಾದರೂ ಸವಲತ್ತುಗಳು ದೊರಕಿದೆಯೇ? ಹೌದು ☐ ಇಲ್ಲ ☐

೨.೩೧. ಹೌದಾದರೆ ಯಾವ ಸವಲತ್ತುಗಳು?

ಅ) ಸಾಲ ಆ) ಸಹಾಯಧನ ಇ) ತರಬೇತಿ ಈ) ಕಡಿಮೆ ಬಡ್ಡಿದರ ಉ)ಇತರ

ಆರ್ಥಿಕ ಅಂಶಗಳು

೨.೩೨. ನಿಮ್ಮ ಕುಟುಂಬವು ಸ್ವಂತ ಮನೆಯನ್ನು ಹೊಂದಿದೆಯೇ? ಹೌದು ☐ ಇಲ್ಲ ☐

೨.೩೩. ನಿಮ್ಮ ಮನೆಗೆ ವಿದ್ಯುಚ್ಛಕ್ತಿ ಸಂಪರ್ಕ ಇದೆಯೇ? ಹೌದು ☐ ಇಲ್ಲ ☐

೨.೩೪. ನಿಮ್ಮ ಮನೆಯು ಶೌಚಾಲಯದ ವ್ಯವಸ್ಥೆಯನ್ನು ಹೊಂದಿದೆಯೇ? ಹೌದು ☐ ಇಲ್ಲ ☐

೨.೩೫. ನೀವು ಸ್ವ ಉದ್ಯೋಗಕ್ಕಾಗಿ ಸಾಲ ತೆಗೆದುಕೊಂಡಿದ್ದೀರಾ? ಹೌದು ☐ ಇಲ್ಲ ☐

೨.೩೬. ನೀವು ಯಾರಿಂದ ಹಣವನ್ನು ಸಾಲವಾಗಿ ಪಡೆದಿದ್ದೀರಿ?

ಅ) ಬ್ಯಾಂಕ್ ಮತ್ತು ಸಹಕಾರಿ ಸಂಘಗಳಿಂದ ಆ) ಬಂಧು-ಮಿತ್ರರಿಂದ ಇ) ಸ್ವಯಂಸೇವಾ ಸಂಸ್ಥೆಗಳಿಂದ ಈ) ಸ್ವ ಸಹಾಯ ಗುಂಪುಗಳಿಂದ

೨.೩೭. ಸಾಲ ತೆಗೆದುಕೊಂಡಿದ್ದರೆ ಎಷ್ಟು?

ಅ) ೧–೫ ಲಕ್ಷ ಆ) ೫–೧೦ ಲಕ್ಷ ಇ)೧೦–೨೦ ಲಕ್ಷ ಈ) ೨೦ ಲಕ್ಷಕ್ಕಿಂತ ಮೇಲ್ಪಟ್ಟು.

೨.೩೮. ಸಾಲದ ಬಡ್ಡಿದರ ಎಷ್ಟು?

ಅ) ಶೇ.೪ ಕ್ಕಿಂತ ಕಡಿಮೆ ಆ) ಶೇ.೪–ಶೇ.೮ ಇ) ಶೇ.೮–ಶೇ.೧೨ ಈ) ಶೇ.೧೨ ಕ್ಕಿಂತ ಮೇಲ್ಪಟ್ಟು

೨.೩೯. ಕುಟುಂಬ ನಿರ್ವಹಣೆಗೆ ನಿಮ್ಮ ದುಡಿಮೆ ಅನಿವಾರ್ಯವೇ?

ಅ) ಸಂಪೂರ್ಣ ಆ) ಸ್ವಲ್ಪ ಇ) ಹೆಚ್ಚಾಗಿ ಈ) ಇಲ್ಲ

೨.೪೦. ಉದ್ಯಮದಲ್ಲಿ ನೀವು ಗಳಿಸುವ ಲಾಭಾಂಶ ಎಷ್ಟು?

ಅ) ಶೇ.೫೦ಕ್ಕಿಂತ ಹೆಚ್ಚು ಆ) ಶೇ.೨೫–೫೦ ಇ) ಶೇ.೨೫ಕ್ಕಿಂತ ಕಡಿಮೆ ಈ) ಲಾಭಾಂಶ ಇಲ್ಲ

೨.೪೧. ನಿಮ್ಮ ಉದ್ಯೋಗಕ್ಕೆ ಸಂಬಂಧಿಸಿದಂತೆ ಜಾಹೀರಾತಿನ ಅಗತ್ಯವಿದೆಯೇ? ಹೌದು ☐ ಇಲ್ಲ ☐

೨.೪೨. ಅಗತ್ಯವಿದ್ದರೆ ಅದಕ್ಕೆ ತಗಲುವ ವಾರ್ಷಿಕ ವೆಚ್ಚ :

ಅ) ೧೦ ಸಾವಿರಕ್ಕಿಂತ ಕಡಿಮೆ ಆ) ೧೦–೫೦ ಸಾವಿರ ಇ)೫೦ಸಾವಿರ–೧ಲಕ್ಷ ಈ)೧ ಲಕ್ಷಕ್ಕಿಂತ ಮೇಲ್ಪಟ್ಟು

೨.೪೩. ನಿಮ್ಮ ಉದ್ಯೋಗಕ್ಕೆ ಸಂಬಂಧಿಸಿದಂತೆ ಮಾರುಕಟ್ಟೆಯ ಸಮಸ್ಯೆಯಿದೆಯೇ? ಹೌದು ☐ ಇಲ್ಲ ☐

೨.೪೪. ನೀವು ಉದ್ಯಮ ಕೈಗೊಂಡ ನಂತರ ನಿಮ್ಮ ಆರ್ಥಿಕ ಪರಿಸ್ಥಿತಿ?

ಅ) ಉತ್ತಮ ಆ) ಅತ್ಯುತ್ತಮ ಇ) ಸಾಧಾರಣ ಈ) ಕೆಳಮಟ್ಟ

೨.೪೫. ನಿಮ್ಮ ಆದಾಯದ ಇತರ ಮೂಲಗಳು

ಅ)ಇಲ್ಲ ಆ) ಕೃಷಿ ಇ) ಸರಕಾರಿ ಯೋಜನೆಗಳಿಂದ ಈ)ಇತರ